ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 1 | ಡಿಸೆಂಬರ್ 28, 2020 – ಜನವರಿ 3, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಜಾನುವಾರು ಹತ್ಯಾ ನಿಷೇಧ ಕಾರ್ಪೊರೇಟ್ ಲೂಟಿಯ ವಿಸ್ತರಣೆ



ಮಹಾಡ್ ಕೆರೆಯಲ್ಲಿ ಎದ್ದ ಅಲೆಗಳು...



ಅಬ್ ಕಿ ಬಾರ್ ವಿದಾಯದ ಕೊಡುಗೆ!





ವಿಸ್ಟ್ರಾನ್: ಕಾರ್ಮಿಕ ಗುಲಾಮಗಿರಿಯ ಹೊಸ ಮಾಡೆಲ್



ರೈತರ ಚಾರಿತ್ರಿಕ ಹೋರಾಟಕ್ಕೆ ನಿರಂತರ ಧರಣಿ ಬೆಂಬಲ

ಜನಗಳ ಹೋರಾಟಗಳ ವಿರುದ್ಧ ಕೇಂದ್ರ ಸರಕಾರದ ಸುಳ್ಳುಗಳ ಅಬ್ಬರ ತೀವ್ರ ಪ್ರತಿ–ಪ್ರಚಾರ ನಡೆಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ದೇಶದಲ್ಲಿ ಈಗ ನಡೆಯುತ್ತಿರುವ ಜನಗಳ ಹೋರಾಟಗಳ ಬಗ್ಗೆ ಕೇಂದ್ರ ಸರಕಾರ ಸುಳ್ಳುಮಾಹಿತಿಗಳ ಅಬ್ಬರವನ್ನೇ ಹರಿಯಬಿಟ್ಟಿದೆ. ಇದರ ವಿರುದ್ಧ ಒಂದು ತೀವ್ರವಾದ ಪ್ರಚಾರ–ಪ್ರಕ್ಷೋಭೆ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ. ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿ ರೈತರು ನಡೆಸುತ್ತಿರುವ ಹೋರಾಟಗಳೊಂದಿಗೆ ಸೌಹಾರ್ದ ಕಾರ್ಯಾಚರಣೆಗಳನ್ನು ಸಂಘಟಿಸಬೇಕು ಮತ್ತು ಕಾರ್ಮಿಕ ವರ್ಗ ವ್ಯಾಪಕ ಪ್ರಮಾಣದ ಖಾಸಗೀಕರಣ, ಕಾರ್ಮಿಕ ಕಾನೂನುಗಳ ರದ್ದತಿ ಮತ್ತು ಭಾರತದ ರಾಷ್ಟ್ರೀಯ ಆಸ್ತಿಗಳ ಲೂಟಿಯ ವಿರುದ್ದ ನಡೆಸುತ್ತಿರುವ ಕಾರ್ಯಾಚರಣೆಗಳನ್ನು ಬೆಂಬಲಿಸಬೇಕು ಎಂದು ಅದು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಡಿಸೆಂಬರ್ 19 ರಂದು ನಡೆದ ಪೊಲಿಟ್‌ಬ್ಯುರೊದ ಆನ್‌ಲೈನ್ ಸಭೆ ಈ ಕರೆಗಳನ್ನು ನೀಡಿದೆ:

ಕೇರಳ ವಿಜಯಕ್ಕೆ ಪ್ರಶಂಸೆ

ಕೇರಳದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಎಲ್.ಡಿ.ಎಫ್. ವಿಜಯವನ್ನು ಪೊಲಿಟ್‌ಬ್ಯುರೊ ಪ್ರಶಂಸಿಸಿದೆ. ಕೇರಳದ ಜನತೆ ಮತ್ತೊಮ್ಮೆ ಎಲ್.ಡಿ.ಎಫ್.ನಲ್ಲಿ ತಮ್ಮ ವಿಶ್ವಾಸವನ್ನು ವ್ಯಕ್ತಗೊಳಿಸಿರುವುದಕ್ಕೆ ಅವರನ್ನು ಅದು ಅಭಿನಂದಿಸಿದೆ.

ಎಲ್.ಡಿ.ಎಫ್. 14 ಜಿಲ್ಲಾಪಂಚಾಯತುಗಳಲ್ಲಿ 11ರಲ್ಲಿ ಗೆದ್ದಿದೆ. 2015ರಲ್ಲಿ ಅದು 7ರಲ್ಲಿ ಗೆದ್ದಿತ್ತು. ಆರು ಮಹಾನಗರಪಾಲಿಕೆಗಳಲ್ಲಿ ಐದರಲ್ಲಿ ಗೆದ್ದಿದೆ, 2015ರಲ್ಲಿ 4ರಲ್ಲಿ ಗೆದ್ದಿತು. ಎಲ್ಲ ಮಟ್ಟಗಳಲ್ಲೂ ಎಲ್.ಡಿ.ಎಫ್. ಫಲಿತಾಂಶ ಉತ್ತಮಗೊಂಡಿದೆ.

ರೈತರ ಹೋರಾಟ

ಬೃಹತ್ ರೈತ ಹೋರಾಟ ಪ್ರತಿಗಾಮಿ ಕೃಷಿ ಕಾಯ್ದೆಗಳನ್ನು ಮತ್ತು ವಿದ್ಯುತ್(ತಿದ್ದುಪಡಿ) ಮಸೂದೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ನಡೆಸಿರುವ ಹೋರಾಟವನ್ನು ಕೆಚ್ಚಿನಿಂದ ಮತ್ತು ದೃಢನಿರ್ಧಾರದಿಂದ ಮುಂದುವರೆಸುತ್ತಿದೆ ಎನ್ನುತ್ತ ಇದರಲ್ಲಿ 500ಕ್ಕೂ ಹೆಚ್ಚು ಸಂಘಟನೆಗಳ ಐಕ್ಯತೆಯನ್ನು ಪೊಲಿಟ್‌ಬ್ಯುರೊ ಪ್ರಶಂಸಿಸಿದೆ.

ಸಿಪಿಐ(ಎಂ) ಈ ಹೋರಾಟಕ್ಕೆ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸುತ್ತದೆ ಎನ್ನುತ್ತ ಪೊಲಿಟ್‌ಬ್ಯುರೊ, ಭಾರತೀಯ ಕೃಷಿ ಮತ್ತು ಅನ್ನದಾತರ ರಕ್ಷಣೆಯ ಈ ಭವ್ಯ ಹೋರಾಟಕ್ಕೆ ಬೆಂಬಲವಾಗಿ ಸೌಹಾರ್ದ ಕಾರ್ಯಾಚರಣೆಗಳನ್ನು ಸಂಘಟಿಸಬೇಕು ಎಂದು ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಈ ಹೋರಾಟ 25ನೇ ದಿನವನ್ನು ಪ್ರವೇಶಿಸಿದೆ. ಈ ಹೋರಾಟದಲ್ಲಿ 31 ರೈತರು ಹುತಾತ್ಮರಾಗಿದ್ದಾರೆ. ಅವರಿಗೆ ಧೀರ ನಮನ ಸಲ್ಲಿಸಿರುವ ಪೊಲಿಟ್‌ಬ್ಯುರೊ, ಉತ್ತರ ಭಾರತದಲ್ಲಿ ತೀಕ್ಷ್ಣವಾದ ಚಳಿಗಾಳಿ ಬೀಸುತ್ತಿದ್ದರೂ, ಹೆಚ್ಚೆಚ್ಚು ರೈತರು ಈ ಹೋರಾಟವನ್ನು ಇನ್ನಷ್ಟು ಬಲಗೊಳಿಸಲು ಸಾಗಿ ಬರುತ್ತಿದ್ದಾರೆ ಎಂದು ಹೇಳಿದೆ.

ಕೇಂದ್ರ ಸರಕಾರ ಈ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು, ನಂತರ ರೈತರು ಮತ್ತು ಇತರ ಭಾಗೀದಾರರೊಂದಿಗೆ ಕರ್ಷಕ ಸುಧಾರಣೆಗಳ ಬಗ್ಗೆ ಚರ್ಚೆಗೆ ಕುಳಿತುಕೊಳ್ಳಬೇಕು ಎಂಬ ಸಿಪಿಐ(ಎಂ) ಆಗ್ರಹವನ್ನು ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ಬೆನ್ನು ಮುರಿಯುವ ಬೆಲೆಯೇರಿಕೆ

ಮಹಾಸೋಂಕು, ಅಯೋಜಿತ ಮತ್ತು ಸಿದ್ಧತೆಗಳಿಲ್ಲದ ಲಾಕ್‌ಡೌನ್‌ಗಳು ಜನರ ಜೀವ ಮತ್ತು ಜೀವನೋಪಾಯಗಳ ಮೇಲೆ ಅಭೂತಪೂರ್ವ ಸಂಕಟಗಳನ್ನು ಹೇರಿದ ಮೇಲೆ ಬಂದಿರುವ ಬೆನ್ನು ಮುರಿಯುವ ಬೆಲೆಯೇರಿಕೆಗಳು ಜನಗಳ ಪರಿಸ್ಥಿತಿಗಳನ್ನು ಇನ್ನಷ್ಟು ಹದಗೆಡಿಸುತ್ತಿವೆ.

ಪೆಟ್ರೋಲಿಯಂ ಉತ್ಪನ್ನಗಳ, ಪೆಟ್ರೋಲಿನ ಮತ್ತು ಡೀಸೆಲಿನ ಬೆಲೆಗಳನ್ನು ಸತತವಾಗಿ ಏರಿಸಲಾಗುತ್ತಿದೆ. . ಇದು ಸಾಗಾಣಿಕೆ ವೆಚ್ಚಗಳನ್ನು ಹೆಚ್ಚಿಸಿ ಹಣದುಬ್ಬರದ ಸುರುಳಿಯನ್ನು ಮೇಲಕ್ಕೆ ಒತ್ತುತ್ತದೆ. ಭಾರತ ಇಂದು ಜಗತ್ತಿನಲ್ಲೇ ಪೆಟ್ರೋಲಿಯಂ ಉತ್ಪನ್ನಗಳಿಗೆ ಅತಿ ಹೆಚ್ಚು ತೆರಿಗೆ ವಿಧಿಸಿರುವ ದೇಶವಾಗಿದೆ. ಕೇಂದ್ರ ಸರಕಾರ ಜನಗಳ ಸಂಕಟಗಳನ್ನು ಹೆಚ್ಚಿಸುವ ಮೂಲಕವೇ ಸಂಪನ್ಮೂಲಗಳನ್ನು ಗಿಟ್ಟಿಸಿಕೊಳ್ಳುತ್ತಿದೆ.

ಈ ಏರಿಕೆಗಳ ಮೇಲೆ ಈಗ ಅಡುಗೆ ಅನಿಲ ಸಿಲಿಂಡರುಗಳ ಬೆಲೆಗಳನ್ನೂ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ನವಂಬರ್ ಮತ್ತು ಡಿಸೆಂಬರ್ 2020ರ ನಡುವೆ ಒಂದು ಅನಿಲ ಸಿಲಿಂಡರಿನ ವೆಚ್ಚ 100ರೂ.ಗಳಷ್ಟು ಏರಿಸಿದೆ.

ಮಹಾಸೋಂಕಿನ ಮೊದಲಿನ ಆರ್ಥಿಕ ನಿಧಾನಗತಿ ಹೇರಿದ ಸಂಕಟಗಳು ಈ ವರ್ಷ ಮತ್ತಷ್ಟು ಹದಗೆಟ್ಟಿವೆ. ಪ್ರಧಾನ ಮಂತ್ರಿ ಮೋದಿ ಮತ್ತು ಸರಕಾರಕ್ಕೆ ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಮತ್ತು ಸಂಕಟಗಳನ್ನು ಹೇರುವ ಬಗ್ಗೆ ಏನೇನೂ ಕಾಳಜಿಯೇ ಇಲ್ಲದಂತೆ ಕಾಣುತ್ತಿದೆ ಎಂದು ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಹೌಹಾರುವಂತೆ ಮಾಡಿರುವ ಹಸಿವು ಮತ್ತು ಏರುತ್ತಲೇ ಇರುವ ಉದ್ಯೋಗ ನಷ್ಟಗಳು

ಇತ್ತೀಚಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ ಅಪೌಷ್ಟಿಕತೆಯಲ್ಲಿ, ನಿರ್ದಿಷ್ಟವಾಗಿ ಭಾರತದ ಭವಿಷ್ಯವಾದ ನಮ್ಮ ಮಕ್ಕಳ ನಡುವೆ ಅಪೌಷ್ಟಿಕತೆ ಬೆಚ್ಚಿಬಿಳಿಸುವ ರೀತಿಯಲ್ಲಿ ಏರಿದೆ ಎಂಬುದನ್ನು ತೋರಿಸುತ್ತಿದೆ. ಇದು ನಮ್ಮ ಜನಗಳ ಆರೋಗ್ಯವನ್ನು ನಾಶಪಡಿಸುತ್ತಿರುವ ಹಸಿವಿನ ಎಚ್ಚರಿಕೆಯ ಸಂಕೇತಗಳನ್ನು ಕೊಡುತ್ತಿದೆ.

ಈ ರೀತಿ ಹಸಿವು ತೀವ್ರವಾಗಿ ಹೆಚ್ಚುತ್ತಿದ್ದರೂ, ಉದ್ಯೋಗನಷ್ಟ ವಿಪರೀತವಾಗಿ ಏರುತ್ತಿದ್ದರೂ ಪ್ರಧಾನ ಮಂತ್ರಿ ಮತ್ತು ಕೇಂದ್ರ ಸರಕಾರ ಅಗತ್ಯವಿರುವ ಜನಗಳಿಗೆ ನಗದು ವರ್ಗಾವಣೆ ಮತ್ತು ಉಚಿತ ಆಹಾರವನ್ನು ಒದಗಿಸಲು ನಿರಾಕರಿಸುತ್ತಿದೆ. ಎಫ್‌ಸಿಐ ಗೋದಾಮುಗಳಲ್ಲಿ 10 ಕೋಟಿ ಟನ್‌ಗಳಿಗಿಂತಲೂ ಹೆಚ್ಚು ಆಹಾರಧಾನ್ಯಗಳು ಕೊಳೆಯುತ್ತಿವೆಯಾದರೂ, ಸರಕಾರ ಉಚಿತ ಆಹಾರವನ್ನು ವಿತರಿಸಲು ನಿರಾಕರಿಸುತ್ತಿದೆ.

ತಕ್ಷಣವೇ ತಿಂಗಳಿಗೆ 7500 ರೂ.ನಂತೆ ಆರು ತಿಂಗಳು ನಗದು ವರ್ಗಾವಣೆ ಮತ್ತು ಮುಂದಿನ ಆರು ತಿಂಗಳ ಕಾಲ ಪ್ರತಿವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ.ಯಂತೆ ಆಹಾರಧಾನ್ಯಗಳನ್ನು ವಿತರಿಸಬೇಕು ಎಂಬ ಪಕ್ಷದ ಬೇಡಿಕೆಯನ್ನು ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ಸೆಂಟ್ರಲ್ ವಿಸ್ತಾ ಪರಿಯೋಜನೆ

ಲಭ್ಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ನಮ್ಮ ಜನಗಳಿಗೆ ಉಣಿಸುವ ಬದಲು, ಮತ್ತು ಜೀವನೋಪಾಯದ ಸಾಧನವನ್ನು ಕಲ್ಪಿಸಿಕೊಡುವ ಬದಲು, ಈ ಕೇಂದ್ರ ಸರಕಾರ ಹೊಸ ಕಟ್ಟಡಗಳನ್ನು ಕಟ್ಟಲು, ಒಂದು ಹೊಸ ಸಂಸತ್ತು ಸೇರಿದಂತೆ ದಿಲ್ಲಿಯ ಕೇಂದ್ರ ಪರಿದೃಶ್ಯ(ಸೆಂಟ್ರಲ್ ವಿಸ್ತಾ) ಪರಿಯೋಜನೆಗೆ ದೇಶದ ಸಂಪನ್ಮೂಲಗಳ ದುಂದುವೆಚ್ಚಕ್ಕೆ ಇಳಿದಿದೆ. ಮಹಾಸೋಂಕು ಮತ್ತು ಜನಗಳ ಹೆಚ್ಚುತ್ತಿರುವ ನೋವುಗಳ ನಡುವೆ, ಪ್ರಧಾನ ಮಂತ್ರಿಗಳು ಹೊಸ ಸಂಸತ್ತಿನ ನಿರ್ಮಾಣದ ಅಡಿಗಲ್ಲು ಹಾಕಿದ್ದಾರೆ.

ಈ ಸೆಂಟ್ರಲ್ ವಿಸ್ತಾ ಪರಿಯೋಜನೆಯನ್ನು ರದ್ದುಮಾಡಬೇಕು, ಇದಕ್ಕೆ ನೀಡುವ ಹಣವನ್ನು ನೋವು–ಸಂಕಟಗಳು ಆವರಿಸಿರುವ ಜನಗಳಿಗೆ ಉಚಿತ ಆಹಾರ ಮತ್ತು ನಗದು ವರ್ಗಾವಣೆ ಒದಗಿಸಲು ಬಳಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ.

ಸಂಸತ್ತಿನ ಚಳಿಗಾಲದ ಅಧಿವೇಶನದ ರದ್ದತಿ

ಸಂಸತ್ತಿನ ಚಳಿಗಾಲದ ಅಧಿವೇಶನವನ್ನು ಕೊವಿಡ್ ನೆಪವನ್ನು ಬಳಸಿಕೊಂಡು ರದ್ದುಪಡಿಸಿರುವ ಅಭೂತಪೂರ್ವ ಕ್ರಮವನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಬಿಜೆಪಿಗೆ ಚುನಾವಣಾ ಪ್ರಚಾರಗಳನ್ನು ಮತ್ತು ರ‍್ಯಾಲಿಗಳನ್ನು ಸಂಘಟಿಸಲು ಮಹಾಸೋಂಕಿನಿಂದ ಸಮಸ್ಯೆಯೇನೂ ಇಲ್ಲ, ಆದರೆ ಸಂಸತ್ತಿಗೆ ಉತ್ತರದಾಯಿ ಆಗುವುದರಿಂದ ತಪ್ಪಿಸಿಕೊಳ್ಳಲು ಇದನ್ನು ಆರಿಸಿಕೊಂಡಿದೆ. ಈ ಮೂಲಕ ಅದು ಸಂಸತ್ತಿಗೆ ಜವಾಬುದಾರನಾಗಿರಬೇಕಾದ ಸಂವಿಧಾನಿಕ ಹೊಣೆಯನ್ನು ಕೈಬಿಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಒಂದೆಡೆಯಲ್ಲಿ ಆರ್ಥಿಕ ಹಿಂಜರಿತವನ್ನು ಮತ್ತು ಮಹಾಸೋಂಕನ್ನು ಪರಿಣಾಮಕಾರಿಯಾಗಿ ನಿಭಾಯಿಸುವಲ್ಲಿ ವಿಫಲತೆ ಮತ್ತು ಇನ್ನೊಂದೆಡೆಯಲ್ಲಿ ಜನಗಳ ಜೀವನೋಪಾಯಗಳ ಮೇಲೆ ನಿರ್ದಯ ದಾಳಿಗಳನ್ನು ನಡೆಸಿ ದುಡಿಯುವ ಜನಗಳ ಮತ್ತು ರೈತಾಪಿಗಳ ಹಕ್ಕುಗಳನ್ನು ಧ್ವಂಸ ಮಾಡಿರುವುದರ ಮೇಲೆ ಪ್ರಶ್ನೆಗಳಿಗೆ ಉತ್ತರಿಸುವುದನ್ನು ಮೋದಿ ಸರಕಾರ ತಪ್ಪಿಸಿಕೊಳ್ಳುತ್ತಿದೆ ಎಂಬುದು ಸ್ಪಷ್ಟವಾಗಿದೆ.

ವಿಸ್ಟ್ರಾನ್ ಕಾರ್ಮಿಕರ ಪ್ರತಿಭಟನೆ

ಬೆಂಗಳೂರಿನ ಬಳಿಯಿರುವ ವಿಸ್ಟ್ರಾನ್ ಕಂಪನಿಯ ಕಾರ್ಖಾನೆಯಲ್ಲಿ ಕಾರ್ಮಿಕರ ಪ್ರತಿಭಟನೆ ಮತ್ತು ಅಲ್ಲಿ ನಡೆದಿರುವ ಘಟನೆಯನ್ನು ಗಮನಿಸಿರುವ ಪೊಲಿಟ್‌ಬ್ಯುರೊ ಇದು ಕಾಂಟ್ರಾಕ್ಟ್ ಕಾರ್ಮಿಕರಿಗೆ ನಾಲ್ಕು ತಿಂಗಳ ಕಾಲ ಸಂಬಳಗಳನ್ನು ಕೊಡದಿರುವ ಮತ್ತು 12 ಗಂಟೆಗಳ ಕಾಲ ಓವರ್‌ಟೈಂ ತೆರದೆ ದುಡಿಸಿಕೊಳ್ಳುತಿರುವುದರ ಫಲಿತಾಂಶ ಎಂದು ಅಭಿಪ್ರಾಯ ಪಟ್ಟಿದೆ. ಈ ಬಹುರಾಷ್ಟ್ರೀಯ ಕಂಪನಿ ಆಪಲ್ ಕಾರ್ಪೊರೇಷನ್‌ನ ಐಫೋನ್‌ಗಳನ್ನು ಮಾಡುವ ಒಂದು ಕಾಂಟ್ರಾಕ್ಟ್ ಕಂಪನಿ ಅಗಿದೆ. ಈ ಕಾರ್ಖಾನೆಯಲ್ಲಿ ದುಡಿಯುತ್ತಿರುವ 10000 ಕಾರ್ಮಿಕರಲ್ಲಿ 80 ಶೇಕಡಾಕ್ಕೂ ಹೆಚ್ಚು ಪರ್ಮನೆಂಟ್ ಅಲ್ಲದ ಕಾಂಟ್ರಾಕ್ಟ್ ಕಾರ್ಮಿಕರು. ಈಗಿರುವ ಕಾರ್ಮಿಕ ಕಾನೂನುಗಳ ಇಂತಹ ಉಲ್ಲಂಘನೆಗಳು ಬಹುರಾಷ್ಟ್ರೀಯ ಕಂಪನಿಗಳ ಒಡೆತನದ ಉದ್ದಿಮೆಗಳಲ್ಲಿ ಸಾಮಾನ್ಯ ಸಂಗತಿ. ಹೊಸ ಕಾಮೂನು ಸಂಹಿತೆಗಳು ಜಾರಿಗೆ ಬಂದಾಗ, ಅದು ಕಾರ್ಮಿಕರ ಹಕ್ಕುಗಳ ಉಲ್ಲಂಘನೆಗೆ ಒಂದು ಬಹಿರಂಗ ಆಹ್ವಾನವೇ ಅಗುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸ್ವತಃ ಆಪಲ್ ಕಾರ್ಪೊರೇಷನ್ನೇ ತನ್ನ ಪೂರೈಕೆ ಕಂಪನಿ ವಿಧಿ–ವಿಧಾನಗಳನ್ನು ಉಲ್ಲಂಘಿಸಿದೆ ಎಂದು ಕಂಡಿರುವಾಗ ಕರ್ನಾಟಕದ ಮುಖ್ಯಮಂತ್ರಿಗಳು ಕಾರ್ಮಿಕರನ್ನು ಖಂಡಿಸಿರುವುದು ಮತ್ತು ಕಂಪನಿಯನ್ನು ಬೆಂಬಲಿಸಿರುವುದು ವಿಚಿತ್ರವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕಾರ್ಮಿಕರ ವ್ಯಾಪಕ ಬಂಧನಗಳು ಮತ್ತು ಪೊಲೀಸ್ ದಮನವನ್ನು ಖಂಡಿಸಿದೆ. ಮೋದಿ ಸರಕಾರ ದೇಶದೊಳಕ್ಕೆ ಎಫ್‌ಡಿಐನ್ನು ಆಕರ್ಷಿಸುವ ಆತುರದಲ್ಲಿ ಒಂದು ಕಾರ್ಮಿಕ–ವಿರೋಧಿ ನಿಲುವನ್ನು ತಳೆಯುವುದನ್ನು ನಿಲ್ಲಿಸಬೇಕು ಎಂದು ಹೇಳಿದೆ.

ಮುಂದಿನ ಕೇಂದ್ರ ಸಮಿತಿ ಸಭೆ

ಪಕ್ಷದ ಕೇಂದ್ರ ಸಮಿತಿಯ ಮುಂದಿನ ಸಭೆಯನ್ನು ಜನವರಿ 30–31 ರಂದು ಕರೆಯಲು ಪೊಲಿಟ್‌ಬ್ಯುರೊ ನಿರ್ಧರಿಸಿದೆ.

ಪ್ರಧಾನಿ ಆಧಾರಹೀನ ಆಪಾದನೆಗಳನ್ನು ನಿಲ್ಲಿಸಬೇಕು: ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು–ಹನ್ನೊಂದು ರಾಜಕೀಯ ಪಕ್ಷಗಳ ಮುಖಂಡರ ಆಗ್ರಹ

ಪ್ರಧಾನ ಮಂತ್ರಿ ಮೋದಿ ವಿಪಕ್ಷಗಳ ಮೇಲೆ ಅವು ಹೊಸ ಕೃಷಿ ಕಾಯ್ದೆಗಳ ಬಗ್ಗೆ ರೈತರಿಗೆ 'ಪದೇಪದೇ ಸುಳ್ಳು ಹೇಳುತ್ತಿವೆ' ಎಂದೂ, 'ಅವರನ್ನು ತಮ್ಮ ರಾಜಕೀಯಕ್ಕೆ ಬಳಸುತ್ತಿವೆ' ಎಂದೂ ಆಧಾರಹೀನ ಆಪಾದನೆ ಮಾಡುತ್ತಿದ್ದಾರೆ ಎಂದು ಹನ್ನೊಂದು ವಿಪಕ್ಷಗಳ ಮುಖಂಡರು ಹೇಳಿಕೆಯೊಂದರಲ್ಲಿ ಬಲವಾಗಿ ಖಂಡಿಸಿದ್ದಾರೆ. ಪ್ರಧಾನ ಮಂತ್ರಿಗಳ ಆರೋಪಗಳು ಸತ್ಯಕ್ಕೆ ಅಪಚಾರ ಬಗೆಯುತ್ತಿವೆ ಎಂದು ಅವರು ಹೇಳಿದ್ದಾರೆ.

ಈ ಹೇಳಿಕೆಗೆ ಸಹಿ ಮಾಡಿರುವ ಸೀತಾರಾಮ್ ಯೆಚುರಿ(ಸಿಪಿಐ(ಎಂ)), ರಾಹುಲ್ ಗಾಂಧಿ(ಕಾಂಗ್ರೆಸ್), ಶರದ್ ಪವಾರ್(ಎನ್‌ಸಿಪಿ), ಟಿ.ಆರ್.ಬಾಲು(ಡಿಎಂಕೆ), ಫಾರುಖ್ ಅಬ್ದುಲ್ಲ(ಜಮ್ಮು–ಕಾಶ್ಮೀರ ಪಿಎಜಿಡಿ), ತೇಜಸ್ವಿ ಯಾದವ್(ಆರ್‌ಜೆಡಿ), ಅಖಿಲೇಶ ಯಾದವ್(ಎಸ್‌ಪಿ), ಡಿ.ರಾಜ (ಸಿಪಿಐ), ದೀಪಂಕರ್ ಭಟ್ಟಾಚಾರ್ಯ(ಸಿಪಿಐ(ಎಂಎಲ್)), ದೇಬಬ್ರತ ಬಿಸ್ವಾಸ್((ಎಐಎಫ್‌ಬಿ) ಮತ್ತು ಮನೋಜ್ ಭಟ್ಟಾಚಾರ್ಯ(ಆರ್‌ಎಸ್‌ಪಿ) ಪ್ರತಿಭಟನೆ ನಡೆಸುತ್ತಿರುವ ರೈತರೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದ್ದಾರೆ. ಈ ಚಾರಿತ್ರಿಕ ಹೋರಾಟಕ್ಕೆ ದೇಶದ ವಿವಿಧ ಭಾಗಗಳ 500ಕ್ಕೂ ಹೆಚ್ಚು ರೈತ ಸಂಘಟನೆಗಳು 'ಸಂಯುಕ್ತ ಕಿಸಾನ್ ಮೋರ್ಚಾ'ದ ಬಾವುಟ ಅಡಿಯಲ್ಲಿ ಕರೆ ನೀಡಿದ್ದು, ವಿಪಕ್ಷಗಳಲ್ಲಿ ಹಲವು ಈ ಕೃಷಿ ಕಾಯ್ದೆಗಳನ್ನು ಸಂಸತ್ತಿನಲ್ಲಿ ಅವನ್ನು ಚರ್ಚೆಯಿಲ್ಲದೆ, ಅಥವ ಸರಿಯಾದ ಪರಿಶೀಲನೆ ಇಲ್ಲದೆ ಪಾಸು ಮಾಡಿಸಿಕೊಳ್ಳುವಾಗ ವಿರೋಧಿಸಿದ್ದವು, ಈ ಬಗ್ಗೆ ಮತವಿಭಜನೆಯಾಗಬೇಕು ಎಂದು ಆಗ್ರಹಿಸಿದ ಸಂಸತ್ ಸದಸ್ಯರನ್ನು ಅವಮಾನತುಗೊಳಿಸಲಾಯ್ತು ಎಂಬುದನ್ನು ಈ ಹೇಳಿಕೆ ನೆನಪಿಸಿದೆ.

ಅಸತ್ಯಗಳನ್ನು ಹರಡುತ್ತಿರುವವರು ಯಾರು?

ಪ್ರತಿಪಕ್ಷಗಳು ಹರಡುತ್ತಿದ್ದಾರೆ ಎನ್ನಲಾಗಿರುವ "ದೊಡ್ಡ ಸುಳ್ಳು"ಗಳಲ್ಲಿ 'ಕನಿಷ್ಟ ಬೆಂಬಲ ಬೆಲೆ'(ಎಂ.ಎಸ್.ಪಿ.) ಒಂದು. ಈ ವಿಷಯದಲ್ಲಿ ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಗೊಳಿಸಲಾಗಿದೆ ಎಂದು ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ. ಈ ವರದಿ ಸಿ2+50% ಎಂಎಸ್‌ಪಿಯನ್ನು ಶಿಫಾರಸು ಮಾಡಿದೆ. ಆದರೆ ಈ ಸರಕಾರ ಹೆಚ್ಚೆಂದರೆ ಎ2+50%ವನ್ನಷ್ಟೇ ಜಾರಿಗೊಳಿಸಿದೆ. ನಿಜ ಹೇಳಬೇಕೆಂದರೆ, ಈ ಸರಕಾರ ಸಿ2+50%ವನ್ನು ಜಾರಿಗೊಳಿಸಲು ತಾನು ಅಸಮರ್ಥ ಎಂದು ಸುಪ್ರಿಂ ಕೋರ್ಟಿಗೆ ಹೇಳಿದೆ. ಹೀಗಿರುವಾಗ ಅಸತ್ಯಗಳನ್ನು ಹರಡುತ್ತಿರುವವರು ಯಾರು ಎಂದು ವಿಪಕ್ಷಗಳ ಮುಖಂಡರು ಪ್ರಶ್ನಿಸಿದ್ದಾರೆ.

ಅದೇ ರೀತಿಯಲ್ಲಿ, "ಕಳೆದುಕೊಂಡಿರುವ ರಾಜಕೀಯ ಆಧಾರವನ್ನು ಮತ್ತೆ ಪಡೆಯಲು" ವಿಪಕ್ಷಗಳು "ರೈತರ ಹೆಗಲ ಮೇಲೆ ಬಂದೂಕನ್ನಿಟ್ಟು ಹೊಡೆಯುತ್ತಿದ್ದಾರೆ" ಎಂದು ಆರೋಪಿಸಲಾಗುತ್ತಿದೆ. ರೈತರ ಸಮೃದ್ಧಿ ಮಾಡಲಾಗುತ್ತಿದೆ, ಮತ್ತು ಉನ್ನತ ಎಂಎಸ್‌ಪಿ ಜಾರಿ ಮಾಡಲಾಗುತ್ತಿದೆ ಎಂಬ ಸರಕಾರದ ದಾವೆಗಳು ಏನೇ ಇದ್ದರೂ, ಸಾಲದ ಹೊರೆಯಿಂದ ರೈತರ ಹತಾಶೆಗಳು ಬೆಳೆಯುತ್ತಿವೆ, ಅವರಲ್ಲಿ ಹಲವರು ಹತಾಶೆಯಿಂದ ಆತ್ಮಹತ್ಯೆಗಳಿಗೆ ಇಳಿಯುತ್ತಿದ್ದಾರೆ ಎಂಬುದು ನಿಜಸಂಗತಿ ಎಂದು ಈ ಮುಖಂಡರು ಹೇಳಿದ್ದಾರೆ.

ದಿಲ್ಲಿಯ ಸುತ್ತಮುತ್ತಲಿನ ಲಕ್ಷಾಂತರ ರೈತರು ತೀವ್ರ ಚಳಿಯಲ್ಲೂ ಶಾಂತಿಯುತವಾಗಿ ಐಕ್ಯತೆಯನ್ನು, ಗಟ್ಟಿತನವನ್ನು, ದೃಢನಿರ್ಧಾರವನ್ನು ತೋರಿಸುತ್ತಿದ್ದಾರೆ. ವಿವಿಧ ಸ್ಥಳಗಳಿಂದ ಹತ್ತಾರು ಸಾವಿರ ಮಂದಿ ಈಗ ಪ್ರತಿಭಟನೆಗಳಲ್ಲಿ ಸೇರಿಕೊಳ್ಳಲು ದಿಲ್ಲಿಗೆ ಬರುತ್ತಿರುವುದು, ದೇಶಾದ್ಯಂತ ರೈತರು ಈ ಕೃಷಿ ಕಾಯ್ದೆಗಳ ವಿರುದ್ಧ ಎದ್ದು ನಿಂತಿದ್ದಾರೆ ಎಂಬ ಸಂಗತಿಗೆ ಸಾಕ್ಷಿ. ಈಗಾಗಲೇ 32 ರೈತರು ತಮ್ಮ ಪ್ರಾಣ ಕಳಕೊಂಡಿದ್ದಾರೆ.

"ಪ್ರಸ್ತುತ ಕೃಷಿ ಕಾಯ್ದೆಗಳನ್ನು, ಅದರೊಂದಿಗೆ ವಿದ್ಯುತ್(ತಿದ್ದುಪಡಿ) ಮಸೂದೆ 2020ನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸುತ್ತಿದ್ದೇವೆ. ಇದನ್ನು ಅನುಸರಿಸಿ ಕೃಷಿ ಸುಧಾರಣೆಗಳ ಮೇಲೆ ಚರ್ಚೆಗಳನ್ನು ಕೇಂದ್ರ ಸರಕಾರ ರೈತರು ಮತ್ತು ಇತರ ಎಲ್ಲ ಭಾಗೀದಾರರೊಂದಿಗೆ ನಡೆಸಬೇಕು. ಈ ಸಮಾಲೋಚನೆಗಳ ಆಧಾರದಲ್ಲಿ ಹೊಸ ವಿಧೇಯಕಗಳನ್ನು ಸಂಸತ್ತು, ಅಗತ್ಯವಿದ್ದರೆ, ಒಂದು ವಿಶೇಷ ಅಥವ ಜಂಟಿ ಅಧಿವೇಶನವನ್ನು ಕರೆದು ಪರಿಶೀಲಿಸಬಹುದು" ಎಂದು ಈ ಹನ್ನೊಂದು ಪಕ್ಷಗಳ ಮುಖಂಡರು ಹೇಳಿದ್ದಾರೆ.

ಸಂಪಾದಕೀಯ

ಕದಡುತ್ತಿದೆ ಕೈಗಾರಿಕಾ ಶಾಂತಿ

ರಾಮನಗರದ ಬಿಡದಿ ಕೈಗಾರಿಕಾ ಪ್ರದೇಶದ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ (TKM) ಕಾರ್ಖಾನೆ ಕಾರ್ಮಿಕರು ನವಂಬರ್ 9 ರಿಂದ ಉತ್ಪಾದನೆಯನ್ನು ನಿಲ್ಲಿಸಿ ಮುಷ್ಕರ ಮಾಡುತ್ತಿದ್ದಾರೆ. ಬಹುತೇಕ ಅಷ್ಟೇ ದಿನಗಳಿಂದ ಈ ಬಹುರಾಷ್ಟ್ರೀಯ ಕಂಪನಿಯ ಆಡಳಿತ ವರ್ಗ ಕಾರ್ಖಾನೆಗೆ ಬೀಗಮುದ್ರೆ ಘೋಷಿಸಿದೆ. ಕಂಪನಿಯ ಆಡಳಿತ ವರ್ಗ ಕಾರ್ಮಿಕ ಸಂಘಟನೆಯ ಪದಾಧಿಕಾರಿಗಳನ್ನು ಅಮಾನತುಗೊಳಿಸಿದ್ದರಿಂದ ಮುಷ್ಕರ ಆರಂಭವಾಯಿತು. ಇದುವರೆಗೆ ಅಮಾನತುಗೊಂಡ ಕಾರ್ಮಿಕರ ಸಂಖ್ಯೆ 66 ಕ್ಕೆ ಏರಿದೆ. ಕಾರ್ಮಿಕ ಇಲಾಖೆಯು ಈ ಕೈಗಾರಿಕಾ ವಿವಾದವನ್ನು ಇತ್ಯರ್ಥಗೊಳಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಅಮಾನತ್ತಾದ ಕಾರ್ಮಿಕರನ್ನು ಸೇವೆಗೆ ಹಿಂಪಡೆಯಲು ಆಡಳಿತ ವರ್ಗ ಸಮ್ಮತಿಸುತ್ತಿಲ್ಲ. ಈ ಬೇಡಿಕೆ ಈಡೇರದ ಹೊರತು ಕೆಲಸಕ್ಕೆ ಹಾಜರಾಗುವುದಿಲ್ಲ ಎಂದು ಕಾರ್ಮಿಕರು ಪಟ್ಟುಹಿಡಿದಿದ್ದಾರೆ.

ಬಿಡದಿ ಕೈಗಾರಿಕಾ ಪ್ರದೇಶದಲ್ಲಿ 200ಕ್ಕೂ ಹೆಚ್ಚು ಕಂಪನಿಗಳು ತಮ್ಮ ಉತ್ಪಾದನಾ ಘಟಕಗಳನ್ನು ಹೊಂದಿವೆ. ಆ ಪೈಕಿ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಕಂಪನಿಯೇ ಅತಿ ದೊಡ್ಡದು. 432 ಹೆಕ್ಟೇರ್ ವಿಸ್ತಾರವಾದ ಪ್ರದೇಶದಲ್ಲಿ ಹರಡಿಕೊಂಡಿರುವ ಈ ಕಾರ್ಖಾನೆಯಲ್ಲಿ ಇನೋವಾ, ಫಾರ್ಚುನರ್ ಅಂತಹ ದೊಡ್ಡ ಕಾರುಗಳನ್ನು ಜೋಡಣೆ ಮಾಡಲಾಗುತ್ತಿದೆ. ಇಲ್ಲಿ ಸುಮಾರು 20 ಸಾವಿರ ಕಾರ್ಮಿಕರು ಕೆಲಸಮಾಡುತ್ತಿದ್ದು ಅವರಲ್ಲಿ ಕೇವಲ 3500 ಮಂದಿ ಖಾಯಂ ಕೆಲಸಗಾರರು. ಉಳಿದವರು ಗುತ್ತಿಗೆ ಕಾರ್ಮಿಕರು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಕಾರ್ಮಿಕ ಸ್ನೇಹಿ ವಾತಾವರಣ ಇಲ್ಲಿಲ್ಲ. ವೇತನ ಪರಿಷ್ಕರಣೆ ಮುಂತಾದ ಬೇಡಿಕೆಗಳನ್ನು ಇಲ್ಲಿನ ಕಾರ್ಮಿಕರು ಮುಷ್ಕರ ಮಾಡಿಯೇ ಪಡೆಯಬೇಕಾಗುತ್ತದೆ. ತಮ್ಮ ಕೆಲವು ಬೇಡಿಕೆಗಳಿಗಾಗಿ ಕಾರ್ಮಿಕರು ಪ್ರತಿಭಟನೆ ನಡೆಸುತ್ತಿದ್ದಾಗ ಕಾರ್ಮಿಕರನ್ನು ಬೆದರಿಸುವ ತಂತ್ರವಾಗಿ ಹಳೆಯ ಕೆಲವು ಪ್ರಕರಣಗಳನ್ನು ಎತ್ತಿಕೊಂಡು ಆಡಳಿತ ವರ್ಗ ಹಲವರನ್ನು ಸೇವೆಯಿಂದ ವಜಾ ಮಾಡಿತು. ಸತತವಾಗಿ ಸೇವೆಗೆ ಗೈರಗುತ್ತಿರುವುದು ಮತ್ತು ದುರ್ನಡತೆಯ ಆರೋಪದ ಮೇಲೆ ಕಾರ್ಮಿಕರನ್ನು ವಜಾ ಮಾಡಲಾಗಿದೆ ಎಂದು ಆಡಳಿತ ವರ್ಗದ ವಾದವಾಗಿದೆ. ಯಡಿಯೂರಪ್ಪನವರ ಸರ್ಕಾರ ಯಥಾ ಪ್ರಕಾರ ಕಾರ್ಮಿಕರ ಪರ ನಿಲ್ಲದೆ ಮಾಲೀಕರನ್ನೇ ಸಮರ್ಥಿಸುತ್ತದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಸಾವಿರಾರು ಕಾರ್ಮಿಕ ಕುಟುಂಬಗಳು ಬೀದಿಪಾಲಾಗುವ ಆತಂಕವಿದೆ.

ಇನ್ನೊಂದು ಆತಂಕದಾಯಕ ಘಟನೆ ಕೋಲಾರದ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ವಿಸ್ಟ್ರಾನ್ ಐಫೋನ್ ತಯಾರಿಕಾ ಘಟಕದಲ್ಲಿ ನಡೆದಿದೆ. ಇಲ್ಲಿ ಸುಮಾರು 10 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದು ಅವರಲ್ಲಿ ಶೇಕಡ 80ರಷ್ಟು ಮಂದಿ ಗುತ್ತಿಗೆ ಕಾರ್ಮಿಕರು. ಇಲ್ಲಿ ತೈವಾನ್ ಮೂಲದ ಬಹುರಾಷ್ಟ್ರೀಯ ಕಂಪನಿಯ ಆಪಲ್ ಕಂಪನಿ ಗಾಗಿ ಐಫೋನ್ ಗಳು ತಯಾರಾಗುತ್ತಿದ್ದವು. ಆದರೆ ಈ ಪ್ರತಿಷ್ಠಿತ ವಿದೇಶಿ ಕಂಪನಿಯಲ್ಲಿ ಯಾವುದೇ ಕಾರ್ಮಿಕ ಕಾನೂನುಗಳು ಅನುಷ್ಠಾನದಲ್ಲಿ ಇರಲಿಲ್ಲ. ಗುತ್ತಿಗೆದಾರರು ನಾಲ್ಕೈದು ತಿಂಗಳುಗಳಿಂದ ಕಾರ್ಮಿಕರಿಗೆ ಸಂಬಳ ಕೊಟ್ಟಿರಲಿಲ್ಲ. ದಿನಕ್ಕೆ ಹನ್ನೆರಡು ಗಂಟೆಗಳ ಕಾಲ ದುಡಿಸಿಕೊಂಡು ಓವರ್ ಟೈಮ್ ವೇತನ ನೀಡುತ್ತಿಲ್ಲ. ಅನಾರೋಗ್ಯಕರ ಪರಿಸರದಲ್ಲಿ ದುಡಿಯ ಬೇಕಾಗುತ್ತಿತ್ತು. ಸಂಬಳದಲ್ಲಿ ಅಕ್ರಮ ಕಡಿತ ಮಾಡಿ ಪೀಡಿಸಲಾಗುತ್ತಿತ್ತು. ರಜೆ ಸಹ ಕೊಡುತ್ತಿರಲಿಲ್ಲ. ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ ಕಾರ್ಮಿಕರ ಶೋಷಣೆ ಮಾಡಲಾಗುತ್ತಿತ್ತು. ಮಾನವ ಸಂಪನ್ಮೂಲ ಇಲಾಖೆಯನ್ನು ಸರಿಯಾಗಿ ರೂಪಿಸಲಾಗಿಲ್ಲ. ಕಾರ್ಮಿಕರ ಗೋಳು ಕೇಳುವವರಿಲ್ಲ ಕಾರ್ಮಿಕರ ಆಕ್ರೋಶ ಸ್ಫೋಟಗೊಂಡ ಪರಿಣಾಮವಾಗಿ ಇದೇ ಡಿಸೆಂಬರ್ 12ರ ಬೆಳಗಿನ ಜಾವ ಏಕಾಏಕಿಯಾಗಿ ಬಾರೀ ಪ್ರಮಾಣದ ದಾಂಧಲೆ ನಡೆಯಿತು.

ಕೈಗೆ ಸಿಕ್ಕ ಪೀಠೋಪಕರಣಗಳನ್ನು, ಯಂತ್ರೋಪಕರಣಗಳನ್ನು ಧ್ವಂಸ ಗೊಳಿಸಲಾಯಿತು. ಕಂಪೆನಿ ಆವರಣದಲ್ಲಿದ್ದ ಎರಡು ವಾಹನಗಳಿಗೆ ಬೆಂಕಿ ಹಚ್ಚಲಾಯಿತು. ಕಲ್ಲು ತೂರಾಟ, ಬೆಂಕಿ ಹಚ್ಚಿದ್ದು ಮೊದಲಾದ ಅಹಿತಕರ ಘಟನೆಗಳಿಂದ ರೂ. 100 ಕೋಟಿಗೂ ಹೆಚ್ಚು ನಷ್ಟ ಸಂಭವಿಸಿದೆ ಎಂದು ಹೇಳಲಾಗುತ್ತದೆ. ಸ್ಥಳಕ್ಕೆ ಬಂದ ಪೊಲೀಸರು ಮನಬಂದಂತೆ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಿದ್ದಾರೆ. ಮಹಿಳಾ ಕಾರ್ಮಿಕರ ಮೇಲೆಯೂ ಲಾಠಿ ಪ್ರಯೋಗಿಸಿದ್ದಾರೆ. ಗಾಬರಿಯಾದ ಕಾರ್ಮಿಕರು ದಿಕ್ಕಾಪಾಲಾಗಿ ಓಡಾಡಿದಾಗ ನೂಕುನುಗ್ಗಲು ಉಂಟಾಗಿ ಹಲವರು ಗಾಯಗೊಂಡರು. ನೂರಾರು ಕಾರ್ಮಿಕರನ್ನು ಬಂಧಿಸಲಾಗಿದೆ.

ಕೋಲಾರದಲ್ಲಿ ಸಂಭವಿಸಿದ ಈ ಅಹಿತಕರ ಘಟನೆಯನ್ನು ಎಲ್ಲರೂ ಖಂಡಿಸುತ್ತಾರೆ. ಆದರೆ ಆ ಬಹುರಾಷ್ಟ್ರೀಯ ಕಂಪೆನಿಯಲ್ಲಿ ನಡೆಯುತ್ತಾ ಬಂದಿರುವ Unfair Labour Practices ಕುರಿತು ಸರ್ಕಾರವಾಗಲಿ, ಸಮಾಜವಾಗಲಿ ಆಕ್ಷೇಪ ಎತ್ತುತ್ತಿಲ್ಲ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಕಾರ್ಮಿಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಕೋಲಾರದ ಸಂಸದ ಮುನಿಸ್ವಾಮಿ ವಿದೇಶಿ ಕಂಪನಿಯ ಎಂಜಲಿಗೆ ಕೈಚಾಚಿದಂತೆ ಕಾಣುತ್ತದೆ. ಉಪಮುಖ್ಯಮಂತ್ರಿ ಅಶ್ವತ್ಥ ನಾರಾಯಣ ಕಾರ್ಮಿಕರಿಗೇ ಬೆದರಿಕೆ ಹಾಕಿದ್ದಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೊಂದ ಕಾರ್ಮಿಕರ ಪರ ನಿಲುವು ತೆಗೆದುಕೊಳ್ಳದೇ ವಿಸ್ಟ್ರಾನ್ ಕಂಪೆನಿಗೆ ಬೆಂಬಲ ಸೂಚಿಸಿದ್ದಾರೆ. ಗೃಹ ಸಚಿವ ಬಸವರಾಜ ಬೊಮ್ಮಾಯಿ ಯಥಾಪ್ರಕಾರ ಪೊಲೀಸ್ ಗಿರಿ ನಡೆಸಲು ಆದೇಶ ನೀಡಿದ್ದಾರೆ. ಇಂತಹ ಅಹಿತಕರ ಘಟನೆಗಳು ನಡೆಯುವುದನ್ನು ಬೆಂಬಲಿಸಕ್ಕಾಗದು ನಿಜ. ಆದರೂ ಹೊಟ್ಟೆಪಾಡಿಗಾಗಿ ಕೆಲಸಕ್ಕೆ ಸೇರಿ ದೇಶದ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರಿಗೆ ಸರ್ಕಾರ ಮತ್ತು ಸಮಾಜದ ರಕ್ಷಣೆ ಅಗತ್ಯವಾಗಿ ಬೇಕು. ಕಂಪೆನಿ ಕೆಲಸವನ್ನು ಅವಲಂಭಿಸಿರುವ ಕಾರ್ಮಿಕರು ಕಾರ್ಖಾನೆಯನ್ನು ಯಾಕೆ ಧ್ವಂಸ ಮಾಡಲು ಮುಂದಾಗುತ್ತಾರೆ?

ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವ ಮಾಲೀಕರಿಗೆ ಬೆಂಬಲ ನೀಡುವುದಾಗಲಿ, ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರವಾಗಿ ತಿದ್ದುಪಡಿ ಮಾಡುವ ಅಥವ ಬದಲಾಯಿಸುವ ಬಿಜೆಪಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡೆಯನ್ನು ಕಾರ್ಮಿಕರು ಸಹಜವಾಗಿ ವಿರೋಧಿಸುತ್ತಾರೆ. ಕಾರ್ಮಿಕ ಸ್ನೇಹಿ ವಾತಾವರಣದಲ್ಲಿ, ಕಾರ್ಮಿಕರ ಹಕ್ಕುಗಳ ರಕ್ಷಣೆಯ ಪರಿಸರದಲ್ಲಿ ಉತ್ಪಾದನೆ ಹೆಚ್ಚಾಗುತ್ತದೆಯೇ ಹೊರತು Hire and Fire ನೀತಿಯಲ್ಲಿ ಅಲ್ಲ. ಸರಕಾರಗಳು ಕೈಗಾರಿಕೋದ್ಯಮಿಗಳಿಗೆ ಮಾದರಿಯಾಗಿರಬೇಕು. ಸರ್ಕಾರವೇ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವುದನ್ನು ಸಹಿಸಲಾಗಿದಿತೆ?

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ನಡುವೆ ಕುದಿಯುತ್ತಿರುವ ಅಸಮಾಧಾನ ಇತ್ತೀಚೆಗೆ ದಿಡೀರನೆ ಸ್ಫೋಟಗೊಂಡದ್ದನ್ನು ನೋಡಿದ್ದೇವೆ. ಅಧಿಕಾರಿಗಳ ಕಿರುಕುಳವನ್ನು ಸಹಿಸಲಾಗದೆ ನೌಕರರು ತಮ್ಮನ್ನು ಸರ್ಕಾರಿ ನೌಕರರು ಎಂದು ಪರಿಗಣಿಸುವಂತೆ ಆಗ್ರಹಿಸಿ ಬಸ್ ಬಂದ್ ಮಾಡಿ ಪಟ್ಟು ಹಿಡಿದರು. ಎಸ್ಮಾ ಜಾರಿ ಮಾಡುವ ಬೆದರಿಕೆ ಹಾಕಲಾಯಿತು. ಖಾಸಗಿ ವಾಹನಗಳ ವ್ಯವಸ್ಥೆ ಮಾಡಲಾಯಿತು. ಕೊನೆಗೆ, ಕಾರ್ಮಿಕ ಸಂಘಟನೆಗಳೊಂದಿಗೆ ಹಲವು ಸುತ್ತುಗಳ ಮಾತುಕತೆಗಳ ನಂತರ ನೌಕರರ 10 ಬೇಡಿಕೆಗಳಲ್ಲಿ ಒಂಬತ್ತನ್ನು ಸರ್ಕಾರ ಒಪ್ಪುವ ಮೂಲಕ 5 ದಿನಗಳಿಂದ ನಡೆಸುತ್ತಿದ್ದ ಮುಷ್ಕರ ಅಂತ್ಯವಾಯಿತು. ಆದರೆ ಹಲವಾರು ಕಾರ್ಮಿಕರನ್ನು ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದು ಅಲ್ಲದೆ ವೇತನ ಕಡಿತದ ಶಿಕ್ಷೆಯನ್ನು ನೀಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರ ನೌಕರರು ನಡೆಸಿದ ಅನೇಕ ಹೋರಾಟಗಳ ಪರಿಣಾಮವಾಗಿ ಕೊನೆಗೂ ಕಾರ್ಮಿಕ ಇಲಾಖೆ ಅವರಿಗೆ ವಾರಕ್ಕೆ ಒಂದು ರಜೆ, ರಾಷ್ಟ್ರೀಯ ರಜೆಗಳು ಹಾಗೂ ಹಬ್ಬದ ದಿನಗಳ ರಜೆ ನೀಡುವ ನಿಟ್ಟಿನಲ್ಲಿ ಶೇ. 16 ರಷ್ಟು ಹೆಚ್ಚುವರಿ ಸಿಬ್ಬಂದಿ ನೇಮಿಸಿಕೊಳ್ಳುವಂತೆ ಸ್ಪಷ್ಟೀಕರಣ ನೀಡಿದೆ. ಇದೇ ರೀತಿ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ 'ಡಿ' ವರ್ಗದ ಸಾವಿರಾರು ನೌಕರರು ವಾರದ ರಜೆ ಇಲ್ಲದೆ, ಹಾಗೂ ಹಬ್ಬದ ರಜೆಗಳಿಲ್ಲದೆ ಪರದಾಡುತ್ತಿದ್ದಾರೆ. ಅವರ ನಡುವೆ ಹೊಗೆಯಾಡುತ್ತಿರುವ ಅತೃಪ್ತಿ ಮುಂದೆ ಒಂದು ದಿನ ಸ್ಫೋಟಗೊಳ್ಳದೆ ಇರಲಾರದು.

ಅರೆ ಸರ್ಕಾರಿ ನೌಕರರಾಗಿ ಆದರೆ ಸ್ಕೀಮ್ ವರ್ಕರ್ಸ್ ಎಂದು ಕರೆಯಲ್ಪಡುವ ಅಂಗನವಾಡಿ, ಅಕ್ಷರದಾಸೋಹ, ಆಶಾ ಮೊದಲಾದ ನೌಕರರು ಕನಿಷ್ಠ ವೇತನ ಇಲ್ಲದೆ, ಕಾನೂನು ಸೌಲಭ್ಯಗಳಿಂದ ವಂಚಿತರಾಗಿ ದುಡಿಯುತ್ತಿದ್ದಾರೆ. ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿರುವ 'ಡಿ' ವರ್ಗದ ನೌಕರರಿಗೆ ಕನಿಷ್ಠ ವೇತನ ನಿಗಧಿಯಾಗಿದ್ದರೂ, ಅವರು ಅದನ್ನು ಹೋರಾಟ ಮಾಡಿ ಪಡೆದಿದ್ದರೂ ಅದನ್ನು ಜಾರಿ ಮಾಡದೆ ಸತಾಯಿಸಲಾಗುತ್ತದೆ. ಈ ಎಲ್ಲ ಅರೆ ಸರ್ಕಾರಿ ಕಾರ್ಮಿಕರ ಬೃಹತ್ ಸೈನ್ಯದಲ್ಲಿ ಸ್ಫೋಟಕ ಪರಿಸ್ಥಿತಿ ಇದೆ. ಖಾಸಗಿ ರಂಗದಲ್ಲಿ ಗಾರ್ಮೆಂಟ್ ಮೊದಲಾದ ಕಾರ್ಖಾನೆಗಳಲ್ಲಿ ಅತ್ಯಂತ ಕಡಿಮೆ ವೇತನ ಪಡೆಯುತ್ತಾ ಹಲವು ಬಗೆಯ ಕಿರುಕುಳ ಅನುಭವಿಸುತ್ತಾ ದಿನದೂಡುತ್ತಿದ್ದಾರೆ. ಎಪಿಎಂಸಿ ಕಾಯ್ದೆ ತಿದ್ದುಪಡಿ ಮಾಡಲು ಸರ್ಕಾರ ನಿರ್ಧರಿಸಿರುವುದರಿಂದ ಕ್ರಮೇಣ ಎಪಿಎಂಸಿಗಳು ಬಂದ್ ಆಗಿ ಅಲ್ಲಿ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಆತಂಕಕ್ಕೆ ಒಳಗಾಗಿದ್ದಾರೆ. ಹೋರಾಟ ಅವರಿಗೆ ಅನಿವಾರ್ಯವಾಗಲಿದೆ. ಹೀಗೆ ಯಡಿಯೂರಪ್ಪನ ಆಡಳಿತದಲ್ಲಿ ಕಾರ್ಮಿಕರ ಅತೃಪ್ತಿ ತೀವ್ರಗೊಳುತ್ತಿದೆ. ಸ್ಫೋಟಗೊಳ್ಳುವ ಎಲ್ಲಾ ಸಾಧ್ಯತೆಗಳು ವ್ಯಕ್ತವಾಗುತ್ತಿವೆ. ಉದಾರೀಕರಣದ ನೀತಿಗಳನ್ನು ಅಪ್ಪಿಕೊಂಡಿರುವ ಬಿಜೆಪಿಗರಿಗೆ ಕಾರ್ಮಿಕರ ಸಂಕಟ ಅರ್ಥವಾಗುತ್ತಿಲ್ಲ. ಕಾರ್ಮಿಕ ಹೋರಾಟಗಾರರನ್ನು ಭಯೋತ್ಪಾದಕರಂದು ಬಿಂಬಿಸಲಾಗುತ್ತದೆ. ಸರ್ಕಾರದ ನೀತಿಗಳನ್ನು ಖಂಡಿಸುವವರನ್ನು ದೇಶ ದ್ರೋಹಿಗಳೆಂದು ಚಿತ್ರಿಸಲಾಗುತ್ತದೆ. ಕರ್ನಾಟಕದಲ್ಲಂತೂ ಕೈಗಾರಿಕಾ ಶಾಂತಿ ಕದಡುತ್ತಿದ್ದು ಕಾರ್ಮಿಕರು ನಡೆಸುವ ಹೋರಾಟಗಳಿಗೆ ಸಾರ್ವಜನಿಕರು ದೃಢವಾದ ಬೆಂಬಲ ನೀಡುವುದು ದೇಶಪ್ರೇಮಿ ಕರ್ತವ್ಯವಾಗಿದೆ.

ಅಲ್ಪಸಂಖ್ಯಾತರಿಗೆ ಸಮಾನತೆ ನೀಡಲು ಬಿ.ಜೆ.ಪಿ. ಸರ್ಕಾರ ತಯಾರಿಲ್ಲ

ದೇಶದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ ಶತಮಾನಗಳಿಂದ ಈ ನೆಲದಲ್ಲಿ ವಾಸವಿರುವ ಧಾರ್ಮಿಕ ಅಲ್ಪಸಂಖ್ಯಾತರಾದ ಮುಸ್ಲಿಂ–ಕ್ರೈಸ್ತರು–ಬೌದ್ಧರಿಗೆ ಸಮಾನ ಅವಕಾಶಗಳನ್ನು ನೀಡಲು ತಯಾರಿಲ್ಲ. ಅದು ಅಸಮಾನತೆ ಮತ್ತು ತಾರತಮ್ಯದಿಂದ ನಡೆಸಿಕೂಳ್ಳುತ್ತಿದೆ ಇದು ಭಾರತೀಯ ಸಂವಿಧಾನಿಕ ಅಶಯಗಳ ವಿರುದ್ದ ಹಾಗು ಪ್ರಜಾತಂತ್ರ ವಿರೋಧಿ ನಡೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೂ ಸದಸ್ಯರಾದ ಪ್ರಕಾಶಾ ಕರಾಟ್ ಅವರು ಅಭಿಪ್ರಾಯಪಟ್ಟರು

ಅವರು ನಿನ್ನೆ ಸಂಜೆ ಅಂತಾಷ್ಟ್ರೀಯ ಅಲ್ಪಸಂಖ್ಯಾತರ ದಿನಾಚರಣೆ ಅಂಗವಾಗಿ ಸಿಪಿಐ(ಎಂ) ರಾಜ್ಯ ಸಮಿತಿ ಅಡಿಯಲ್ಲಿರುವ ಅಲ್ಪಸಂಖ್ಯಾತರ ಹಕ್ಕುಗಳ ಸಮಿತಿ ಕರ್ನಾಟಕ ಆಯೋಜಿಸಿದ್ದ ಆನ್ ಲೈನ್ ಬಹಿರಂಗ ಸಭೆಯನ್ನು ಉಧ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು ಸಂವಿಧಾನ–ಸಮಾನತೆ ಪ್ರತಿಪಾದಿಸಿದ ಮೂಲಭೂತ ಹಕ್ಕುಗಳಲ್ಲಿ ಅವರಿಗೆ ಬೇಕಾದ ಧರ್ಮಾಚರಣೆ ಪ್ರಚಾರಕ್ಕೆ ಅವಕಾಶವಿದೆ. ಅದರೆ ಒತ್ತಾಯ ಪೂರಕ ಮತಾಂತರವಲ್ಲ. ಪೌರತ್ವ ಧರ್ಮಾದಾರಿತ ಅಲ್ಲ ಅದರು ಅದನ್ನು ಧರ್ಮಾಧಾರಿತಗೊಳಿಸಲು ಹೊರಟಿದೆ. ಲೌವ್ ಜಿಹಾದ್ ಹೆಸರಲ್ಲಿ ಸಂಗಾತಿ ಆಯ್ಕೆಯನ್ನು ಹಾಗೂ ಅನ್ಯ ಧರ್ಮಿಯರಿಬ್ಬರ ನಡುವಿನ ಮದುವೆಗಳನ್ನು ತಡೆಯಲಾಗುತ್ತಿದೆ. ಆಹಾರದ ಹಕ್ಕಿನ ಮೇಲಿನ ದಾಳಿ ಕಾನೂನಿನ ನೆಲೆಯನ್ನು ಬಳಸಲು ಯತ್ನಿಸುತ್ತದೆ ಎಂದು ಆರೋಪಿಸಿದರು. ತಾನು ನಿರಪಾಧಿ ಎಂದು ಸಾಬಿತುಪಡಿಸುವಂತಾಗಿದೆ. ಮಾಂಸಹಾರಿಗಳು ತಾವು ತಿಂದ ಮಾಂಸ– ದನದ ಮಾಂಸವಲ್ಲ ಎಂಬುದನ್ನು ಸಾಬಿತುಪಡಿಸುವಂತಾಗುತ್ತದೆ.

ನಾಗರಿತತ್ವದ ಸಂಬಂಧ ಸರ್ಕಾರದ ನಿಲುಮೆ ಸಂಪೂರ್ಣವಾಗಿ ಸಂವಿಧಾನ ವಿರೋಧಿಯಾಗಿದೆ. ಅಂಂ ವಿರುದ್ದು ದೆಹಲಿಯ ಶಾಂತಿಯುತ ಚಳುವಳಿಯನ್ನು ಹತ್ತಿಕ್ಕಲು ಕುತಂತ್ರ ರೂಪಿಸಿದ ಅಳರಸರು–ಅಮಾಯಕರನ್ನು ಗಂಕಂ ಅಡಿಯಲ್ಲಿ ಬಂಧಿಸಿ ಚಳುವಳಿಯನ್ನು ನಿರ್ನಾಮ ಮಾಡಲು ಹೂರಟಿದೆ. ಈ ಗಲಭೆಗಳ ನಿಜವಾದ ಆರೋಪಿಗಳನ್ನು ರಕ್ಷಸಿಲಾಗುತ್ತಿದೆ ಎಂದು ಆರೋಪಿಸಿದರು.

ಅಲ್ಪಸಂಖ್ಯಾತ ಹಕ್ಕುಗಳ ನಿರ್ನಾಮ ಮಾಡುವುದು ಪ್ರಜಾಸತ್ತೆಯ ಅಶಯಕ್ಕೆ ವಿರೋಧಿ ಎಂದ ಅವರು ಅಲ್ಪಸಂಖ್ಯಾತರಲ್ಲಿ ತಮ್ಮ ಆಗುತ್ತಿರುವ ತಾರತಮ್ಯದ ವಿರುದ್ದ ಹಾತಾಶೆ ಇದೆ. ಇದು ಸಂಕುಚಿತ ನೆಲೆಗಳಲ್ಲಿ ಉಗ್ರವಾದಿ–ಭಯೂತ್ಪದಕರ ದಾರಿ ಹಿಡಿಯುವಂತಾಗಿದೆ ಇದು ತುಂಬಾ ಹಾನಿಯನ್ನು ಉಂಟು ಮಾಡುತ್ತದೆ ಎಂದು ಎಚ್ಚರಿಸಿದರು. ಅಲ್ಪಸಂಖ್ಯಾತರು–ಪ್ರಜಾಪಭುತ್ವವಾದಿ–ಜಾತ್ಯತೀತ ಶಕ್ತಿಗಳ ಜೂತೆಗೂಡಿ–ಸಮಾನತೆಗಾಗಿ ವಿಶಾಲವಾದ ಚಳವಳಿ ಕಟ್ಟಬೇಕಾಗಿದೆ ಎಂದು ಕರೆ ನೀಡಿದರು.

ಎಡ ಪಕ್ಷಗಳು ಜಾತ್ಯತೀತ–ತತ್ವಕ್ಕೆ ಬದ್ದವಾಗಿವೆ. ತಾವು ಬಿಜೆಪಿ ಆಡಳಿತ ಇರುವ ಕರ್ನಾಟಕ ಹಾಗೂ ಎಡಪಕ್ಷಗಳ ಆಡಳಿತ ಇರುವ ಕೇರಳ ಗಮನಿಸಿ ಕಮೂನಿಷ್ಟ ಪಕ್ಷದ ಆಡಳಿತದಲ್ಲಿ ಅಲ್ಪಸಂಖ್ಯಾತರ ಅಸುರಕ್ಷತೆಯ ಭಾವನೆ ಇರುವುದಿಲ್ಲ ಎಂದರು.

ಸಂವೇದನಾಶೀಲತೆ ಕಳೆದು ಕೊಳ್ಳತ್ತಿರುವ ಸಮಾಜ: ಭಾನು ಮುಸ್ತಾಕ್

ಸಭೆಯಲ್ಲಿ ಅಥಿತಿಗಳಾಗಿ ಮಾತನಾಡಿದ ಖ್ಯಾತ ಸಾಹಿತಿ ಶ್ರೀಮತಿ ಭಾನುಮುಸ್ತಾಕ್ ಅವರು ಸಮಾಜ–ಸಂವೇದಾನಾ ಶೀಲತೆ ಕಳೆದುಕೂಳ್ಳತ್ತಿದೆ. ಸಂಕಟ, ನೋವು–ಹತಾಶೆಗಳಿಗೆ ಒಳಗಾದರು ಅಲ್ಪ ಸಂಖ್ಯಾತರನ್ನುನಾಗಾರಿಕಸಮಾಜ–ಸಮಾನತೆಯಿಂದ ನಡೆಸಿಕೂಳ್ಳಬೇಕು. ಇದೆ ನಮ್ಮ ನೆಲೆ ಎಂದು ಅಪ್ಪಿ ಉಳಿದವರನ್ನು ತಾರತಮ್ಯದಿಂದ ನಡೆಸಿಕೂಳ್ಳಬಾರದು

ಪುಟ 4 ಕ್ಕೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ–ಜನ ವಿರೋಧಿ ನೀತಿಗಳ ವಿರುದ್ಧ ಸಂಘಟಿತ ಹೋರಾಟಕ್ಕೆ ಹಂಚು ಕಾರ್ಮಿಕರಿಗೆ ಕರೆ– ಕೆ.ಎನ್. ಉಮೇಶ್



ಕಾರ್ಮಿಕ ವಿರೋಧಿಯಾಗಿ ಕೇಂದ್ರ ಸರ್ಕಾರ ರೂಪಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಾಗೂ ರೈತ ವಿರೋಧಿ ಕೃಷಿ ಸಂಬಂಧಿ ಕಾಯಿದೆಗಳನ್ನು ಹಿಂತೆಗೆದುಕೊಳ್ಳಬೇಕು. ಮತ್ತೆ ರಾಜ್ಯ ಸರ್ಕಾರ ಹೊರಡಿಸಿದ ಸುಗ್ರೀವಾಜ್ಞೆ ವಾಪಾಸಾಗಬೇಕಾಗಿದೆ. 2021 ರ ಸಾಲಿನಲ್ಲಿ ಬರುವ ಸವಾಲುಗಳನ್ನು ಎದುರಿಸಲು ರೈತ–ಕಾರ್ಮಿಕರು ಐಕ್ಯ ಹೋರಾಟವನ್ನು ರಾಜ್ಯವ್ಯಾಪಿ ಹಾಗೂ ರಾಷ್ಟ್ರವ್ಯಾಪಿ ನಡೆಸುವ ಅವಶ್ಯಕತೆಯಿದೆ ಎಂದು ಸಿಐಟಿಯುವಿನ ರಾಜ್ಯ ಕಾರ್ಯದರ್ಶಿಯವರಾದ ಕೆ.ಎನ್. ಉಮೇಶ್ ರವರು ವಿವರಿಸುತ್ತಾ ಹಂಚು ಕಾರ್ಮಿಕರು ಸಂಘಟಿತ ಹೋರಾಟ ನಡೆಸಲು ಕರೆ ನೀಡಿದರು. ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 20 ನೇ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಅವರು ಸರ್ಕಾರದ ನೀತಿಯ ವಿರುದ್ಧ ಹಾಗೂ ಮಾಲಕರ ವಿರುದ್ಧ ರಾಷ್ಟ್ರವ್ಯಾಪಿ ನಡೆಯುತ್ತಿರುವ ರೈತಕಾರ್ಮಿಕರ ಹೋರಾಟಗಳ ಬಗ್ಗೆ ವಿವರಿಸಿದರು.

ಕುಶ ಮತ್ತು ಲವ ರಿಂದ ಶ್ರೀ ರಾಮ ಸೋತ ಹಾಗೆ, ರೈತ ಮತ್ತು ಕಾರ್ಮಿಕರಿಂದ ಬಿಜೆಪಿ ಸೋಲಬೇಕಾಗಿದೆ. ರೈತ–ಕಾರ್ಮಿಕರ ಐಕ್ಯ ಹೋರಾಟ ತೀವ್ರವಾಗಿ ಬೆಳೆದು ಬರಬೇಕಾಗಿದೆ ಎಂದು ವಿವರಿಸಿದರು.

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 20 ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಕಾಂ। ವಿ. ನರಸಿಂಹ ರವರು ವಹಿಸಿದರು. ಪ್ರಧಾನ ಕಾರ್ಯದರ್ಶಿಯವರಾದ ಕಾಂ। ಎಚ್. ನರಸಿಂಹ ರವರು ಕಳೆದ ಒಂದು ವರ್ಷದ ಚಟುವಟಿಕಾ ವರದಿ ಹಾಗೂ ಲೆಕ್ಕಪತ್ರವನ್ನು ಮಂಡಿಸಿದರು. ವರದಿಗಳ ಮೇಲೆ ಚರ್ಚೆ ನಡೆದು ಅಂಗೀಕರಿಸಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ನಿರ್ಣಯ, ಹಂಚು ಉದ್ಯಮಕ್ಕೆ ಕಚ್ಚಾ ವಸ್ತುಗಳ ಪೂರೈಕೆಗೆ ಸರ್ಕಾರದ ಸಹಕಾರಕ್ಕಾಗಿ ಒತ್ತಾಯಿಸುವ ಕುರಿತು ನಿರ್ಣಯ, ಇಎಸ್ಐ ಸೌಲಭ್ಯಗಳನ್ನು ಸಂಬಂಧಿತ ಇಲಾಖೆ ಕಾರ್ಮಿಕರಿಗೆ ವಂಚನೆಯಾಗದಂತೆ ನೀಡಲು ಒತ್ತಾಯಿಸುವಂತೆ ನಿರ್ಣಯಗಳನ್ನು ಮಂಡಿಸಿ, ಅನುಮೋದಿಸಿ, ಅಂಗೀಕರಿಸಲಾಯಿತು.

ಸಿಐಟಿಯುವಿನ ಉಡುಪಿ ಜಿಲ್ಲಾ ಅಧ್ಯಕ್ಷರಾದ ಕಾಂ। ಕೆ. ಶಂಕರ್ ಮತ್ತು ಉಪಾಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ ಹಾಗೂ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಮಹಾಬಲ ವಡೇರಹೋಬಳಿ ಯವರು ಶುಭಕೋರಿ ಮಾತನಾಡಿ, ಸಂಘಟನೆಯನ್ನು ಬಲಗೊಳಿಸಬೇಕೆಂದು ಹೇಳಿದರು.

ಸಂಘದ ಅಧ್ಯಕ್ಷರಾಗಿ ವಿ. ನರಸಿಂಹ, ಪ್ರಧಾನ ಕಾರ್ಯದರ್ಶಿಯಾಗಿ ಎಚ್. ನರಸಿಂಹ ಮತ್ತು ಕೋಶಾಧಿಕಾರಿಯಾಗಿ ಪ್ರಕಾಶ್ ಕೋಣಿ ಅವರನ್ನು ಆಯ್ಕೆ ಮಾಡಲಾಯಿತು. ಒಟ್ಟು 9 ಮಂದಿಯನ್ನು ಪದಾಧಿಕಾರಿಗಳಾಗಿ ಮತ್ತು 57 ಮಂದಿಯನ್ನು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆರಿಸಲಾಯಿತು. ಪ್ರಧಾನ ಕಾರ್ಯದರ್ಶಿ ಎಚ್. ನರಸಿಂಹ ವಂದಿಸಿದರು. ■

ಕಸ ನಿರ್ವಹಣೆ ಶುಲ್ಕ ಹೆಚ್ಚಳ ವಿರೋಧಿಸಿ ಬಿಬಿಎಂಪಿ ಚಲೋ



ಕಸ ನಿರ್ವಹಣೆ ಬಳಕೆದಾರರ ಶುಲ್ಕ ಹೆಚ್ಚಳ ಖಂಡಿಸಿ ಬೆಂಗಳೂರಿನ ಬಿಬಿಎಂಪಿ ಕಛೇರಿಯ ಎದುರು ಸಿಪಿಐಎಂ ಪಕ್ಷದಿಂದ ಬಿಬಿಎಂಪಿ ಚಲೋ ಹಮ್ಮಿಕೊಂಡಿತ್ತು. ಕೋವಿಡ್ –19 ಸೋಂಕು ಮತ್ತು ಲಾಕ್ ಡೌನ್ ನಿಂದಾಗಿ ಈಗಾಗಲೇ ಬಾಧಿತರಾಗಿರುವ ಮಹಾನಗರದ ಜನತೆಗೆ ಬಿಬಿಎಂಪಿಯು ಈಗ ಕಸ ನಿರ್ವಹಣೆ ಶುಲ್ಕ ಹೆಚ್ಚಿಸಿ ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ದೂಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಸಂಕಷ್ಟ ಸಂದರ್ಭದಲ್ಲಿ ಬಿಬಿಎಂಪಿಯು ಪ್ರತಿ ಮನೆಗೆ ರೂ 200 ಕಸ ನಿರ್ವಹಣೆಗೆ ಬಳಕೆದಾರರ ಶುಲ್ಕವನ್ನು ವಿಧಿಸಲು ಮುಂದಾಗಿ. ಘನ ತ್ಯಾಜ್ಯ ನಿರ್ವಹಣೆಗೆ ಪ್ರತ್ಯೇಕ ಮಂಡಳಿ ರಚಿಸಿ ಅದರ ನಿರ್ವಹಣೆಯನ್ನು ಕಾರ್ಪೋರೇಟ್ ಕಂಪನಿಗಳಿಗೆ ತಾಂತ್ರಿಕ ಪರಿಣಿತಿ ಮತ್ತು ತಜ್ಞತೆಯ ನೆಪದಲ್ಲಿ ವಹಿಸಲು ಹಾಗೂ ಆಡಳಿತಾರೂಢ ಪಕ್ಷದ ರಾಜಕೀಯ ನಿರುದ್ಯೋಗಿಗಳಿಗೆ ಅಧ್ಯಕ್ಷ ಸ್ಥಾನದ ಪುನರ್‌ವಸತಿ ಕಲ್ಪಿಸಲು ಬಿಬಿಎಂಪಿ ಹಾಗೂ ರಾಜ್ಯ ಸರ್ಕಾರ ಮುಂದಾಗಿದೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐಎಂ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಮಾತನಾಡುತ್ತಾ ಬಿಬಿಎಂಪಿ ಯ ಮೂಲ ಕೆಲಸವಾದ ಕಸ ಸಂಗ್ರಹಣೆಯನ್ನು ಮಂಡಳಿಗೆ ವಹಿಸಿ ಅಧಿಕಾರ ವಿಕೇಂದ್ರೀಕರಣದ ಹಾಗೂ ಅದರಲ್ಲಿ ಜನತೆಯ ಪಾಲ್ಗೊಳ್ಳುವಿಕೆಯನ್ನು ಇಲ್ಲದಾಗಿಸಲು ಮುಂದಾಗಿದೆ. ವಾರ್ಷಿಕ 940 ಕೋಟಿ ರೂ. ಗಳ ವ್ಯವಹಾರಕ್ಕೆ ಘನ ತ್ಯಾಜ್ಯ ಸೆಸ್ ಮೂಲಕ ಕೇವಲ 65 ಕೋಟಿ ರೂ. ಗಳನ್ನು ಬಿಬಿಎಂಪಿ ಯು ಪಾವತಿಸುತ್ತಿದೆ.

ಇಂತಹ ಸಂದರ್ಭದಲ್ಲಿ ಬಿಬಿಎಂಪಿ ಗೆ ಅದರ ನಿರ್ವಹಣೆ ಹೊಣೆ ಬೇಡವೆಂಬ ವಾದವನ್ನು ಕಾರ್ಪೊರೇಟ್ ಸಂಸ್ಥೆಗಳು ಮಂಡಿಸುತ್ತಿವೆ. ಆದರೆ ಕಸ ನಿರ್ವಹಣೆಯನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಮಂಡಳಿ ವಹಿಸಿಕೊಟ್ಟಲ್ಲಿ ಲಾಭ–ನಷ್ಟ ಲೆಕ್ಕಾಚಾರದಲ್ಲಿ ಪ್ರತಿ ತಿಂಗಳು ಘನ ತ್ಯಾಜ್ಯ ನಿರ್ವಹಣೆ ಬಳಕೆದಾರರ ಶುಲ್ಕವು ಹೆಚ್ಚಲಿದೆ. ಈ ಮಂಡಳಿಗೆ ಅನುಕೂಲ ಮಾಡಿಕೊಡಲೆಂದೇ ಈಗಾಗಲೇ ಘನ ತ್ಯಾಜ್ಯ ಸೆಸ್, ಸ್ವಚ್ಛ ಭಾರತ್ ಸೆಸ್ ಮುಂತಾದವನ್ನು ಮಹಾನಗರದ ಜನತೆ ಪಾವತಿಸುತ್ತಿರುವಾಗ ಮತ್ತೊಂದು ಕಸ ನಿರ್ವಹಣೆ ಬಳಕೆದಾರರ ಶುಲ್ಕ ವಿಧಿಸಲು ರಾಜ್ಯ ಬಿಜೆಪಿ ಸರ್ಕಾರ ಮತ್ತು ಬಿಬಿಎಂಪಿ ಮುಂದಾಗಿವೆ ಎಂದು ಆರೋಪಿಸಿದ್ದಾರೆ.

ಈ ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರಾದ ಗೌರಮ್ಮ, ಕೆ.ಎಸ್. ವಿಮಲಾ, ಕೆ. ಪ್ರಕಾಶ, ಹೆಚ್. ಎನ್. ಗೋಪಾಲಗೌಡ, ಗೋಪಾಲಕೃಷ್ಣ ಅರಳಹಳ್ಳಿ, ಪ್ರತಾಪ್ ಸಿಂಹ, ಲೀಲಾವತಿ ಸೇರಿದಂತೆ ಮಂತಾದವರು ಭಾಗವಹಿಸಿದ್ದರು. ■

ವಿಸ್ಟ್ರಾನ್ ಕಾರ್ಮಿಕರಿಗೆ ಉಚಿತ ಕಾನೂನು: ಲಾಯರ್ಸ್ ಯೂನಿಯನ್ ನಿರ್ಧಾರ

ವಿಸ್ಟ್ರಾನ್ ಕಂಪನಿಯಲ್ಲಿ ನಡೆದ ಘಟನೆಯಿಂದ ಅಮಾಯಕ ಕಾರ್ಮಿಕರನ್ನು ಅನಾವಶ್ಯಕವಾಗಿ ಬಂಧಿಸಿದ್ದಾರೆ. ನೊಂದ ಕಾರ್ಮಿಕರಿಗೆ ಕಾನೂನು ನೆರವು ನೀಡಲು ಅಖಿಲ ಭಾರತ ವಕೀಲರ ಸಂಘ ಮುಂದಾಗಿದೆ ಎಂದು ಸಂಘಟನೆಯ ರಾಜ್ಯ ಉಪಾಧ್ಯಕ್ಷ ಹರೀಂದ್ರ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಅಖಿಲ ಭಾರತ ವಕೀಲರ ಸಂಘದ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ವಿಸ್ಟ್ರಾನ್ ಕಂಪನಿಯೂ ಕಾರ್ಮಿಕ ಕಾಯಿದೆಗಳನ್ನು ಜಾರಿ ಮಾಡದ ಪರಿಣಾಮದಿಂದ ಈ ಘಟನೆ ನಡೆದಿದ್ದು ಮಾಲೀಕರ ಪರವಾಗಿ ಸಂಸದರ ನಿರ್ದೇಶನದಂತೆ ಜಿಲ್ಲಾಧಿಕಾರಿ ನಡೆದುಕೊಳ್ಳುತ್ತಾ ಇದ್ದು ಘಟನೆಯ ಸತ್ಯಾಂಶ ಹೊರಬರಲು ನಿಷ್ಪಕ್ಷಪಾತ ತನಿಖೆ ನಡೆಸಲು ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

ಕಂಪನಿಯ ನಡುವಳಿಕೆಗಳ ಪ್ರಕಾರ 6 ಸಾವಿರ ಕಾರ್ಮಿಕರನ್ನು ನೇಮಿಸಿಕೊಳ್ಳಲು ಅವಕಾಶ ಇದೆ ಯಾಕೆ 12 ಸಾವಿರ ಕಾರ್ಮಿಕರನ್ನು ನೇಮಿಸಿದ್ದರು ಕಾಯಿದೆ ಪ್ರಕಾರ 8 ಗಂಟೆ ಕೆಲಸ ಮಾಡಬೇಕು 12 ಗಂಟೆ ಯಾಕೆ ದುಡಿಸಿಕೊಂಡರು ಮೂರು ಪಾಳಿಗೆ ಎರಡು ಪಾಳೆಗೆ ದುಡಿಸಿಕೊಂಡರು ಕೆಲಸ ಮಾಡಿದ ಕಾರ್ಮಿಕರಿಗೆ ಜೀವನ ರೂಪಿಸುವುದು ಕಂಪನಿಯ ಜವಾಬ್ದಾರಿ ಯಾಕೆ ಮುಂದಾಗಲಿಲ್ಲ ಇದರ ಬಗ್ಗೆ ನಮ್ಮ ಸಂಘಟನೆ ಸತ್ಯಶೋಧನಾ ಸಮಿತಿ ಮಾಡಿ ವರದಿ ಮಾಡಿದೆ ಕಂಪನಿಯ ತಪ್ಪಿನಿಂದ ಈ ಘಟನೆ ನಡೆದಿದೆ ಎಂದು ರಾಜ್ಯ ಸಮಿತಿಯಿಂದ ಸತ್ಯಾಂಶವಾಗಿದೆ ಎಂದರು



ಸಂಘಟನೆಯ ರಾಜ್ಯ ಉಪಾಧ್ಯಕ್ಷ ಎಲ್.ಎಂ ಪೇಶ್ವ ಮಾತನಾಡಿ ಕಾರ್ಮಿಕ ಇಲಾಖೆಯ ವರದಿ ಪ್ರಕಾರ 15 ಕಾರ್ಮಿಕ ಕಾಯಿದೆಗಳು ಉಲ್ಲಂಘನೆಯಾಗಿವೆ ವಿಸ್ಟ್ರಾನ್ ಸಂಸ್ಥೆಯೇ ಕಾರ್ಮಿಕರ ಮುಂದೆ ಕ್ಷಮೆ ಕೇಳಿದ ಜೊತೆಗೆ ರಾಷ್ಟ್ರೀಯ ಉಪಾಧ್ಯಕ್ಷನನ್ನು ವಜಾ ಮಾಡಿದೆ ಇಷ್ಟೆಲ್ಲಾ ಆದರೂ ಕಾರ್ಮಿಕರ ಮೇಲೆ ಕಾನೂನು ಕ್ರಮಗಳನ್ನು ಕೈಗೊಂಡಿದ್ದಾರೆಹೊರತು ಸಂಬಂಧಿಸಿದ ಕಾರ್ಮಿಕ ಇಲಾಖೆ ಸರಕಾರ ಹಾಗೂ ಸಂಸ್ಥೆಯ ಗುತ್ತಿಗೆದಾರ ಮಾಲೀಕನ ಮೇಲೆ ಕ್ರಮವನ್ನು ಕೈಗೊಂಡಿಲ್ಲ ಕೇವಲ ಶ್ರಮಿಕ ವರ್ಗದ ಮೇಲೆಯೇ ಕ್ರಮ ಯಾಕೆ ಎಂದು ಪ್ರಶ್ನಿಸಿದರು.

ಕಂಪನಿಯಲ್ಲಿ ಬಹುತೇಕ ವಿದ್ಯಾರ್ಥಿ ಮತ್ತು ಯುವಜನರು ಕೆಲಸಕ್ಕೆ ಸೇರಿದ್ದಾರೆ ರಾಷ್ಟ್ರದ ಉದಯೋನ್ಮುಖ ಯುವಕರು ಇವರು ಉದ್ಯೋಗದಲ್ಲಿ ಮೋಸ ಶೋಷಣೆಯಿಂದ ಬಳಲುತ್ತಿದ್ದಾರೆ ಈ ಕಾರ್ಮಿಕರಿಗೆ ರಾಷ್ಟ್ರ ಮತ್ತು ಸಮಾಜದ ಹಿತದೃಷ್ಟಿಯಿಂದ ಸರಿಯಾದ ಕಾನೂನು ನೆರವು ಮತ್ತು ಮಾರ್ಗದರ್ಶನ ನೀಡಬೇಕೇ ಹೊರತು ಅನಾವಶ್ಯಕ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವಂತೆ ಮಾಡಬಾರದು ಇವರಿಗೆ ಕರ್ನಾಟಕ ರಾಜ್ಯ ವಕೀಲರ ಸಂಘ ಸಂಪೂರ್ಣ ಕಾನೂನು ನೆರವು ನೀಡಲಿದೆ ಯಾರೂ ಭಯ ಪಡಬಾರದು ನಿಮ್ಮ ಬೆಂಬಲಕ್ಕೆ ಸಂಘಟನೆ ಇದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಖಿಲ ಭಾರತ ವಕೀಲರ ಸಂಘದ ರಾಜ್ಯ ಉಪಾಧ್ಯಕ್ಷ ಶಿವಶಂಕರ್, ರಾಜ್ಯ ಸಮಿತಿ ಸದಸ್ಯರಾದ ವೆಂಕಟರಮಣಬಾಬು, ಎಸ್. ಸತೀಶ್, ವಾಸುದೇವರೆಡ್ಡಿ, ಕೆ. ನಾಗರಾಜ್, ಭೀಮಸೇನೆ ಪಂಡಿತ್ ಮುನಿವೆಂಕಟಪ್ಪ, ಜೆಎಂಎಸ್ ವಿಜಯಕುಮಾರಿ ಇದ್ದರು. ■

ಅಲ್ಪಸಂಖ್ಯಾತರಿಗೆ ಸಮಾನತೆ ನೀಡಲು ಬಿ.ಜೆ.ಪಿ. ಸರ್ಕಾರ ತಯಾರಿಲ್ಲ... ಪುಟ 3 ರಿಂದ

ಬಹುತ್ವ ಭಾರತದ ವೈವಿಧ್ಯತೆಯುಯನ್ನು ಎಲ್ಲರು ಸೇರಿ ಸಂರಕ್ಷಿಸಬೇಕು ಎಂದರು.

ರಾಜ್ಯ ಸರ್ಕಾರ ಶೈಕ್ಷಣಿಕ ಹಿಂದುಳಿದರುವ ಅಲ್ಪ ಸಂಖ್ಯಾತರ ಉನ್ನತ ಶಿಕ್ಷಣಕ್ಕೆ ನೀಡಲಾಗುತ್ತಿದ್ದ ವಿಧ್ಯಾರ್ಥಿವೇತನ ಕಡಿತ ಮಾಡಿರುವುದು ಸರಿಯಾದ ಕ್ರಮವಲ್ಲ ಅಲ್ಪಸಂಖ್ಯಾತ ಸಮುದಾಯ ಸಂವಿಧಾನತ್ಮಾಕ ಹಕ್ಕುಗಳ ಸಮಾನತೆ ಹಕ್ಕು ಉಳಿಸಬೇಕೆಂದರು. ನಿರ್ಧ್ಯಯ ಹತ್ಯೆ–ಗುಂಪು ಹತ್ಯೆಗಳು ನಾಗರಿಕ ಸಮಾಜಕ್ಕೆ ಶೋಭೆತರವಲ್ಲ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜು ಮಾತನಾಡಿ ಅಲ್ಪ ಸಂಖ್ಯಾತರ ಬದುಕು, ವೃತ್ತಿ, ಶಿಕ್ಷಣ ಹಕ್ಕುಗಳಿಗಾಗಿ ನಿರಂತರ ಹೋರಾಟ ಅಗತ್ಯ ಎಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಕಾರ್ಮಿಕ ಧುರೀಣ ಅಮಾನುಲ್ಲಖಾನ್ ಅವರು ಮಾತನಾಡಿ ಅಲ್ಪಸಂಖ್ಯಾತರು ಮುಸ್ಲಿಂ ಸಮುದಾಯ 14% ಇದ್ದರೂ ರಾಜಕೀಯ ಪ್ರಾತಿನಿಧ್ಯ 3% ಮೀರಿಲ್ಲ ಉದೋಗದಲ್ಲಿಯೂ ಸಹ 3% ರಷ್ಟಿಲ್ಲ. ಈ ಹಿನ್ನೆಲೆಯಲ್ಲಿ ಡಾ: ಸಾಚರ್ ಸಮಿತಿ, ರಂಗನಾಥಮಿಶ್ರ ಸಮಿತಿ ವರದಿಗಳು ಹಾಗು ಶಿಫಾರಸ್ಸುಗಳ ಆಧಾರದಲ್ಲಿ ಸರ್ಕಾರ ಸಮಬಾಳು–ಸಮಪಾಲು ತತ್ವದ ಅಧಾರದಲ್ಲಿ ಕಾರ್ಯಕ್ರಮ ಮುಂದುವರಿಸಲು ಒತ್ತಾಯಿಸಿದರು.

ಆರಂಭದಲ್ಲಿ ಸಮಿತಿ ರಾಜ್ಯ ಸಂಚಾಲಕ ಸೈಯದ್ ಮುಜೀಬ್ ಪ್ರಸ್ತಾವಿಕ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ಕೂನೆಯಲ್ಲಿ ಸಹ ಸಂಚಾಲಕರಾದ ಶೇಕ್ಷಖಾದ್ರಿ ವಂದಿಸಿದರು. ■



ವಿಸ್ಟ್ರಾನ್ ಘಟನೆ: ನಿಷ್ಪಕ್ಷಪಾತ ತನಿಖೆ ನಡೆಸಲು ಪ್ರಗತಿಪರ ಸಂಘಟನೆಗಳ ಆಗ್ರಹ



ಕೋಲಾರ: ವಿಸ್ಟ್ರಾನ್ ಘಟನೆ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಲು ಹಾಗೂ ಕಾರ್ಮಿಕ ಕಾಯಿದೆಗಳನ್ನು ಜಾರಿ ಮಾಡದ ಆಡಳಿತ ಮಂಡಳಿ ಮತ್ತು ಗುತ್ತಿಗೆದಾರರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಒತ್ತಾಯಿಸಿ ನಗರದ ಜಿಲ್ಲಾಧಿಕಾರಿ ಕಛೇರಿ ಮುಂದೆ ಶನಿವಾರ ವಿವಿಧ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನಾ ಧರಣಿ ನಡೆಸಿದರು.

ವಿಸ್ಟ್ರಾನ್ ಕಾರ್ಖಾನೆಯ ಮಾಲೀಕರು ಕಾರ್ಮಿಕರ ಬಗ್ಗೆ ನಿರ್ಲಕ್ಷ್ಯದಿಂದ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಮಾಡಿ ಈ ಘಟನೆ ಸಂಬಂಧಿಸಿದ್ದು ಇದರ ಬಗ್ಗೆ ನಿಷ್ಪಕ್ಷಪಾತ ತನಿಖೆಯಾಗಿ ನೈಜ ಸತ್ಯಾಂಶ ಹೊರಬರಬೇಕಾಗಿದೆ. ಕಾರ್ಮಿಕರನ್ನು 12 ಗಂಟೆಗಳ ಕಾಲ ದುಡಿಸಿಕೊಂಡರು, ಯಾಕೆ ನಾಲ್ಕು ತಿಂಗಳಿಂದ ಸಂಬಳ ನೀಡಿಲ್ಲ. ಇದರ ಬಗ್ಗೆ ಜಿಲ್ಲಾಡಳಿತ ವೈಫಲ್ಯ ಎದ್ದು ಕಾಣುತ್ತದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ, ದೇಶದಲ್ಲಿ ಸಾಮಾನ್ಯ ನಾಗರೀಕ ಸಮಾಜ ಉಳಿವಿಗಾಗಿ ಕೆಂಪು, ಹಸಿರು ಮತ್ತು ನೀಲಿ ಬಣ್ಣದ ಬಾವುಟಗಳ ಮೂಲಕ ನ್ಯಾಯ ಕೇಳುತ್ತಾ ಇದ್ದೇವೆ. ಈ ನ್ಯಾಯ ಕೇಳುವುದು ಕೂಡ ಬಂಡವಾಳಶಾಹಿ ವ್ಯವಸ್ಥೆಯ ಪರವಾಗಿರುವ ಮೋದಿ ಸರಕಾರ ನಮ್ಮನ್ನು ಭಯೋತ್ಪಾದಕರ ರೀತಿಯಲ್ಲಿ ನೋಡುತ್ತಾರೆ. ವಿಧಾನ ಪರಿಷತ್ ನಲ್ಲಿ ಕುರ್ಜಿಗಾಗಿ ಕಿತ್ತಾಡಬಹುದು. ನಮ್ಮ ದುಡಿಮೆಯ ಸಂಬಳ ಕೇಳುವುದು ತಪ್ಪಾಗಿದೆ. ನಮ್ಮ ಬಾವುಟಗಳು ನ್ಯಾಯದ ಪರವಾದರೇ ಸರಕಾರ ಅನ್ಯಾಯದ ಪರವಾಗಿದೆ ಎಂದರು.

ಬಂಡವಾಳ ಹೂಡಿಕೆಗೆ ಭೂಮಿ ಕಳೆದುಕೊಂಡವರನ್ನು ಕೆಲಸದಲ್ಲಿ ಖಾಯಂ ಮಾಡಿಲ್ಲ. ಸರಕಾರದ ಮೇಲೆ ಸಂಸದರು ಒತ್ತಡ ತಂದು ತನಿಖೆಯನ್ನು ದಿಕ್ಕು ತಪ್ಪಸುತ್ತಾ ಇದ್ದಾರೆ. ಕಾರ್ಮಿಕರು ತಪ್ಪು ಮಾಡುದ್ರು ಎಂದು ಕ್ರಿಮಿನಲ್ ರೀತಿಯಲ್ಲಿ ಅವರನ್ನು ಸಮಾಜದಲ್ಲಿ ನೋಡುತ್ತಾ ಇದ್ದಾರೆ. ನಿಷ್ಪಕ್ಷಪಾತವಾಗಿ ತನಿಖೆಯಾಗಿ ಜನತೆಯ ಮುಂದೆ ಬಹಿರಂಗ ಪಡಿಸಬೇಕು. ಈ ಘಟನೆಯನ್ನು ಕೈಗಾರಿಕಾ ವಲಯದ ರೀತಿಯಲ್ಲಿ ನೋಡಬೇಕಾಗಿದೆ. ಕಾರ್ಮಿಕರು ದೇಶದ ಆಸ್ತಿ ಅವರ ಬೆಂಬಲಕ್ಕೆ ನಿಂತು ಧೈರ್ಯ ತುಂಬಬೇಕಾಗಿದೆ ಎಂದರು.

ವಿಸ್ಟ್ರಾನ್ ಕಂಪನಿಯನ್ನು ಶೀಘ್ರವಾಗಿ ಪ್ರಾರಂಭಿಸಿ ಈಗಾಗಲೇ ದುಡಿಯುತ್ತಾ ಇರುವರನ್ನು ಪುನಃ ನೇಮಕ ಮಾಡಿಕೊಂಡು ಖಾಯಂ ಮಾಡಬೇಕು. ಸ್ಥಳೀಯ ಸಂಸದ ರಾಜಕೀಯವಾಗಿ ಪ್ರೇರಿತಗೊಳಿಸುತ್ತಿದ್ದು ಇದರ ಬಗ್ಗೆ ತನಿಖೆಯಾಗಬೇಕು. ಕಾರ್ಮಿಕರಿಗೆ ಬಾಕಿ ಇರುವ ವೇತನವನ್ನು ಪಾವತಿಸಬೇಕು. ಕೈಗಾರಿಕಾ ಕಾನೂನನ್ನು ಜಾರಿಗೊಳಿಸಲು ವಿಫಲವಾಗಲು ಕಾರಣವಾದವರ ಮೇಲೆ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜಾರಿ ಮಾಡಬೇಕು. ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಕಾರ್ಮಿಕರಿಗೆ ವೇತನ ರಹಿತ ರಜೆ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್ ವರಲಕ್ಷ್ಮೀ, ರಾಜ್ಯ ರೈತ ಸಂಘ ಪ್ರಧಾನ ಕಾರ್ಯದರ್ಶಿ ಅಬ್ಬಣಿ ಶಿವಪ್ಪ, ಭೀಮಸೇನೆ ರಾಜ್ಯ ಅಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ, ಜೆಎಂಎಸ್ ರಾಜ್ಯ ಉಪಾಧ್ಯಕ್ಷೆ ವಿ. ಗೀತಾ ಮಾತನಾಡಿದರು.

ಈ ಸಂದರ್ಭದಲ್ಲಿ ಡಿ ಎ ಸ್ ಎ ಸ್ ವ್ ು ು ಖ ಂ ಡ್ ರಾ ದ್ ವಕ್ಕಲೇರಿ ರಾಜಪ್ಪ, ರೈತ ಸಂಘ ನಳಿನಿಗೌಡ, ವಿವಿಧ ಸಂಘಟನೆಗಳ ವ್ ು ು ಖ ಂ ಡ್ ರಾ ದ್ ವಿಜಯಕೃಷ್ಣ, ಪಿ. ಶ್ರೀನಿವಾಸ್, ತಂಗರಾಜ್, ಸುಶೀಲಾ, ಆಶಾ, ಮುನಿವೆಂಕಟಪ್ಪ, ವಿ. ಅಂಬರೀಶ್, ನಾಗೇಶ್, ವಾಸುದೇವಾರೆಡ್ಡಿ, ಶಿವಪ್ಪ, ಬೀರಾಜು, ವಿಜಯಕುಮಾರಿ, ಅಂಕಿತಾ, ಭೀಮರಾಜ್, ಮುಂತಾದವರು ಇದ್ದರು.

ರಾಯಚೂರು: ಎಸ್‌ಎಫ್‌ಐ ಸಂಘಟನೆ ವಿರುದ್ಧ ಕೋಲಾರ ಸಂಸದ ಮುನಿಸ್ವಾಮಿ ರವರ ರಾಜಕೀಯ ಪ್ರೇರಿತ ಆರೋಪವನ್ನು ಖಂಡಿಸಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ದಿಡೀರ್ ಪ್ರತಿಭಟನೆ ನಡೆಸಿದ್ದಾರೆ.

ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ವಿಸ್ಟ್ರಾನ್ ಐಫೋನ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರು ವೇತನ ಸಮಸ್ಯೆ ಬಗೆಹರಿಸಲು ಶನಿವಾರ ಬೆಳಗ್ಗೆ ಕಾರ್ಮಿಕರು ದಿಢೀರ್ ಪ್ರತಿಭಟನೆ ನಡೆಸಿದ್ದಾರೆ.

ಆದರೆ ಈ ಘಟನೆಗೆ ಎಸ್‌ಎಫ್‌ಐಗೆ ಸಂಬಂಧವಿಲ್ಲದಿದ್ದರೂ ಎಸ್‌ಎಫ್‌ಐ ಸಂಘಟನೆ ಹೊರ ರಾಜ್ಯದ ಜನರನ್ನು ಕರೆಸಿಕೊಂಡು ದಾಂಧಲೆಯನ್ನು ಸಂಘಟಿಸಿದೆ ಎಂದು ಕೋಲಾರದ ಸಂಸದ ಎಸ್. ಮುನಿಸ್ವಾಮಿ ರಾಜಕೀಯ ಪ್ರೇರಿತ ಆರೋಪ ಮಾಡಿ ನಿಷ್ಪಕ್ಷಪಾತ ತನಿಖೆಯನ್ನು ದಿಕ್ಕುತಪ್ಪಿಸುವ ಪ್ರಯತ್ನ ನಡೆ ಎಸ್‌ಎಫ್‌ಐ ವಿದ್ಯಾರ್ಥಿ ಸಂಘಟನೆ ನಾಯಕ ಶ್ರೀಕಾಂತ್ ರವರನ್ನು ಬಂಧಿಸಿದ್ದನ್ನು ಎಸ್‌ಎಫ್‌ಐ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಎಂದು ಸಂಘಟನೆಯ ಪದಾಧಿಕಾರಿಗಳು ಹೇಳಿದರು.

ಹೋರಾಟವನ್ನು ಉದ್ದೇಶಿಸಿ ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷರಾದ ಶಿವಕುಮಾರ ಮ್ಯಾಗಳಮನಿ ಮಾತನಾಡಿ ಎಸ್‌ಎಫ್‌ಐ ಯಾವುದೇ ಪ್ರತಿಭಟನೆಯನ್ನು ಸಂಘಟಿಸಿಲ್ಲರಲಿಲ್ಲ. ಎಸ್‌ಎಫ್‌ಐ ಒಂದು ವಿದ್ಯಾರ್ಥಿ ಸಂಘಟನೆಯಾಗಿದ್ದು ಅದು ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತು ಹೋರಾಡುತ್ತಿದೆ ಆದರೆ ಇಲ್ಲಿರುವುದು ಕಾರ್ಮಿಕರು ಮತ್ತು ಕೈಗಾರಿಕೆ ಪ್ರಶ್ನೆಯಾಗಿದ್ದರು ಅನಾವಶ್ಯಕವಾಗಿ ವಿದ್ಯಾರ್ಥಿ ಸಂಘಟನೆಯ ಹೆಸರನ್ನು ಎಳೆದು ತರುವ ಪ್ರಯತ್ನವನ್ನು ಸಂಸದರು ನಡೆಸಿರುವುದು ಅವರ ಬೇಜವಾಬ್ದಾರಿತನ ತೋರುತ್ತದೆ. ಎಸ್‌ಎಫ್‌ಐ ನಾಯಕ ಶ್ರೀಕಾಂತ್ ವಿರುದ್ಧ ಇದುವರೆಗೂ ಯಾವುದೇ ಪ್ರಕರಣ ದಾಖಲಾಗಿಲ್ಲ. ಇದು ಬಿಜೆಪಿ ಆರೆಸ್ಸೆಸ್ ಅಣತಿಯಂತೆ ಕೋಲಾರದ ಸಂಸದ ಮುನಿಸ್ವಾಮಿ ರವರ ದುರುದ್ದೇಶಪೂರಿತ ಆರೋಪದ ಹಿನ್ನಲೆಯಲ್ಲಿ ಪೋಲಿಸರು ಎಸ್‌ಎಫ್‌ಐ ಶ್ರೀಕಾಂತ್ ರವರನ್ನು ವಿಚಾರಣೆಯ ಉದ್ದೇಶದಿಂದ ಬಂಧಿಸಿ ವಿಚಾರಣೆ ನಡೆಸಿ ಯಾವುದೇ ಗುರುತರವಾದ ಪಾತ್ರವಿಲ್ಲ ಎಂದು ನೆನ್ನೆ ರಾತ್ರಿ ಬಿಡುಗಡೆ ಮಾಡಿದ್ದಾರೆ. ಆದರೂ ಸಹ ಬಿಜೆಪಿ ಆರೆಸ್ಸೆಸ್ ಶಕ್ತಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಎಸ್‌ಎಫ್‌ಐ ವಿರುದ್ಧ ಅಪಪ್ರಚಾರ ನಡೆಸಿ ಎಸ್‌ಎಫ್‌ಐ ಸಂಘಟನೆಗೆ ಕೆಟ್ಟ ಹೆಸರು ತರಲು ಹೊರಟಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕರ ಕಾನೂನುಗಳನ್ನು ಉಲ್ಲಂಘಿಸಿ ಯುವಜನರನ್ನು ಕಡಿಮೆ ಸಂಬಳ ನೀಡಿ 12 ಗಂಟೆಗಳ ಕಾಲ ದುಡಿಸಿಕೊಂಡು ನಾಲ್ಕೈದು ತಿಂಗಳಿಂದ ಸಂಬಳ ನೀಡದೆ ಸತಾಯಿಸಿ ಶೋಷಿಸುವುದರ ವಿರುದ್ಧ ಧ್ವನಿ ಎತ್ತಬೇಕಾಗಿದ್ದ ಕೋಲಾರದ ಸಂಸದ ಮುನಿಸ್ವಾಮಿ ಬಂಡವಾಳಶಾಹಿ ಕಂಪನಿಗಳ ಕಮೀಷನ್ ಪ್ರಭಾವಕ್ಕೆ ಒಳಗಾಗಿ ಕಾರ್ಮಿಕರ ಹಿತವನ್ನು ಮರೆತಿದ್ದಾರೆ. ಕಾರ್ಮಿಕರ ಶೋಷಣೆಯ ಮೂಲಕ ಕಾರ್ಪೋರೇಟ್ ಹಣಕಾಸು ಬಂಡವಾಳಶಾಹಿಗಳ ಆಸ್ತಿ ಹೆಚ್ಚಳಕ್ಕೆ ಕೈಜೋಡಿಸಿದ್ದಾರೆ. ಹಾಗೂ ಈ ಘಟನೆ ನಡೆಯಲು ಕಾರಣ ಕಾರ್ಮಿಕರ ಗುತ್ತಿಗೆ ಏಜೆನ್ಸಿ ಮತ್ತು ಕಾರ್ಮಿಕರ ನಡುವಿನ ವೇತನ ಶೋಷಣೆ ಮತ್ತು ಈ ಸಮಸ್ಯೆಯನ್ನು ನಿರ್ವಹಿಸುವಲ್ಲಿನ ಕಾರ್ಮಿಕ ಅಧಿಕಾರಿಗಳ ನಿರ್ಲಕ್ಷ್ಯತೆಯು ಕಾರ್ಮಿಕರ ಈ ರೀತಿಯಾಗಿ ದಿಢೀರ್ ಪ್ರತಿಭಟನೆ ನಡೆಸಲು ಕಾರಣ ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಸರ್ಕಾರ ಮತ್ತು ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಯಾಗಿ ಸಂಸದ ಮುನಿಸ್ವಾಮಿ ವಿಫಲರಾಗಿದ್ದಾರೆ. ಆದ್ದರಿಂದ ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ವಿದ್ಯಾರ್ಥಿ ಸಂಘಟನೆಗಳ ವಿರುದ್ಧ ರಾಜಕೀಯ ಪ್ರೇರಿತ ಪಕ್ಷಪಾತದ ಆರೋಪಗಳನ್ನು ಹೊರಿಸುತ್ತಿರುವುದು ಅವರ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಈ ಮೂಲಕ ಕಾರ್ಮಿಕರ ನಿಜವಾದ ಸಮಸ್ಯೆಗಳನ್ನು ಮರೆಮಾಚಲು ನಿಷ್ಪಕ್ಷಪಾತ ತನಿಖೆಯ ನಡೆಯುವ ಮುನ್ನ ಸಂಸದ ಮುನಿಸ್ವಾಮಿ ರವರು ತನಿಖೆಯನ್ನು ದಿಕ್ಕು ತಪ್ಪಿಸಲು ಶತಪ್ರಯತ್ನ ಮಾಡಿ ಬೆತ್ತಲಾಗಿದ್ದಾರೆ ಎಂದ ದೂರಿದರು.

ನಂತರ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಲಿಂಗರಾಜ ಕಂದಗಲ್ ಮಾತನಾಡಿ ಈ ರೀತಿಯ ಕಾನೂನನ್ನು ಕೈಗೆತ್ತಿಕೊಳ್ಳುವ ಅಶಿಸ್ತಿನ ಪ್ರತಿಭಟನೆಗಳನ್ನು ಎಸ್‌ಎಫ್‌ಐ ತೀವ್ರವಾಗಿ ವಿರೋಧಿಸುತ್ತದೆ. ಈ ಘಟನೆ ನಡೆಸಿದವರ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಿ ಕ್ರಮಕೈಗೊಳ್ಳಬೇಕು. ಕಂಪನಿ ಪುನರ್ ಆರಂಭವಾಗಿ ನಡೆಯಬೇಕು. ಹಾಗೂ ಕಾರ್ಮಿಕ ವೇತನ ಸಮಸ್ಯೆ ಬಗೆಹರಿಸಲು ನಿರ್ಲಕ್ಷ್ಯ ತೋರಿರುವ ಕಾರ್ಮಿಕ ಅಧಿಕಾರಿಗಳು, ಕಂಪನಿ ಆಡಳಿತ ಮಂಡಳಿ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸುತ್ತದೆ.

ಆದರೆ ಎಸ್‌ಎಫ್‌ಐ ವಿದ್ಯಾರ್ಥಿ ಸಂಘಟನೆಯ ಹೆಸರನ್ನು ದುರುದ್ದೇಶಪೂರ್ವಕವಾಗಿ ಎಳೆದು ತರುತ್ತಿರುವುದರ ಹಿಂದೆ ಬಿಜೆಪಿ ಆರೆಸ್ಸೆಸ್ ರಾಜಕೀಯ ಸೈದ್ಧಾಂತಿಕ ವಿರೋಧಿ ನಿಲುವೇ ಕಾರಣವಾಗಿದೆ. ಆದ್ದರಿಂದ ಸಂಸದ ಮುನಿಸ್ವಾಮಿ ರವರು ಎಸ್‌ಎಫ್‌ಐ ವಿದ್ಯಾರ್ಥಿ ಸಂಘಟನೆ ವಿರುದ್ಧ ಮಾಡಿರುವ ಆರೋಪವನ್ನು ಈ ಕೂಡಲೇ ಬೇಷರತ್ತಾಗಿ ಹಿಂಪಡೆಯಬೇಕು ಮತ್ತು ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಮಿಕರ ಹಿತ ಕಾಪಾಡಬೇಕೆಂದು ಎಸ್‌ಎಫ್‌ಐ ಸಂಘಟನೆ ಒತ್ತಾಯಿಸಿತ್ತು. ಮನವಿ ಪತ್ರವನ್ನು ಗ್ರಾಮ ಲೆಕ್ಕಿಗ ಸದಾಕಲಿಯವರ ಮೂಲಕ ಸರ್ಕಾರಕ್ಕೆ ಕಳುಹಿಸಿ ಕೊಡಲಾಯಿತು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ನಗರ ಘಟಕದ ಅಧ್ಯಕ್ಷ ಮೌನೇಶ ಬುಳ್ಳಾಪುರ, ಕಾರ್ಯದರ್ಶಿ ವೆಂಕಟೇಶ, ಡಿವೈಎಫ್‌ಐ ಅಧ್ಯಕ್ಷರಾದ ಮಹಮ್ಮದ್ ರಫಿ, ಮುಖಂಡರಾದ ಬಸವರಾಜ ಅಮೀನಗಡ, ನಾಗಮೋಹನ್ ಸಿಂಗ್, ರೆಡ್ಡಿ, ಸದ್ದಾಂ, ಮಲ್ಲಿಕಾರ್ಜುನ, ಚನ್ನಬಸವ ಕಲಂಗೇರಾ, ನಾಗರಾಜ, ಚಂದ್ರಶೇಖರ, ಸುರೇಶ ಸೇರಿ ಅನೇಕರಿದ್ದರು. ■

ಕಸ ಗುಡಿಸುವುದು ಶಿಕ್ಷೆಯಾದರೆ- ಪೌರ ಕಾರ್ಮಿಕರರು ಮಾಡಿದ ತಪ್ಪೇನು?

ಪ್ರಕರಣ ಒಂದರಲ್ಲಿ ದೂರು ದಾಖಲಿಸದ (ಎಫ್.ಐ.ಅರ್) ಠಾಣಾಧಿಕಾರಿಗೆ ಕರ್ನಾಟಕ ರಾಜ್ಯದ ಹೈಕೋರ್ಟಿನ ಕಲುಬುರುಗಿ ಪೀಠವು ಕಸಗುಡಿಸುವ ಶಿಕ್ಷೆ ವಿಧಿಸಿದೆ ಎಂದು ಮಾಧ್ಯಮಗಳಲ್ಲಿ ವರದಿವಾಗಿದೆ. ಇದು ನಾಗರಿಕ ಸಮಾಜದ ಅರೋಗ್ಯವನ್ನು ಕಾಪಡಲು ತಮ್ಮ ಪ್ರಾಣಗಳನ್ನು ಒತ್ತೆ ಇಟ್ಟು ಸಾಕ್ರಾಂಮಿಕ ಅರೋಗ್ಯಗಳಾದ ಕೋವಿಡ್ 19, ಚಿಕ್ಕನ್‌ಗೂನ್ಯ, ಮಲೇರಿಯಾಗಳಂತಹ ಸಂದರ್ಭಗಳಲ್ಲಿ ಪ್ರಾಣ ಒತ್ತೆ ಇಟ್ಟು ಊರಿನ ಕಸಗುಡಿಸುವ ಪೌರಕಾರ್ಮಿಕರಿಗೆ ನೋವು ಅವಮಾನ ಉಂಟುಮಾಡಿದೆ ಎಂದು ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ(ರಿ) ಸಿಐಟಿಯು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಕಸಗುಡಿಸುವುದು ದೇಶದ ಯಾವ ಕಾನೂನಿನಡಿಯಲ್ಲಿ ಶಿಕ್ಷೆ ಎಂದು ಸಂಘವು ಪ್ರಶ್ನಿಸಿದೆ.

ಗೌರವಾನ್ವಿತ ನ್ಯಾಯಮೂರ್ತಿಗಳ ಹಾಗು ನ್ಯಾಯಪೀಠದ ಈ ಅಭಿಪ್ರಾಯವು ಒಪ್ಪತಕ್ಕದಲ್ಲ ಎಂದು ಸಂಘವು ಬೇಸರ ವ್ಯಕ್ತಪಡಿಸಿದೆ. ನಾಗರಿಕ ಸಮಾಜ ಮತ್ತು ಸರ್ಕಾರಗಳು ಸ್ವಚತೆಯ ಕೆಲಸ ಹಾಗು ಕೆಲಸಮಾಡುವವರ ಬಗ್ಗೆ ತಾತ್ಸಾರ ಹಾಗು ಕೀಳು ಭಾವನೆ ಹೊಂದಿರುವುದರ ಪ್ರತೀಕವೆ ಇಂತಹ ಮನಸ್ಥಿತಿಗೆ ಕಾರಣ ಎಂದಿರುವ ಮುನಿಸಿಪಲ್ ಕಾರ್ಮಿಕರ ಸಂಘ, ಊರಿನ ಸ್ವಚತೆ ಮಾಡದೆ ಪೌರ ಕಾರ್ಮಿಕರು ಕೆಲಸ ನಿಲ್ಲಿಸಿದರೆ ಊರೂರು ಕೊಳಕು, ರೋಗ ರುಜಿನಗಳಿಗೆ ಒಳಗಾಗಿ ಸಂಕಷ್ಟಕ್ಕೆ ಸಿಲುಕುತ್ತಾರೆ. ಹಾಗಾಗಿ ಈ ಕೆಲಸವು ನಾಗರಿಕ ಸಮಾಜದ ಸ್ವಸ್ಥ ಕಾಪಾಡುವ ಕೆಲಸವಾಗಿದೆ ಎಂದು ಸಂಘ ಅಭಿಪ್ರಾಯ ಪಟ್ಟಿದೆ.

ರಾಜ್ಯದ ಮುನಿಸಿಪಾಲಿಟಿಗಳಲ್ಲಿ ಕನಿಷ್ಟ ಕೂಲಿ, ರಕ್ಷಣಾ ಸಲಕರಣೆ, 8–12 ತಿಂಗಳುಗಳು ಕಳೆದರು ಸಂಬಳಗಳಿಲ್ಲದೆ ದುಡಿಯುತ್ತಿರುವ ಎಲ್ಲಾ ಮುನಿಸಿಪಲ್ ಕಾರ್ಮಿಕರ ಸಮಸ್ಯೆಗಳತ್ತ ಗಮನ ಹರಿಸಿ ಬಗ್ಗೆಹರಿಸಲು ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ (ರಿ) ಸಿಐಟಿಯು ರಾಜ್ಯ ಸಮಿತಿ ಒತ್ತಾಯಿಸಿದೆ.

ಪೌರ ಕಾರ್ಮಿಕರನ ಮೇಲೆ ಪೋಲಿಸ್ ಹಲ್ಲೆ–ಖಂಡನೆ

ಬೆಂಗಳೂರಿನಲ್ಲಿ ಕಸದ ಅಟೋ ಚಾಲಕನ ಮೇಲೆ ಪೊಲೀಸ್ ಇನ್ಸ್‌ಪೇಕ್ಟರ್ ನಡೆಸಿರುವ ಹಲ್ಲೆಯನ್ನು ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ಸಿಐಟಿಯು ಖಂಡಿಸಿದೆ. ಈ ಹಲ್ಲೆ ನಡೆಸಿರುವ ಆಧಿಕಾರಿ ಮೇಲೆ ಕ್ರಮಕ್ಕೆ ಸರ್ಕಾರವನ್ನು ಒತ್ತಾಯಿಸಿದೆ. ■

ಕೃಷಿ ಕಾಯಕ ಮತ್ತು ಅದರ ಕಾರ್ಪೋರೇಟೀಕರಣ


ಕೃಷಿ ಕಾನೂನುಗಳ ವಿರುದ್ಧದ ಬೃಹತ್ ಚಳುವಳಿಯು ಕೇವಲ ರೈತರಿಗೆ, ಕೃಷಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಇಡೀ ದೇಶ, ಜನರು ತೀವ್ರ ಸಂಕಷ್ಟದಲ್ಲಿದ್ದಾರೆ. ಇವರ ಬಗ್ಗೆ ಸರ್ಕಾರಕ್ಕೆ ಕಾಳಜಿಯಿಲ್ಲ. ರಾಮಮಂದಿರ, ಹೊಸ ಸಂಸತ್ ಭವನ, ಪೌರತ್ವ ಕಾಯಿದೆ, ಲವ್ ಜಿಹಾದ್, ಗೋಹತ್ಯೆ ನಿಷೇಧ ಮುಂತಾದವು ಆದ್ಯತೆಯ ಸಂಗತಿಗಳಾಗಿವೆ. ರೈತರಿಗೆ ಸ್ವಾತಂತ್ರ್ಯವನ್ನು ನೀಡಲಾಗಿದೆ ಎಂದು ಪ್ರಧಾನಮಂತ್ರಿ ಅವರು ಕೃಷಿ ಕಾನೂನುಗಳ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ ಮಾನವ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತದ ಸ್ಥಾನವು 2019ರಲ್ಲಿ 94 ರಲ್ಲಿದ್ದುದು 2020ರಲ್ಲಿ 111ಕ್ಕೆ ಕುಸಿದಿದೆ. ಒಟ್ಟು 107 ದೇಶಗಳ ಪೈಕಿ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನ 94. ನೇಪಾಳ ಮತ್ತು ಬಾಂಗ್ಲಾದೇಶಗಳಿಗಿಂತ ಇದರ ಸ್ಥಾನ ಕೆಳಮಟ್ಟದಲ್ಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನವು 2019ರಲ್ಲಿ 129ರಲ್ಲಿದ್ದುದು 2020ರಲ್ಲಿ 131ಕ್ಕೆ ಕುಸಿದಿದೆ. 'ಅಚ್ಚೆ ದಿನ' ಬರುವುದಿರಲಿ, 2013-14ರಲ್ಲಿನ ಸ್ಥಿತಿಯನ್ನು ಕಾಯ್ದುಕೊಳ್ಳುವುದು ನಮಗೆ ಸಾಧ್ಯವಾಗಿಲ್ಲ. ಕೃಷಿ ಕಾನೂನುಗಳನ್ನು ಕೇಂದ್ರ ಮತ್ತು ಕರ್ನಾಟಕ ಸರ್ಕಾರಗಳು ರದ್ದುಪಡಿಸದಿದ್ದರೆ ನಮ್ಮ ಆರ್ಥಿಕ ಸ್ಥಿತಿಯು ಗಂಭೀರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.



ಪ್ರೊ. ಟಿ.ಆರ್. ಚಂದ್ರಶೇಖರ

ಸ್ವಾತಂತ್ರ್ಯೋತ್ತರ ಭಾರತವು ಕಂಡು-ಕೇಳರಿಯದ ರೀತಿಯಲ್ಲಿ-ಪ್ರಮಾಣದಲ್ಲಿ ರೈತರು ಸರ್ಕಾರದ ವಿರುದ್ಧ ಮತ್ತು ಕೃಷಿಗೆ ಸಂಬಂಧಿಸಿದ ಹೊಸ ಶಾಸನಗಳ ವಿರುದ್ಧ ಸಿಡಿದೆದ್ದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರ್ರವಿದ್ದರೂ ಅದು ಸತ್ತಂತಿದೆ. ಜನರ ಬದುಕು-ಬವಣೆಗಳಿಗೆ ಅದು ಸ್ಪಂದಿಸುತ್ತಿಲ್ಲ. ಇಂದು ನಮ್ಮ ಮುಂದಿರುವ ಸಮಸ್ಯೆಗಳನ್ನು ಹೀಗೆ ಪಟ್ಟಿ ಮಾಡಬಹುದು.

1. ಒಕ್ಕೂಟ ವ್ಯವಸ್ಥೆಗೆ ಕೃಷಿ ಕಾನೂನುಗಳ ಮೂಲಕ ಸರ್ಕಾರವು ತಿಲಾಂಜಲಿ ನೀಡುತ್ತಿದೆ. ರಾಜ್ಯಗಳ ಅಧಿಕಾರಗಳನ್ನೆಲ್ಲ ಮೊಟಕುಗೊಳಿಸುತ್ತಿರುವುದರಿಂದ (ಜಿಎಸ್‌ಟಿ ಮೂಲಕ ತೆರಿಗೆ ವಿಧಿಸುವ ಅಧಿಕಾರದಿಂದ ವಂಚನೆ, ಕೃಷಿಯನ್ನು ಸಂವಿಧಾನದ ರಾಜ್ಯಪಟ್ಟಿಯಿಂದ ತೆಗೆದು ಸಂಯುಕ್ತಪಟ್ಟಿಗೆ ಸೇರಿಸುವ ಹುನ್ನಾರ, ಶಿಕ್ಷಣವನ್ನು ಕೇಂದ್ರವೇ ನಿರ್ವಹಿಸಲು ಪ್ರಯತ್ನಿಸುತ್ತಿರುವುದರಿಂದ ದೇಶೀ ಭಾಷೆಗಳಿಗೆ ಕುತ್ತು ಮುಂತಾದವು) ಜನರ ಸಮಸ್ಯೆಗಳನ್ನು ನಿರ್ವಹಿಸುವ ಸ್ಥಿತಿಯಲ್ಲಿ ರಾಜ್ಯಗಳಿಲ್ಲ. ಏಕೆಂದರೆ ರಾಜ್ಯಗಳ ಬಳಿಯಲ್ಲಿ ಸಂಪನ್ಮೂಲವಿಲ್ಲ(ಎಲ್ಲವನ್ನು ಕೇಂದ್ರವು ಲಪಟಾಯಿಸುತ್ತಿದೆ), ಅಧಿಕಾರವಿಲ್ಲ(ಸಂವಿಧಾನವು ನೀಡಿರುವ ಹಕ್ಕುಗಳನ್ನೆಲ್ಲ ಕೇಂದ್ರವು ಪರೋಕ್ಷವಾಗಿ ಕಸಿದುಕೊಳ್ಳುತ್ತಿದೆ) ಮತ್ತು ರಾಜಕೀಯ ಇಚ್ಚಾಶಕ್ತಿ ಕೊರತೆ(ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಅಧಿಕಾರದಿಂದ ರಾಜ್ಯಮಟ್ಟದಲ್ಲಿನ ರಾಜಕೀಯ ದುರೀಣರು ಕೇಂದ್ರವನ್ನು ಪ್ರಶ್ನೆ ಮಾಡುವ ನೈತಿಕೆಯನ್ನೇ ಕಳೆದುಕೊಂಡಿದ್ದಾರೆ)ಕಾರಣದಿಂದ ರಾಜ್ಯಗಳು ಕೇಂದ್ರದ ಗುಲಾಮಸ್ಥಿತಿಗೆ ಬಂದಿರುವಂತೆ ಕಾಣುತ್ತಿದೆ.ನಮ್ಮ ಸಂವಿಧಾನ ನಮಗೆ ನೀಡಿರುವ ಒಕ್ಕೂಟ ತತ್ವಕ್ಕೆ ಇಂದು ತೀವ್ರ ಕೈಯುಂಟಾಗಿದೆ.
2. ನಮ್ಮಆರ್ಥಿಕ, ಸಾಮಾಜಿಕ, ರಾಜಕೀಯ ಸಮಸ್ಯೆಗಳಿಗೆಲ್ಲ ಪರಿಹಾರ ಖಾಸಗೀಕರಣ-ಕಾರ್ಪೋರೇಟೀಕರಣ-ಮಾರ್ಕೆಟೀಕರಣ ಎಂದು ಒಕ್ಕೂಟ(ಕೇಂದ)ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಗಳುಒಪ್ಪಿಕೊಂಡು ಅಂತಹ ನೀತಿಗಳನ್ನು ಅಳವಡಿಸಿಕೊಳ್ಳುತ್ತಿವೆ. ಅಸಮಾನತೆಯನ್ನು, ಬಡತನವನ್ನು, ನಿರುದ್ಯೋಗವನ್ನು, ಹಸಿವನ್ನು ಇವು ಹೆಚ್ಚಿಸುತ್ತವೆ ಎಂಬುದನ್ನು ಥಾಮಸ್ ಪಿಕೆಟ್ಟಿ, ಪಾಲ್ ಕೃಗ್‌ಮನ್, ಜೊಸೆಪ್ ಸ್ಟಿಗ್‌ಲಿಟ್ಜ, ಅಬಿಜಿತ್ ಬ್ಯಾನರ್ಜಿ, ಅಮರ್ತ್ಯ ಸೇನ್ ಮುಂತಾದ ಅರ್ಥವಿಜ್ಞಾನಿಗಳು ಅಧ್ಯಯನಗಳ ಮೂಲಕ ಸಾರುತ್ತಿದ್ದಾರೆ.
3. ಖಾಸಗಿ ಕೃಷಿ ಉತ್ಪನ್ನ ಮಾರುಕಟ್ಟೆಗೆ ಅನುಮತಿ ನೀಡಿ ಎಪಿಎಮ್‌ಸಿ ನಿರ್ನಾಮ ಮಾಡುತ್ತಿರುವಂತೆ ಕನಿಷ್ಠ ಬೆಂಬಲ ಬೆಲೆ (ಎಮ್‌ಎಸ್‌ಪಿ) ವ್ಯವಸ್ಥೆಯನ್ನು ಆ ಮೂಲಕ ಪಡಿತರ ವ್ಯವಸ್ಥೆಯನ್ನು ಅಪ್ರಸ್ತುತಗೊಳಿಸಲಾಗುತ್ತಿದೆ.
4. ಭುಸುಧಾರಣಾ ಕಾಯಿದೆಗೆ (1961 ಮತ್ತು 1974ರ ತಿದ್ದುಪಡಿ)2020ರಲ್ಲಿ ತಿದ್ದುಪಡಿ



RANK	COUNTRY	2020 SCORE
1-17*	China	<5
64	Sri Lanka	16.3
73	Nepal	19.5
75	Bangladesh	20.4
78	Myanmar	20.9
88	Pakistan	24.6
94	India	27.2
99	Afghanistan	30.3

*17 countries have scores of less than 5 and are collectively ranked 1-17

ತಂದು ಬಂಡವಾಳಶಾಹಿಗಳಿಗೆ ಎಲ್ಲ ಅವಕಾಶ, ಸವಲತ್ತು ಮತ್ತು ರಕ್ಷಣೆ ನೀಡಿ 'ಕೃಷಿ ಕೃಷಿಕರಿಗೆ ಮಾತ್ರವಲ್ಲ' ಎಂಬ ಹೊಸ ನಾಣ್ಣುಡಿಯನ್ನು ಘೋಷಿಸಿ ಕೃಷಿಕರನ್ನು ಬೀದಿಗೆ ಬೀಳುವಂತೆ ಮಾಡಲಾಗುತ್ತಿದೆ.

5. ಪರಿಸರ ಮತ್ತು ಹವಾಮಾನ ಬದಲಾವಣೆ ಬಗ್ಗೆ ಒಕ್ಕೂಟ-ರಾಜ್ಯ ಸರ್ಕಾರಗಳ ದಿವ್ಯ ನಿರ್ಲಕ್ಷ್ಯದಿಂದಾಗಿ ಕೃಷಿ ಭೂಮಿ, ನೀರು, ಗಾಳಿ ಮಾಲಿನ್ಯದಿಂದ ಕೃಷಿಕರ ಬದುಕು ಅಪಾಯಕ್ಕೆ ಸಿಲುಕಿದೆ.
6. ಎಪಿಎಮ್‌ಸಿಗಳನ್ನು ಅಪ್ರಸ್ತುತಗೊಳಿಸಿ ರೈತರಿಗೆ 'ಸ್ವಾತಂತ್ರ್ಯ' ನೀಡಲಾಗಿದೆ ಎಂದು ಸರ್ಕಾರ ಪ್ರಚಾರ ಮಾಡುತ್ತಿದೆ. ಸ್ವಾತಂತ್ರ್ಯದ ಅರ್ಥವೇ ಇವರಿಗೆ ಗೊತ್ತಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಉಳ್ಳವರು ಮತ್ತು ಉಳಿದವರ ನಡುವೆ ಯಾರಿಗೆ ಸ್ವಾತಂತ್ರ್ಯವನ್ನು ಚಲಾಯಿಸಲು ಸಾಧ್ಯ? ಬಂಡವಾಳಶಾಹಿಗಳಿಗೆ, ವ್ಯಾಪಾರಿ-ವಾಣಿಜ್ಯೋದ್ಯಮಿಗಳಿಗೆ, ಕಾರ್ಪೋರೇಟು ಕುಳಗಳಿಗೆ ಮಾತ್ರ ಈ ಕೃಷಿ ಕಾನೂನುಗಳು ಸ್ವಾತಂತ್ರ್ಯ ನೀಡುತ್ತವೇ ವಿನಾ ಅತಿಸಣ್ಣ, ಸಣ್ಣ ಮತ್ತು ಮಧ್ಯಮವರ್ಗದ ರೈತರಿಗೆ ಹಾಗೂ ಭೂರಹಿತ ಕೃಷಿ ಕಾರ್ಮಿಕರಿಗೆ ಇದೊಂದು ಭ್ರಮಾತ್ಮಕ ಸ್ವಾತಂತ್ರ್ಯವನ್ನು ನೀಡಬಲ್ಲದು.
7. ರಾಜ್ಯ ವಿಧಾನಸಭೆಯಲ್ಲಿ ಸಕಾರವು ರಾಜಾರೋಷವಾಗಿ 'ಯಾರು ಬೇಕಾದರೂ ಕೃಷಿ ಮಾಡಬಹುದು' ಎಂದು ಘೋಷಿಸಿದೆ. ಇದಕ್ಕಾಗಿ ಕರ್ನಾಟಕ ಭೂಸುಧಾರಣಾ ಕಾಯಿದೆಯ ಸೆಕ್ಷನ್ 79(ಎ) ಮತ್ತು (ಬಿ)ಗಳನ್ನು ನಿರಸನಗೊಳಿಸಿ ರಿಯಲ್ ಎಸ್ಟೇಟ್‌ನವರು, ವಾಣಿಜ್ಯೋದ್ಯಮಿಗಳು, ಕಪ್ಪುಹಣದ ದಳ್ಳಾಳಿಗಳು, ಮಠಗಳು-ಸ್ವಾಮಿಗಳು ಮುಂತಾದವರಿಗೆ ಕೃಷಿ ಭೂಮಿಯನ್ನು ವರಮಾನದ ಮಿತಿಯಲ್ಲದೆ ಕೊಳ್ಳಲು ಅವಕಾಶ ನೀಡಲಾಗಿದೆ.
8. ನಮ್ಮ ರಾಜ್ಯದಲ್ಲಿ 2011ರ ಜನಗಣತಿ ಪ್ರಕಾರ ಸಾಗುವಳಿಗಾರರ ಸಂಖ್ಯೆ 65.80 ಲಕ್ಷವಾದರೆ ಭೂರಹಿತ ಕೃಷಿ ಕಾರ್ಮಿಕರ ಸಂಖ್ಯೆ 71.52 ಲಕ್ಷ.ಸರ್ಕಾರವು ರೂಪಿಸಿರುವ ಕೃಷಿ ಕಾಯಿದೆಗಳಲ್ಲಿ 71.52 ಲಕ್ಷ ಭೂರಹಿತ ಕೃಷಿ ಕಾರ್ಮಿಕರ ಬಗ್ಗೆ ಚಕಾರವೆತ್ತಿಲ್ಲ. ಅತಿಸಣ್ಣ ಮತ್ತು ಸಣ್ಣ ಹಿಡುವಳಿಗಾರರು ಈಗ ಭೂರಹಿತ ಕೃಷಿ ಕಾರ್ಮಿಕರಾಗುತ್ತಿದ್ದಾರೆ. ಉದಾ: ಒಟ್ಟು ದುಡಿಮೆಗಾರರಲ್ಲಿ ಸಾಗುವಳಿಗಾರರ ಪ್ರಮಾಣ 2001 ರಲ್ಲಿ ಶೇ. 29.25 ರಷ್ಟಿದ್ದುದು 2011ರಲ್ಲಿ ಇದು ಶೇ. 23.61ಕ್ಕಿಳಿದಿದೆ. ಇದು ಏನನ್ನು ಸೂಚಿಸುತ್ತಿದೆ? ರೈತರು ದಿವಾಳಿಯಾಗುತ್ತಿರುವುದನ್ನು ಎತ್ತಿ ತೋರಿಸುತ್ತಿದೆ. ಇವರ ಬಗ್ಗೆ ಸರ್ಕಾರದ ಯಾವುದೇ ಕಾರ್ಯಕ್ರಮವಿಲ್ಲ.
9. ಕಾರ್ಮಿಕರ ಬಗ್ಗೆ ಇಂದು ಸರ್ಕಾರಗಳಿಗೆ ಅಪಾರ ದ್ವೇಷವಿದೆ. ಅವರ ವಿರುದ್ಧ ಕ್ರೌರ್ಯವನ್ನು ಸರ್ಕಾರಗಳು ಮೆರೆಯುತ್ತಿವೆ. ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಮಿಕರ ಬಗ್ಗೆ, ವಲಸೆ ಕಾರ್ಮಿಕರ ಬಗ್ಗೆ ಸರ್ಕಾರ ತೋರಿದ ರಾಕ್ಷಸೀ ಪ್ರತಿಕ್ರಿಯೆ ಇನ್ನೂ ನಮ್ಮ ಮುಂದೆ ಹಸಿರಾಗಿದೆ. ಕೈಗಾರಿಕೆಗಳು ಯಾವ ಎಗ್ಗೂ ಇಲ್ಲದೆ ಕಾರ್ಮಿಕ ಕಾಯಿದೆ ಉಲ್ಲಂಘಿಸಿ 10 ರಿಂದ 12 ಗಂಟೆ ದುಡಿಸಿಕೊಳ್ಳುತ್ತಿವೆ. ಇದಕ್ಕೆ ಸರ್ಕಾರ ಈಗ ಕಾಯಿದೆ ರೂಪ ಮತ್ತು ರಕ್ಷಣೆ ನೀಡಲು ಹೊರಟಿದೆ. ಕಾರ್ಮಿಕ ಸಂಘಗಳ ವಿರುದ್ಧ ಸರ್ಕಾರಗಳು ಕೆಂಡ ಕಾರುತ್ತಿವೆ. ಕಾರ್ಮಿಕರು ಆರ್ಥಿಕತೆಯ ಮೂಲದ್ರವ್ಯ ಎಂಬುದನ್ನು ಮರೆತು ಕೈಗಾರಿಕೋದ್ಯಮಿಗಳನ್ನು 'ವೆಲ್ಥ್ ಕ್ರಿಯೇಟರ್ಸ್' ಎಂದು ಅವರನ್ನು ವೈಭವೀಕರಿಸಲಾಗುತ್ತಿದೆ. ವಾಣಿಜ್ಯಪತಿಗಳನ್ನು ಓಲೈಸುವುದೇ ಸರ್ಕಾರದ ಮೂಲ ನೀತಿಯಾಗಿರುವಂತೆ ಕಾಣುತ್ತಿದೆ. 'ಅವರನ್ನು ಅನುಮಾನದಿಂದ ನೋಡಬಾರದು, ಅವರನ್ನು ಅವಮಾನಿಸಬಾರದು, ಅವರಿಲ್ಲದಿದ್ದರೆ ಬಡತನವನ್ನು ನಿವಾರಿಸುವವರಾರು' ಎಂಬ ಅಪದ್ಧ ಪ್ರತಿಕ್ರಿಯೆಯನ್ನು ಸರ್ಕಾರ ನೀಡುತ್ತಿದೆ.
10. ಗುತ್ತಿಗೆಕೃಷಿಯನ್ನುಕಾನೂನುಬದ್ಧಗೊಳಿಸಲಾಗಿದೆ. ಗುತ್ತಿಗೆ ಪದ್ಧತಿಯಲ್ಲಿ ರೈತರು ಭೂಮಿಯನ್ನು ಕಳೆದುಕೊಳ್ಳುವ ಅಪಾಯದ ಬಗ್ಗೆ ಕೇಳಿದಾಗ ಸರ್ಕಾರವು ಬೆಳೆಯನ್ನು ಗುತ್ತಿಗೆ ನೀಡಲಾಗುತ್ತದೆಯೇ ವಿನಾ ಭೂಮಿಯನ್ನಲ್ಲ ಎಂಬ ಉಡಾಫೆ ಉತ್ತರ ನೀಡಿದೆ. ಗುತ್ತಿಗೆ ವ್ಯವಸ್ಥೆಯಲ್ಲಿ ಯಾರು ಬಂಡವಾಳ, ಅಧಿಕಾರ ಮತ್ತು ರಾಜಕೀಯ ಶಕ್ತಿ ಪಡೆದಿರುತ್ತಾರೋ ಅವರಿಗೆ ಅನುಕೂಲವಾಗುತ್ತದೆ ಎಂಬದು ಸಾಬೀತಾಗಿರುವುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ.
11. ನಮ್ಮ ರಾಜ್ಯದಲ್ಲಿ 2015-16 ರಿಂದ 2019-2020ರ ಅವಧಿಯಲ್ಲಿ ಹಸಿವಿನ ಹಾಹಾಕಾರದಲ್ಲಿ ಏರಿಕೆಯಾಗಿದೆ. ಅಪೌಷ್ಟಿಕತೆಯನ್ನು ಮುಚ್ಚಿಟ್ಟ ಹಸಿವು ಎನ್ನಲಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5 ರ ಪ್ರಕಾರ ನಮ್ಮ ರಾಜ್ಯದಲ್ಲಿ 6 ರಿಂದ 59 ತಿಂಗಳ ವಯೋಮಾನದ ಒಟ್ಟು ಮಕ್ಕಳಲ್ಲಿ ರಕ್ತಹೀನತೆ ಎದುರಿಸುತ್ತಿರುವ ಮಕ್ಕಳ ಪ್ರಮಾಣ 2015-16ರಲ್ಲಿ ಶೇ. 60.9 ರಷ್ಟಿದ್ದುದು 2019-2020ರಲ್ಲಿ ಶೇ.65.5 ರಷ್ಟಾಗಿದೆ. ಇದೇ ರೀತಿಯಲ್ಲಿ 15 ರಿಂದ 49 ವರ್ಷಗಳ ವಯೋಮಾನದ ಒಟ್ಟು ಮಹಿಳೆಯರಲ್ಲಿ ರಕ್ತಹೀನತೆಯು ಎದುರಿಸುತ್ತಿರುವ ಮಹಿಳೆಯರ ಪ್ರಮಾಣ ಇದೇ ಅವಧಿಯಲ್ಲಿ ಶೇ. 44.8 ರಿಂದ ಶೇ. 47.8 ಕ್ಕೇರಿಕೆಯಾಗಿದೆ. ಇದು ಕೋವಿಡ್ ಪೂರ್ವದಲ್ಲಿ ನಡೆದ ಸಮೀಕ್ಷೆಯಾಗಿದೆ. ಕೋವಿಡ್ ಅವಧಿಯಲ್ಲಿ ಇದು ಮತ್ತಷ್ಟು ಉಲ್ಬಣಗೊಂಡಿಲಿಕ್ಕೆ ಸಾಕು. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಇದು ಆತಂಕಕಾರಿಯಾಗಿ ಏರಿಕೆಯಾಗಿದೆ.
12. ಅಸಮಾನತೆ, ಬಡತನ, ಹಸಿವು, ಅಪೌಷ್ಟಿಕತೆ, ಹಿಂದುಳಿದ ಜಿಲ್ಲೆಗಳ ಸ್ಥಿತಿಗತಿ ಮುಂತಾದ ಸಂಗತಿಗಳ ಬಗ್ಗೆ ಸರ್ಕಾರಗಳು ಚರ್ಚೆ ಮಾಡುವುದಿರಲಿ, ಅವುಗಳನ್ನು ಉಚ್ಚರಿಸಲಿಕ್ಕೂ ಹಿಂಜರಿಯುತ್ತಿವೆ. ಉದಾ; ಯಾದಗಿರ್, ರಾಯಚೂರು, ಕೊಪ್ಪಳ ಮುಂತಾದ ಹಿಂದುಳಿದ ಜಿಲ್ಲೆಗಳಲ್ಲಿ ಒಟ್ಟು ಮಕ್ಕಳಲ್ಲಿ ಅನೀಮಿಯದಿಂದ ನರಳುತ್ತಿರುವ ಮಕ್ಕಳ ಪ್ರಮಾಣವು ಶೇ. 70 ಕ್ಕಿಂತ ಅಧಿಕವಾಗಿದೆ. ಎಮ್‌ಎಸ್‌ಪಿ ಅಪ್ರಸ್ತುತವಾದರೆ ಪಡಿತರ ವ್ಯವಸ್ಥೆಯು ನಾಶವಾಗುತ್ತದೆ. ಈಗಾಗಲೆ ಕೋವಿಡ್‌ನಿಂದಾಗಿ ಶಾಲೆಗಳಲ್ಲಿ ಮಕ್ಕಳಿಗೆ ಬಿಸಿಯೂಟವಿಲ್ಲ. ಅದಕ್ಕೆ ಪರ್ಯಾಯವಾಗಿ ಆಹಾರ ಪದಾರ್ಥ ನೀಡುವ ಕ್ರಮವೂ ಕಳೆದ ಜೂನ್‌ನಿಂದ ನಿಂತು ಹೋಗಿದೆ. ಅಂಗನವಾಡಿಗಳಲ್ಲಿ ಪೌಷ್ಟಿಕ ಆಹಾರಮತ್ತು ಪೋಲಿಕ್ ಗುಳಿಗೆಗಳ ವಿತರಣೆಯೂ ಇಲ್ಲ.

ಕೊನೆಯದಾಗಿ ಕೃಷಿ ಕಾನೂನುಗಳ ವಿರುದ್ಧದ ಬೃಹತ್ ಚಳುವಳಿಯು ಕೇವಲ ರೈತರಿಗೆ, ಕೃಷಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಇಡೀ ದೇಶ, ಜನರು ತೀವ್ರ ಸಂಕಷ್ಟದಲ್ಲಿದ್ದಾರೆ. ಇವರ ಬಗ್ಗೆ ಸರ್ಕಾರಕ್ಕೆ ಕಾಳಜಿಯಿಲ್ಲ. ರಾಮಮಂದಿರ, ಹೊಸ ಸಂಸತ್ ಭವನ, ಪೌರತ್ವ ಕಾಯಿದೆ, ಲವ್ ಜಿಹಾದ್, ಗೋಹತ್ಯೆ ನಿಷೇಧ ಮುಂತಾದವು ಆದ್ಯತೆಯ ಸಂಗತಿಗಳಾಗಿವೆ. ರೈತರಿಗೆ ಸ್ವಾತಂತ್ರ್ಯವನ್ನು ನೀಡಲಾಗಿದೆ ಎಂದು ಪ್ರಧಾನಮಂತ್ರಿ ಅವರು ಕೃಷಿ ಕಾನೂನುಗಳ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ ಮಾನವ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತದ ಸ್ಥಾನವು 2019ರಲ್ಲಿ 94 ರಲ್ಲಿದ್ದುದು 2020ರಲ್ಲಿ 111ಕ್ಕೆ ಕುಸಿದಿದೆ. ಒಟ್ಟು 107 ದೇಶಗಳ ಪೈಕಿ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನ 94. ನೇಪಾಳ ಮತ್ತು ಬಾಂಗ್ಲಾದೇಶಗಳಿಗಿಂತ ಇದರ ಸ್ಥಾನ ಕೆಳಮಟ್ಟದಲ್ಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನವು 2019ರಲ್ಲಿ 129ರಲ್ಲಿದ್ದುದು 2020ರಲ್ಲಿ 131ಕ್ಕೆ ಕುಸಿದಿದೆ. 'ಅಚ್ಚೆ ದಿನ' ಬರುವುದಿರಲಿ, 2013-14ರಲ್ಲಿನ ಸ್ಥಿತಿಯನ್ನು ಕಾಯ್ದುಕೊಳ್ಳುವುದು ನಮಗೆ ಸಾಧ್ಯವಾಗಿಲ್ಲ. ಕೃಷಿ ಕಾನೂನುಗಳನ್ನು ಕೇಂದ್ರ ಮತ್ತು ಕರ್ನಾಟಕ ಸರ್ಕಾರಗಳು ರದ್ದುಪಡಿಸದಿದ್ದರೆ ನಮ್ಮ ಆರ್ಥಿಕ ಸ್ಥಿತಿಯು ಗಂಭೀರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.



ದೇಶವನ್ನು ಅಡಿಯಾಳು ಮಿಲಿಟರಿ ಮಿತ್ರನಾಗಿಸಿದ್ದಕ್ಕೆ ಒಂದು ಪ್ರಶಸ್ತಿ!

ಪ್ರಕಾಶ ಕಾರಟ್

ಟ್ರಂಪ್ ಶ್ವೇತಭವನದಲ್ಲಿನ ತನ್ನ ಕೊನೆಯ ದಿನಗಳಲ್ಲಿ, ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಗೊಳಗಾದ ಮಾಜಿ ಜತೆಗಾರರಿಗೆ ಕ್ಷಮಾದಾನವನ್ನು ನೀಡಿದ್ದಾರೆ. ತನ್ನ ಹಲವಾರು ಅನುಚರರನ್ನು ಒಳ್ಳೆಯ ಸಂಬಳದ ಹುದ್ದೆಗಳಿಗೆ ನೇಮಕಮಾಡುತ್ತಿದ್ದಾರೆ ಮತ್ತು ಪರದೇಶಗಳ ತನ್ನ ಆತ್ಮೀಯ ಗೆಳೆಯರನ್ನೂ ಅವರು ಮರೆತಿಲ್ಲ!

ಮೋದಿಯವರು ಗೌರವದ ಸಂಭ್ರಮ, ಸಡಗರದಲ್ಲಿ ಇರಬಹುದಾದರೂ, ದುರದೃಷ್ಟದ ಸಂಗತಿಯೆಂದರೆ ಈ ಪ್ರಶಸ್ತಿಯು ಭಾರತವು ಅಮೆರಿಕದ ಅಡಿಯಾಳು ಮಿಲಿಟರಿ ಮಿತ್ರನಾಗಿ ಬಿಟ್ಟಿರುವುದಕ್ಕೆ ಸಂದಿರುವ ಒಂದು ಸ್ವೀಕೃತಿ ರಸೀದಿ!



ಲೀಜನ್ ಆಫ್ ಮೆರಿಟ್ ಅಂದರೆ 'ಯೋಗ್ಯ ತುಕಡಿ'!

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ "ಲೀಜನ್ ಆಫ್ ಮೆರಿಟ್" ಪ್ರಶಸ್ತಿಯನ್ನು ದಯಪಾಲಿಸಿರುವುದು ಕುತೂಹಲಕಾರಿಯಾಗಿದೆ. "ಲೀಜನ್ ಆಫ್ ಮೆರಿಟ್" ಮೂಲತಃ ಅಮೆರಿಕಾದ ಅಧ್ಯಕ್ಷರು ಪ್ರದಾನ ಮಾಡುವ ಒಂದು ಸೈನಿಕ ಮರ್ಯಾದೆ. ಈ ಹಿಂದೆ ಮುಖ್ಯವಾಗಿ ಇತರೆ ದೇಶಗಳ ಸಶಸ್ತ್ರ ಪಡೆಗಳ ಮುಖ್ಯಸ್ಥರಿಗೆ, ಜನರಲ್‌ಗಳಿಗೆ, ಸೇನಾಧಿಪತಿಗಳಿಗೆ ನೀಡುತ್ತಿದ್ದ ಕಮ್ಯಾಂಡರ್ ಇನ್ ಚೀಫ್(ಸೇನಾಧಿಪತಿ) ವಿಧದ ಪ್ರಶಸ್ತಿಯದು. ಕೇವಲ ಕೈಬೆರಳೆಣಿಕೆಯಷ್ಟು ದೇಶಗಳ ನಾಯಕರಿಗೆ, ಅಥವಾ, ಸರ್ಕಾರದ ಮುಖ್ಯಸ್ಥರಿಗೆ ಮತ್ತು ಅಮೆರಿಕಾದೊಂದಿಗೆ ಅತ್ಯಂತ ಆಪ್ತ ಮಿಲಿಟರಿ ಮಿತ್ರತ್ವ ಹೊಂದಿದ್ದವರಿಗೆ ಮಾತ್ರ ಅದನ್ನು ನೀಡಲಾಗಿದೆ.

ಕಳೆದ 29 ವರ್ಷಗಳಲ್ಲಿ ಅಮೆರಿಕಾದ ಹೊರಗಿನ ಯಾರಿಗೂ "ಲೀಜನ್ ಆಫ್ ಮೆರಿಟ್" ಪ್ರದಾನ ಮಾಡಿಲ್ಲ. ನಿಜ ಹೇಳಬೇಕೆಂದರೆ, ಅಮೆರಿಕಾದ ಅತ್ಯಂತ ಉನ್ನತ ನಾಗರಿಕ ಮರ್ಯಾದೆ, 1963ರಲ್ಲಿ ಸ್ಥಾಪಿಸಲ್ಪಟ್ಟ ''ಪ್ರಸಿಡೆನ್ಶಿಯಲ್ ಮೆಡಲ್ ಆಫ್ ಫ್ರೀಡಂ'(ಅಧ್ಯಕೀಯ ಸ್ವಾತಂತ್ರ್ಯದ ಪದಕ) ಪ್ರಶಸ್ತಿಯನ್ನು ಪಾರಂಪರಿಕವಾಗಿ ಎಲ್ಲಾ ಅಧ್ಯಕ್ಷರುಗಳು ,ವಿದೇಶಿ ರಾಜಕೀಯ ಮುತ್ಸದ್ದಿಗಳಿಗೆ ಮತ್ತು ಅಸಾಧಾರಣ ವ್ಯಕ್ತಿಗಳಿಗೆ ಕೊಡಲಾಗುತ್ತಿದೆ. ಪ್ರಾಸಂಗಿಕವಾಗಿ, ಏಕೈಕ ಭಾರತೀಯ ಪ್ರಜೆ, ಮದರ್ ಥೆರೇಸಾ ಅವರಿಗೆ 1985 ರಲ್ಲಿ ಈ ಪ್ರಶಸ್ತಿ ದೊರಕಿದೆ.

ಆದರೆ ಟ್ರಂಪ್ ಅವರು ಮೋದಿಯವರಿಗೆ ಮುಖ್ಯವಾಗಿ ಸೇನಾ ಮರ್ಯಾದೆಯೆಂದು ಕರೆಸಿಕೊಳ್ಳುವ ಪ್ರಶಸ್ತಿಯನ್ನು ಪ್ರದಾನ ಮಾಡಿದ್ದಾರೆ. ಅವರು "ಜಾಗತಿಕ ಸವಾಲುಗಳನ್ನು ಎದುರಿಸಲು ಅಮೆರಿಕಾ ಮತ್ತು ಭಾರತದ ನಡುವೆ ಸಾಮರಿಕ ಪಾಲುದಾರಿಕೆಯನ್ನು ಮೇಲಕ್ಕೇರಿಸಿದ್ದಕ್ಕೆ" ಎಂದು ಪ್ರಶಸ್ತಿಪತ್ರದಲ್ಲಿ ನಮೂದಾಗಿದೆ. ಇದು ಅವರು ಅಮೆರಿಕಾದ ಮಿಲಿಟರಿ ಮಿತ್ರನೆಂದು ಅವರು ಪಡೆದಿರುವ ನೂತನ ಪಾತ್ರ ವಹಿಸಿಕೊಂಡಿರುವುದಕ್ಕೆ ಒಂದು ಉಪಕಾರ ಸ್ಮರಣೆಯಾಗಿದೆ.

ಆ ಪ್ರಶಸ್ತಿಪತ್ರದ ಪ್ರಕಾರ, ಮೋದಿಯವರು ಭಾರತದ ಪ್ರಧಾನ ಮಂತ್ರಿಯಾಗಿ ಬಹುಮಾನಯೋಗ್ಯ ಸೇವೆ ಸಲ್ಲಿಸಿದ್ದಾರೆ; ಈ ಸೇವೆಯಲ್ಲಿ, ಅಮೆರಿಕಾದ ಪ್ರಕಾರ 'ಸೇನಾ ಸಾಗಾಣಿಕೆ ಪೂರೈಕೆ ಒಪ್ಪಂದ'(ಎಲ್.ಇ.ಎಂ.ಒ.ಎ.) ಹಾಗೂ ಆನಂತರ ಇನ್ನೆರಡು ತಳಹದಿಯ ಒಪ್ಪಂದಗಳಿಗೆ ಸಹಿ ಮಾಡುವ ಮೂಲಕ ಭಾರತವನ್ನು ಅಮೆರಿಕಾದ ಮಿಲಿಟರಿ ಮಿತ್ರನಾಗಿ ಪರಿವರ್ತನೆ ಮಾಡುವಲ್ಲಿ ಕೈಗೊಂಡ ನಿರ್ಣಾಯಕ ಕ್ರಮಗಳು ಸೇರಿವೆ.

ಟ್ರಂಪ್ ಈ ಪ್ರಶಸ್ತಿಯನ್ನು ಅದೇ ಸಮಯದಲ್ಲಿ ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ ಸ್ಕಾಟ್ ಮಾರಿಸನ್, ಹಾಗೂ ಇತ್ತೀಚಿನವರೆಗೂ ಜಪಾನಿನ ಪ್ರಧಾನ ಮಂತ್ರಿಯಾಗಿದ್ದ ಶಿಂಜೋ ಅಬೆಯವರಿಗೂ ನೀಡಿದ್ದಾರೆ. ಈ ಮೂವರೂ ಅಮೆರಿಕಾ ನೇತೃತ್ವದ ಚತುಷ್ಕೋನ ಮೈತ್ರಿಕೂಟ(ಕ್ವಾಡ್)ದಲ್ಲಿ ತಮ್ಮ ದೇಶಗಳನ್ನು ತಂದು ನಿಲ್ಲಿಸಲು ಸಾಧನವಾದವರು. ಅಮೆರಿಕಾದ ಸೈನಿಕ ವ್ಯವಸ್ಥೆಯಾದ ಪೆಂಟಗನ್ ಇದನ್ನು ಒಂದು ಮಿಲಿಟರಿ ಮೈತ್ರಿಕೂಟವಾಗಿ ನಿರೀಕ್ಷಿಸಿತ್ತು.

ಈ ಮೂವರಿಗೆ ಲೀಜನ್ ಪ್ರಶಸ್ತಿಯನ್ನು ಟ್ರಂಪಿನೊಂದಿಗೆ ಮಿಲಿಟರಿ ಪಾಲುದಾರಿಕೆ ರಚಿಸಿಕೊಂಡ ಕಾರಣಕ್ಕಾಗಿ ನೀಡಿದ್ದಷ್ಟೇ ಅಲ್ಲ, ಅದಕ್ಕೂ ಹೆಚ್ಚಿನದ್ದು ಇನ್ನೂ ಇದೆ. ಈ ಮೂವರೂ ಬಲಪಂಥೀಯ ನಾಯಕರಾಗಿದ್ದು ಟ್ರಂಪ್‌ರೊಂದಿಗೆ ಅವರು ಆಪ್ತ ರಾಜಕೀಯ ಅನ್ಯೋನ್ಯತೆಯನ್ನು ಪ್ರಕಟಪಡಿಸಿರುವವರು.

ಸೆಪ್ಟೆಂಬರ್ 29ರಂದು ಹೂಸ್ಟನ್ ರ್‍ಯಾಲಿಯಲ್ಲಿ ಮೋದಿಯವರು ಟ್ರಂಪ್ ಅವರನ್ನು ಅನುಮೋದಿಸಿದ್ದರೆ, ಮಾರಿಸನ್ ಓಹಿಯೋದ ವಪಕೊನೆಟಾದಲ್ಲಿ ಅದೇ ತಿಂಗಳು ಟ್ರಂಪ್ ಅವರ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಅಲ್ಲಿ ಹೂಸ್ಟನ್‌ನಲ್ಲಿ ಮೋದಿಯವರು "ಅಬ್ ಕಿ ಬಾರ್ ಟ್ರಂಪ್ ಸರ್ಕಾರ್" ಎಂದು ಮತ್ತೆ ಮತ್ತೆ ಹೇಳುತ್ತಲೇ ಇದ್ದರೆ, ಅತ್ತ ಮಾರಿಸನ್ ಜಾಗರೂಕರಾಗಿದ್ದು "ನಾವು ಬಹಳಷ್ಟು ಸಮಾನ ಅಭಿಪ್ರಾಯಗಳನ್ನು ಹೊಂದಿದ್ದೇವೆ" ಎಂದು ಟ್ರಂಪ್ ಬಗ್ಗೆ ಕೇಳಿದಾಗ ಹೇಳಿದರು. ಇನ್ನು ಶಿಂಜೋ ಅಬೆಯವರು ಟ್ರಂಪ್ ಜತೆ ತೀರ ಆಪ್ತ ಸಂಬಂಧಗಳನ್ನು ಹೊಂದಿದ್ದರು ಮತ್ತು ಗೋಲ್ಫ್ಆಟದ ಗೆಳೆಯರಾಗಿದ್ದರು.

ತನ್ನ ಸೈದ್ಧಾಂತಿಕ ಗಾಢಸ್ನೇಹಿತರಾದ ಇಸ್ರೇಲಿನ ಪ್ರಧಾನ ಮಂತ್ರಿ ಬೆಂಜಮಿನ್ ನೆತಾನ್ಯಾಹು ಮತ್ತು ಬ್ರೆಜಿಲಿನ ಅಧ್ಯಕ್ಷ ಜೈರ್ ಬೊಲ್ಸನಾರೊ ಅವರಿಗೆ ಈ ಪ್ರಶಸ್ತಿಯನ್ನು ನೀಡದೇ ಇರುವುದು, ಅದು ಪ್ರಾಸಂಗಿಕವಾಗಿ ಪೆಂಟಗನ್-ಆಧಾರಿತ ನಿರ್ಧಾರವೆಂಬುದು ಸಾಬೀತಾಗುತ್ತದೆ. ನೂತನ ಹಾಗೂ ಮಹತ್ವದ ಮಿಲಿಟರಿ ಮೈತ್ರಿಕೂಟದವರಿಗೆ ಮಾತ್ರ ಪ್ರಶಸ್ತಿ ನೀಡುವುದು ಟ್ರಂಪಿನ ಸ್ಪಷ್ಟ ಉದ್ದೇಶವಾಗಿದೆ.

ಟ್ರಂಪ್ ಶ್ವೇತಭವನದಲ್ಲಿನ ತನ್ನ ಕೊನೆಯ ದಿನಗಳಲ್ಲಿ, ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಗೊಳಗಾದ ತಮ್ಮ ಮಾಜಿ ಸಲಹೆಗಾರ ಮೈಕೇಲ್ ಫ್ಲಿನ್ ನಂತಹ ಜತೆಗಾರರಿಗೆ ತಬ್ಬಿಬ್ಬುಗೊಳಿಸುವಂಥಾ ಕ್ಷಮಾದಾನವನ್ನು ನೀಡಿದ್ದಾರೆ. ತನ್ನ ಹಲವಾರು ಅನುಚರರನ್ನು ಒಳ್ಳೆಯ ಸಂಬಳದ ಹುದ್ದೆಗಳಿಗೆ ನೇಮಕಮಾಡುತ್ತಿದ್ದಾರೆ ಮತ್ತು ಪರದೇಶದ ತನ್ನ ಆತ್ಮೀಯ ಗೆಳೆಯರನ್ನೂ ಅವರು ಮರೆತಿಲ್ಲ.

ಅಧ್ಯಕ್ಷ ಟ್ರಂಪ್ ಅವರು ಪ್ರದಾನ ಮಾಡಿದ ಪ್ರಶಸ್ತಿಯಿಂದ ತಾನು "ಗಾಢವಾಗಿ ಗೌರವಿಸಲ್ಪಟ್ಟಿದ್ದೇನೆ" ಎಂದು ಹೇಳಿದ ಮೋದಿಯವರು ಭಾರತ-ಅಮೆರಿಕಾ ಬಾಂಧವ್ಯವನ್ನು ಇನ್ನೂ ಬಲಪಡಿಸಲು ಅಮೆರಿಕಾ ಸರ್ಕಾರದೊಂದಿಗೆ ಮುಂದೆಯೂ ಕೆಲಸ ಮಾಡುವುದಾಗಿ ಭಾರತದ 130 ಕೋಟಿ ಜನರ ಪರವಾಗಿ ಪ್ರತಿಜ್ಞೆ ಮಾಡಿದ್ದಾರೆ. ಆದರೆ ಮೋದಿಯವರು ಪ್ರಾಯಶಃ ಅಮೆರಿಕದ ಪ್ರಶಸ್ತಿಯ ಹಿನ್ನೆಲೆಯ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆದಂತಿಲ್ಲ. ಈ ಮುಂಚೆ ಈ ಪ್ರಶಸ್ತಿಯನ್ನು ಪಡೆದ ಕೇವಲ ಇಬ್ಬರು ಭಾರತೀಯರೆಂದರೆ 1950ರಲ್ಲಿ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಮತ್ತು 1955 ರಲ್ಲಿ ಎಸ್. ಎಂ.ಶ್ರೀನಾಗೇಶ್. ಇಬ್ಬರೂ ಸೇನಾ ದಂಡನಾಯಕರಾಗಿ ಬ್ರಿಟಿಷ್ ಸೇನೆಯ ಅಧಿಕಾರಿಗಳಾಗಿ ಎರಡನೇ ಮಹಾಯುದ್ಧದಲ್ಲಿ ಕಾದಾಡಿದ್ದರು. ಆಗಿನ ದಿನಗಳಲ್ಲಿ, ಈ ಲೀಜನ್ ಪ್ರಶಸ್ತಿಯನ್ನು ಜಗತ್ತಿನಾದ್ಯಂತ ಹಲವಾರು ಸೇನಾ ಮುಖ್ಯಸ್ಥರಿಗೆ ಪ್ರದಾನ ಮಾಡಲಾಗಿದೆ. ಅಂತಹ ಪ್ರಶಸ್ತಿ ಪುರಸ್ಕೃತರಲ್ಲಿ ನೇಪಾಳದ ಸೇನಾ ಮುಖ್ಯಸ್ಥರೂ ಒಬ್ಬರು.

ಮೂರು ದಶಕಗಳಲ್ಲಿ, ಈ ಪ್ರಶಸ್ತಿಯನ್ನು ಯಾರಿಗೂ ನೀಡಿರಲಿಲ್ಲ. ಈಗ ಟ್ರಂಪ್ ಅವರು ಹಠಾತ್ತಾಗಿ ಅದನ್ನು ಮತ್ತೆ ಅಸ್ತಿತ್ವಕ್ಕೆ ತಂದು ವಿದೇಶಿ ನಾಯಕರುಗಳಿಗೆ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಈ ವರ್ಷದ ಸೆಪ್ಟೆಂಬರ್‌ನಲ್ಲಿ ಈ ಪ್ರಶಸ್ತಿಯನ್ನು ಕುವೈತ್‌ನ ದಿವಂಗತ ಅಮೀರ್ ಅವರಿಗೆ ದಯಪಾಲಿಸಿದ್ದಾರೆ. ಚೀನಾ ವಿರುದ್ಧದ ತಮ್ಮ ಹೋರಾಟದಲ್ಲಿ ಜತೆಯಾಗಿ ನಿಂತವರಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ತಮ್ಮ ಅಧಿಕಾರಾವಧಿಯ ಕೊನೆ ದಿನಗಳಲ್ಲಿ ಟ್ರಂಪ್ ಇಂತಹ ಪ್ರಶಸ್ತಿಯನ್ನು ಹಂಚುತ್ತಿದಾರೆ. ಪೆಂಟಗನ್ ಮಿಲಿಟರಿ ಮೈತ್ರಿಕೂಟ ಬಲಪಡಿಸುವಲ್ಲಿ ಬಹಳವಾಗಿ ಕೂಲಿ ಸೈನಿಕ ಉದ್ದೇಶವನ್ನು ಹೊಂದಿದೆ.

ಮೋದಿಯವರು ಗೌರವದ ಸಂಭ್ರಮ, ಸಡಗರದಲ್ಲಿರಬಹುದಾದರೂ, ದುರದೃಷ್ಟದ ಸಂಗತಿಯೆಂದರೆ, ಈ ಪ್ರಶಸ್ತಿಯು ಭಾರತವು ಅಮೆರಿಕದ ಅಡಿಯಾಳು ಮಿಲಿಟರಿ ಮಿತ್ರನಾಗಿ ಬಿಟ್ಟಿರುವುದಕ್ಕೆ ಕೊಟ್ಟಿರುವ ಒಂದು ಸ್ವೀಕೃತಿ ರಸೀದಿಯಷ್ಟೆ.

ಅನು: ಟಿ. ಸುರೇಂದ್ರ ರಾವ್

"ಜನರಿಂದ ಕಸಿದುಕೊಂಡ ಹಕ್ಕುಗಳನ್ನು ಮರಳಿಸಬೇಕು"
ಜಮ್ಮು ಮತ್ತು ಕಾಶ್ಮೀರ ಡಿ.ಡಿ.ಸಿ. ಚುನಾವಣೆಗಳ ಜನಾದೇಶ

ಜಮ್ಮು ಮತ್ತು ಕಾಶ್ಮೀರದಲ್ಲಿ ಹೊಸದಾಗಿ ರಚಿಸಿದ 'ಜಿಲ್ಲಾ ಅಭಿವೃದ್ಧಿ ಮಂಡಳಿ' (ಡಿಡಿಸಿ)ಚುನಾವಣೆಗಳಲ್ಲಿ ತನ್ನ ಧೋರಣೆಗಳಿಗೆ ಜಯ ಸಿಕ್ಕಿದೆ ಎಂದು ಬಿಜೆಪಿ ಹೇಳುತ್ತಿದೆ, ಮುಖ್ಯಧಾರೆಯ ಮಾಧ್ಯಮಗಳು ಅದಕ್ಕೆ ಸೈ ಎನ್ನುತ್ತಿವೆ. ಆದರೆ ಈ ಫಲಿತಾಂಶಗಳನ್ನು ಪರಿಶೀಲಿಸಿದಾಗ ಬಿಜೆಪಿಯ ಕಾಶ್ಮೀರ ಅಜೆಂಡಾಕ್ಕೆ ಭಾರೀ ಹಿನ್ನಡೆಯಾಗಿರುವುದು ಕಂಡು ಬರುತ್ತದೆ, ಕಾಶ್ಮೀರ ಕಣಿವೆಯ ಮತದಾರರು ಅದರ ಕ್ರಮಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದರೆ, ಜಮ್ಮು ಪ್ರದೇಶದ ಮತದಾರರೂ ಅವನ್ನು ಪೂರ್ಣವಾಗಿ ಒಪ್ಪಿಕೊಂಡಿಲ್ಲ ಎಂಬುದನ್ನು ಕಾಣಬಹುದು.



ಒಟ್ಟು 280 ಸ್ಥಾನಗಳಲ್ಲಿ, 278 ಸ್ಥಾನಗಳ ಫಲಿತಾಂಶ ಪ್ರಕಟವಾಗಿದ್ದು, 'ಗುಪ್ಕರ್ ಘೋಷಣೆಯ ಜನತಾ ಮೈತ್ರಿಕೂಟ'(ಪಿ.ಎ.ಜಿ.ಡಿ.) 110 ಸ್ಥಾನಗಳನ್ನು ಪಡೆದಿದೆ, ಬಿಜೆಪಿ 75 ಸ್ಥಾನಗಳನ್ನು ಪಡೆದಿದೆ, ಈ ಮೂಲಕ ಎಲ್ಲ ಜಿಲ್ಲಾ ಮಂಡಳಿಗಳಲ್ಲಿ ರಾರಾಜಿಸಬಹುದು ಎಂಬ ಅದರ ನಿರೀಕ್ಷೆ ಹುಸಿಯಾಗಿ ಬಿಟ್ಟಿದೆ. ಪಿ.ಎ.ಜಿ.ಡಿ.ಯ ಭಾಗವಾಗಿ ಸ್ಪರ್ಧಿಸಲು ಹಿಂದೇಟು ಹೊಡೆದು ಪ್ರತ್ಯೇಕವಾಗಿ ಸ್ಪರ್ಧಿಸಿದ ಕಾಂಗ್ರೆಸ್ 26 ಸ್ಥಾನಗಳನ್ನು ಪಡೆದಿದೆ. ಪಿ.ಎ.ಜಿ.ಡಿ.ಯ ಭಾಗವಾಗಿರುವ ಸಿಪಿಐ(ಎಂ) ಸ್ಪರ್ಧಿಸಿದ್ದ 7 ರಲ್ಲಿ 5 ಸ್ಥಾನಗಳಲ್ಲಿ ಗೆದ್ದಿದೆ.

ಪಿ.ಎ.ಜಿ.ಡಿ. ಒಟ್ಟು 20 ಜಿಲ್ಲೆಗಳಲ್ಲಿ 9 ರಲ್ಲಿ ಸ್ಪಷ್ಟ ಬಹುಮತ ಪಡೆದಿದೆ. ಬಿಜೆಪಿಗೆ 5 ಜಿಲ್ಲೆಗಳಲ್ಲಿ ಮಾತ್ರ ಸ್ಪಷ್ಟ ಬಹುಮತ ಸಿಕ್ಕಿದೆ. ಉಳಿದ 6ಜಿಲ್ಲೆಗಳಲ್ಲಿ ಯಾವುದೇ ಪಕ್ಷ ಅಥವ ಮೈತ್ರಿಕೂಟ ಸ್ಪಷ್ಟ ಬಹುಮತ ಪಡೆದಿಲ್ಲ. ಇವುಗಳಲ್ಲಿ ಕನಿಷ್ಟ ಮೂರರಲ್ಲಿ ಪಿ.ಎ.ಜಿ.ಡಿ. ಕಾಂಗ್ರೆಸ್ ಬೆಂಬಲದಿಂದ ಆಡಳಿತ ಚುಕ್ಕಾಣಿ ಹಿಡಿಯುವ ಸಾಧ್ಯತೆ ಇದೆ ಎನ್ನಲಾಗಿದೆ.

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಕಿತ್ತುಕೊಂಡು ಅದನ್ನು ಕೇಂದ್ರಾಡಳಿತ ಪ್ರದೇಶಗಳ ಮಟ್ಟಕ್ಕೆ ಇಳಿಸಿದ ನಂತರ, ಒಂದು ವರ್ಷಕ್ಕೂ ಮೀರಿದ ರಾಜಕೀಯ ಲಾಕ್‌ಡೌನಿನ ನಂತರ ಈ ಡಿಡಿಸಿ ಎಂಬ ರಾಜಕೀಯಾತೀತ ಎನ್ನಲಾದ ಸಂಸ್ಥೆಗಳಿಗೆ ಕೇಂದ್ರ ಸರಕಾರ ಚುನಾವಣೆಗಳನ್ನು ಘೋಷಿಸಿತು. ಈ ಮೂಲಕ ಅಲ್ಲಿನ ರಾಜಕೀಯ ಪಕ್ಷಗಳು ಈಗ ಅಪ್ರಸ್ತುತವಾಗಿ ಬಿಟ್ಟಿವೆ ಎಂದು ತೋರಿಸಬಹುದು, ಕಾಶ್ಮೀರ ಕಣಿವೆಯಲ್ಲೂ ಕೇಂದ್ರ ಸರಕಾರದ ಈ ಕ್ರಮಗಳನ್ನು ನಿಜವಾದ ಅಭಿವೃದ್ಧಿ ಪರ ಕ್ರಮಗಳು ಎಂದು ಜನಗಳು ಸ್ವೀಕರಿಸಿದ್ದಾರೆ ಎಂದೂ ತೋರಿಸಬಹುದು ಎಂದು ಈ ಜಿಲ್ಲಾ ಮಟ್ಟದ 'ಅಭಿವೃದ್ಧಿ' ಮಂಡಳಿಗಳನ್ನು ರಚಿಸಿ ಅದಕ್ಕೆ ತರಾತುರಿಯಲ್ಲಿ ಚುನಾವಣೆಗಳನ್ನು ನಡೆಸಲು ಮುಂದಾಯಿತು.

'ಜಿಲ್ಲಾ ಅಭಿವೃದ್ಧಿ ಮಂಡಳಿ' ಫಲಿತಾಂಶಗಳು	
ಎನ್‌ಸಿ	67
ಪಿಡಿಪಿ	27
ಜೆಕೆಪಿಸಿ	8
ಸಿಪಿಐ(ಎಂ)	5
ಜೆಕೆಪಿಎಂ	3
ಪಿಎಇಜಿಡಿ	**110**
ಬಿಜೆಪಿ	75
ಪಕ್ಷೇತರರು	50
ಕಾಂಗ್ರೆಸ್	26
ಅಪ್ನಿ ಪಾರ್ಟಿ	12
ಇತರರು	5

ಆದರೆ ನ್ಯಾಷನಲ್ ಕಾನ್ಫರೆನ್ಸ್(ಎನ್‌ಸಿ)ಪಿಡಿಪಿ, ಸಿಪಿಐ(ಎಂ) ಮತ್ತಿತರ 370ನೇ ಕಲಮನ್ನು ಕಾಯ್ದುಕೊಳ್ಳಬೇಕೆಂಬ ಗುಪ್ಕರ್ ಘೋಷಣೆಗೆ ಸಹಿ ಹಾಕಿದ ಪಕ್ಷಗಳು ಈ ಚುನಾವಣೆಗಳಲ್ಲಿ ಒಟ್ಟಾಗಿ ಸ್ಪರ್ಧಿಸಲು ನಿರ್ಧರಿಸಿದ್ದು ಬಿಜೆಪಿಯ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸಿತು. ಕೇಂದ್ರ ಗೃಹಮಂತ್ರಿಗಳು ಇದನ್ನು

ಪುಟ 13 ನೋಡಿ

ಜಾನುವಾರು ಹತ್ಯಾ ನಿಷೇದ: ಕಾರ್ಪೋರೇಟ್ ಲೂಟಿಯನ್ನು ವಿಸ್ತರಿಸಿ ವೇಗಗೊಳಿಸುವ ಹುನ್ನಾರ: ಭಾಗ–1

ಯು. ಬಸವರಾಜ
ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘ



ರಾಜ್ಯದ ಜನತೆ ವ್ಯಾಪಕವಾಗಿ ವಿರೋಧಿಸಿ ಮತ್ತು ಎಲ್ಲಾ ವಿರೋದ ಪಕ್ಷಗಳು ವಿರೋಧಿಸಿದ, ಮತ್ತು ಸಿದ್ಧರಾಮಯ್ಯ ನೇತೃತ್ವದ ಸರಕಾರ ಹಿಂಪಡೆದ, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಯನ್ನು ರಾಜ್ಯದ ಜನತೆಯ ಮುಂದೆ ಅದರ ಸಾಧಕ ಬಾಧಕಗಳ ಕುರಿತು ಚರ್ಚೆ ನಡೆಸದೇ, ಮಂತ್ರಿ ಮಂಡಲದ ಸದಸ್ಯರಿಗೂ ತಿಳಿಸದೇ, ವಿಧಾನ ಸಭೆಯಲ್ಲಿ ಶಾಸಕರು ಚರ್ಚಿಸಲು ಅವಕಾಶ ನೀಡದೇ, ವಿಧಾನ ಪರಿಷತ್ ಕಲಾಪ ನಡೆಸಿ ಪ್ರಜಾಸತ್ತಾತ್ಮಕವಾಗಿ ಅಂಗೀಕರಿಸದೇ, ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವ ಅಗತ್ಯ ಮತ್ತು ಅವಸರವಾದರೂ ಏನಿತ್ತು? ಈ ಪ್ರಶ್ನೆಗಳನ್ನು ಹಾಕಿಕೊಂಡು ಈ ದೀರ್ಘ ಲೇಖನ ಸಮಗ್ರವಾಗಿ ಉತ್ತರಿಸುತ್ತದೆ. ಇದನ್ನು ಎರಡು ಭಾಗಗಳಲ್ಲಿ ಪ್ರಕಟಿಸಲಾಗುತ್ತಿದೆ.
ಈ ಭಾಗ–1 ಕರ್ನಾಟಕದ ಜಾನುವಾರು ಸಾಕಾಣೆ ಸ್ಥಿತಿಯ ಸ್ಥೂಲ ವಿವರ ನೀಡುತ್ತದೆ. ಮಸೂದೆ ಅದರ ಘೋಷಿತ ಉದ್ದೇಶಗಳಾದ ದೇಶೀ ತಳಿಗಳ ರಕ್ಷಣೆಗೆ ಸಹಕಾರಿಯಾಗಿದೆಯೇ? ಅಥವಾ ದೇಶೀ ತಳಿಗಳ ಮತ್ತು ಉಪಕಸುಬುದಾರರ ಏಳಿಗೆಗೆ ನೆರವು ನೀಡಲಿದೆಯೇ, ಅಥವಾ ಬೇರೇನಾದರು ಉದ್ದೇಶದಿಂದ ತರಲಾಗಿದೆಯೇ ಎಂಬುದನ್ನು ಪರಿಶೀಲಿಸುತ್ತದೆ.

ಈ ಹಿಂದಿನ ಸಿದ್ಧರಾಮಯ್ಯನವರ ನೇತೃತ್ವದ ಸರಕಾರ ಹಿಂಪಡೆದಿದ್ದ ಜಾನುವಾರು ಸಂರಕ್ಷಣೆ ಹಾಗೂ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ ಯನ್ನು, ಪುನಃ ಯಾವುದೇ ಚರ್ಚೆಗೆ ಅವಕಾಶ ನೀಡದೇ, ಮಂತ್ರಿಗಳಿಗೂ ಗೊತ್ತಿಲ್ಲದೇ ಯಡೆಯೂರಪ್ಪನವರ ನೇತೃತ್ವದ ಬಿಜೆಪಿ ಸರಕಾರ, ಎರಡನೇ ಬಾರಿಗೆ ದೌರ್ಜನ್ಯ ದ ಮೂಲಕ ಡಿಸೆಂಬರ್ 07 ರಿಂದ 10, 2020 ರವರೆಗೆ ಮೂರು ದಿನಗಳ ಕಾಲ ನಡೆದ ವಿಧಾನ ಸಭೆಯಲ್ಲಿ ಜಾನುವಾರು ಸಂರಕ್ಷಣೆ ಮತ್ತು ಜಾನುವಾರು ಹತ್ಯೆ ನಿಷೇದ ಮಸೂದೆ–2020 ಆಗಿ ಅಂಗೀಕರಿಸಿದೆ.

ಅದನ್ನು ವಿಧಾನ ಪರಿಷತ್ ಸಭೆಯಲ್ಲಿಯೂ ದೌರ್ಜನ್ಯದಿಂದ ಅಂಗೀಕರಿಸುವ ದುರುದ್ದೇಶದಿಂದಲೇ, ಒಂದು ದಿನದ ವಿಧಾನ ಪರಿಷತ್ ಅಧಿವೇಶನವನ್ನು 15.12.2020 ರಂದು ಕರೆಯಲಾಗಿತ್ತು. ಆದರೇ ವಿಧಾನ ಪರಿಷತ್ ಸಭಾಧ್ಯಕ್ಷರಿಗೆ ಸದನ ಪ್ರವೇಶಿಸದಂತೆ ತಡೆದ ಅದರ ಪ್ರಜಾಪ್ರಭುತ್ವ ವಿರೋಧಿ ಧೋರಣೆಯಿಂದಾಗಿ, ಅದು ವಿಫಲವಾಗಿದೆ. ಈಗ ಈ ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ಪ್ರಯತ್ನ ಮುಂದುವರೆಸಿದೆ.

ಯಾಕಿಷ್ಟು ಅವಸರ?

ರಾಜ್ಯದ ಜನತೆ ವ್ಯಾಪಕವಾಗಿ ವಿರೋಧಿಸಿ ಮತ್ತು ಎಲ್ಲಾ ವಿರೋದ ಪಕ್ಷಗಳು ವಿರೋಧಿಸಿದ, ಮತ್ತು ಸಿದ್ಧರಾಮಯ್ಯ ನೇತೃತ್ವದ ಸರಕಾರ ಹಿಂಪಡೆದ, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಯನ್ನು ರಾಜ್ಯದ ಜನತೆಯ ಮುಂದೆ ಅದರ ಸಾಧಕ ಬಾಧಕಗಳ ಕುರಿತು ಚರ್ಚೆ ನಡೆಸದೇ, ಮಂತ್ರಿ ಮಂಡಲದ ಸದಸ್ಯರಿಗೂ ತಿಳಿಸದೇ, ವಿಧಾನ ಸಭೆಯಲ್ಲಿ ಶಾಸಕರು ಚರ್ಚಿಸಲು ಅವಕಾಶ ನೀಡದೇ, ವಿಧಾನ ಪರಿಷತ್ ಕಲಾಪ ನಡೆಸಿ ಪ್ರಜಾಸತ್ತಾತ್ಮಕವಾಗಿ ಅಂಗೀಕರಿಸದೇ, ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವ ಅಗತ್ಯ ಮತ್ತು ಅವಸರವಾದರೂ ಏನಿತ್ತು? ಈ ಪ್ರಶ್ನೆ ರಾಜ್ಯದ ಜನತೆಯನ್ನು ಕಾಡುತ್ತಿದೆ.

ಸರಕಾರ ಹೇಳುವುದೇನು?

ಕರ್ನಾಟಕ ಸರಕಾರ, ಕಾಯಿದೆಯ ಉದ್ದೇಶ ಜಾನುವಾರುಗಳ ಸಂತತಿ ನಾಶವನ್ನು ತಡೆಯುವುದು ಮತ್ತು ಅವುಗಳ ಸಂರಕ್ಷಣೆ ಮಾಡುವುದು ಹಾಗೂ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿದು ಮುನ್ನಡೆಸುವುದು ಎಂದು ಹೇಳುತ್ತಿದೆ. ಸರಿ, ಅದು ನಿಜವೇ ಆಗಿದ್ದರೇ, ಯಾರು ಜಾನುವಾರು ಸಾಕಾಣಿಕೆಯಲ್ಲಿ ತೊಡಗಿದ್ದಾರೋ ಅವರ ಜೊತೆ, ಸರಕಾರ ತನ್ನ ಅಭಿಪ್ರಾಯಗಳನ್ನು ವಿವರಿಸಿ, ಚರ್ಚಿಸಿ ಅಲ್ಲಿ ಬರುವ ಒಟ್ಟಭಿಪ್ರಾಯದಂತೆ ಕ್ರಮವಹಿಸಬಹುದಿತ್ತಲ್ಲವೇ? ಯಾಕೆಂದರೆ, ಪರಂಪರೆಯಿಂದ ಜಾನುವಾರು ಸಂರಕ್ಷಣೆಯಲ್ಲಿ ತೊಡಗಿರುವುದು ವಾಸ್ತವಿಕವಾಗಿ ಸರಕಾರ ಅಲ್ಲವಲ್ಲಾ? ಸ್ವಲ್ಪ ನೆರವಾಗಿರಬಹುದು, ಬದಲಿಗೆ, ನಿಜವಾದ ಜಾನುವಾರು ಸಂರಕ್ಷಣೆದಾರರು ಅಥವಾ ಸಾಕಾಣೆದಾರರು ಅಂದರೇ, ತಮ್ಮ ಜೀವನೋಪಾಯಗಳಿಗೆ ಅದರಿಂದ ನೆರವು ಕಂಡುಕೊಳ್ಳುವ ಅದನ್ನೊಂದು ಉಪಕಸುಬಾಗಿ ಮುಂದುವರೆಸಿ ಕೊಂಡು ಬಂದಿರುವ ಕೋಟ್ಯಾಂತರ ರೈತರು, ಕೃಷಿಕೂಲಿಕಾರರು, ಕಸುಬುದಾರರು, ಹೈನುಗಾರರು ಆಗಿದ್ದಾರೆ. ಈ ಕೋಟ್ಯಾಂತರ ಕುಟುಂಬಗಳ ಅಭಿಪ್ರಾಯಗಳನ್ನು ಪಡೆಯದೇ ಇದನ್ನು ಇಷ್ಟು ತುರ್ತಾಗಿ ಜಾರಿಗೊಳಿಸುವ ಅಂತಹ ಜರೂರು ಏನಿತ್ತು? ಈ ಪ್ರಶ್ನೆಗೆ ಸರಕಾರದ ಬಳಿ ಉತ್ತರವಿಲ್ಲ!

ವಾಸ್ತವಿಕವಾಗಿ, ರಾಜ್ಯ ಸರಕಾರ ಈ ಮಸೂದೆ ಜಾರಿಗೊಳಿಸಲು ತನಗಿರುವ ಜರೂರಿನ ಕುರಿತು ಹೇಳುತ್ತಿರುವ ಅಭಿಪ್ರಾಯಗಳು ರಾಜ್ಯದ ನಾಗರೀಕರನ್ನು ಮತ್ತು ಜಾನುವಾರು ಸಾಕಾಣಿಕೆದಾರರನ್ನು ಮತ್ತು ಜಾನುವಾರು ಸಂಜಾತ ಉದ್ಯಮದಲ್ಲಿ ಈಗಾಗಲೇ ತೊಡಗಿಕೊಂಡಿರುವ ದಶ ಲಕ್ಷಾಂತರ ಕುಟುಂಬಗಳನ್ನು ದಾರಿ ತಪ್ಪಿಸಿ, ವಂಚಿಸುವ ವಿಚಾರಗಳಾಗಿವೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಆದ್ದರಿಂದ ಈ ಮಸೂದೆಯನ್ನು ಅವಲೋಕಿಸಿ, ಸರಿಯಾಗಿ ಅರ್ಥೈಸುವುದು ಅವಶ್ಯವಿದೆ.

ಜಾನುವಾರು ಸಂಜಾತ ಉದ್ಯಮ

ಸರಕಾರ ತರಲಿರುವ ಮಸೂದೆಯ ಪರಿಣಾಮಗಳನ್ನು ಗಮನಿಸುವ ಮೊದಲು, ಜಾನುವಾರು ಸಂಜಾತ ಉದ್ಯಮದ ಅಗಾಧತೆಯನ್ನು ಮತ್ತು ಜಾನುವಾರು ಸಾಕಾಣಿಕೆಯ ಪರಿಸ್ಥಿತಿಯನ್ನು ಗಮನಿಸುವುದು ಸೂಕ್ತವಾಗಿದೆ.

ಜಾನುವಾರು ಅಂದರೇ, ಹಾಲು ನೀಡುವ ಹಸು, ಎಮ್ಮೆ, ವ್ಯವಸಾಯದಲ್ಲಿ ತೊಡಗಿಸಲು ಬರುವ ಮತ್ತು ತೊಡಗಿಸಲು ಬಾರದ ಹಸುವಿನ ಮತ್ತು ಎಮ್ಮೆಯ ಕರುಗಳು, ಅಂದರೇ, ಹೋರಿ ಹಾಗೂ ಎತ್ತು, ಕೋಣ ಗಳಾಗಿವೆ.

ಸಮಾಜ ಮತ್ತು ದೇಶ ಹಾಗೂ ಜಗತ್ತು ಇವುಗಳ ಸಾಕಾಣಿಕೆಯ ಮೂಲಕ ಮುಖ್ಯವಾಗಿ, ಒಟ್ಟು ಮಾನವನಿಗೆ ಅಗತ್ಯವಾದ ಹೇರಳ ಪ್ರೋಟೀನ್ ಯುಕ್ತ ಹಾಲು ಮತ್ತು ಅದರ ಇತರೆ ಉಪ ಉತ್ಪನ್ನಗಳು ಮತ್ತು ಮಾಂಸಗಳನ್ನು ಪಡೆಯುತ್ತಿದೆ. ಅದೇ ರೀತಿ, ಮಾನವನ ಇತರೇ ಅಗತ್ಯಗಳ ಭಾಗವಾಗಿ ಅವುಗಳ ಚರ್ಮಗಳನ್ನು ಬಳಸುತ್ತಾ ಮುಂದುವರೆಯುತ್ತಿದೆ.

ಹೀಗಾಗಿ, ಹೈನುಗಾರಿಕೆ, ಹೈನೋದ್ಯಮ ಮತ್ತು ಮಾಂಸ, ಮಾಂಸೋದ್ಯಮ ಹಾಗೂ ಚರ್ಮ, ಚರ್ಮೋದ್ಯಮಗಳು, ಅವುಗಳ ಮೂಳೆಗಳು ಅದರ ಉಪಯೋಗಿ ಉದ್ಯಮಗಳು ಬೆಳೆದಿವೆ. ರೈತರು ಸಾವಿರಾರು ವರ್ಷಗಳಿಂದ ಹೋರಿ ಅಥವಾ ಎತ್ತುಗಳನ್ನು ಮತ್ತು ಕೋಣಗಳನ್ನು ಉಳುಮೆಗಾಗಿ, ಸಾರಿಗೆಗಾಗಿ ಬಳಸುತ್ತಾ ಬಂದಿದ್ದಾರೆ.

ಈ ಎಲ್ಲ ಉದ್ಯಮಗಳಿಗೆ ಈ ಉಪಕಸುಬುದಾರರು ಬೆನ್ನೆಲುಬುಗಳಾಗಿದ್ದಾರೆ.

ಕರ್ನಾಟಕದ ಜಾನುವಾರು ಸ್ಥಿತಿ

ಒಂದಲ್ಲಾ ಒಂದು ರೀತಿಯ ಉಪಯುಕ್ತತೆ ಮಾನವನಿಗಿರುವುದರಿಂದ ಇನ್ನು ಮುಂದೆಯೂ ಅವುಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿಯನ್ನು ಮಾನವ ಹೊತ್ತಿದ್ದಾನೆ.

ಹೀಗಾಗಿ, ಅರಣ್ಯಗಳಲ್ಲಿ ಇಂತಹ ವ್ಯಾಪಕ ಉಪಯುಕ್ತತೆ ಪಡೆಯಲಾಗದ ಪ್ರಾಣಿಗಳು ಅಳಿವಿನಂಚಿನಲ್ಲಿವೆ. ಸರಕಾರಗಳು ಜನತೆಯ ಒತ್ತಾಯದ ಮೇರೆಗೆ ಅಳಿವಿನಂಚಿನಲ್ಲಿರುವ ಹುಲಿ, ಸಿಂಹ, ಆನೆ ಮುಂತಾದ ಕಾಡು ಪ್ರಾಣಿಗಳ ಸಂತತಿಯನ್ನು ಉಳಿಸಲು ಹೂಡಿಕೆ ಮಾಡಬೇಕಾಗಿ ಬಂದಿದೆ. ಆದರೇ, ಮಾನವನ ಅಗತ್ಯತೆ ಮತ್ತು ಉಪಯುಕ್ತತೆಯನ್ನು ಪೂರೈಸುವ ಜಾನುವಾರುಗಳು, ಕುರಿ, ಕೋಳಿ, ಹಂದಿ, ಮೀನು ಮುಂತಾದ ಸಾಕು ಪ್ರಾಣಿಗಳು ಕಾಡಿನಿಂದ ನಾಡಿಗೆ ಬಂದು ಉಳಿದಿವೆ, ಬೆಳೆದಿವೆ. ಹಿಂದಿನ ದಿನಮಾನಗಳಿಗೆ ಹೋಲಿಸಿದರೇ, ಮಾನವ ಜನಸಂಖ್ಯೆ ಬೆಳೆದ ಹಾಗೇ ಅದರ ಅಗತ್ಯನುಸಾರ ಅವುಗಳ ಸಂತತಿಯನ್ನು ಇಲ್ಲವೇ ಇಳುವರಿಯನ್ನು ಗಣನೀಯವಾಗಿ ಅಭಿವೃದ್ಧಿ ಪಡಿಸಲಾಗಿದೆ ಮತ್ತು ಪಡಿಸಲಾಗುತ್ತದೆ.

ಕರ್ನಾಟಕದ ಜಾನುವಾರು ಗಣತಿ ಅಂಕೆ ಸಂಖ್ಯೆಗಳು ಇದನ್ನು ಪುಷ್ಟೀಕರಿಸುತ್ತವೆ.





2007 ರ ಗಣತಿಯಂತೆ ಮಿಶ್ರತಳಿ ಹಸುಗಳ ಸಂಖ್ಯೆಯು 21.93 ಲಕ್ಷ ಆಗಿದ್ದರೇ 2012 ರ ಗಣತಿಯಂತೆ ಅವು 29.13 ಲಕ್ಷ ಆಗಿ ಹೆಚ್ಚಳ ಗೊಂಡಿದೆ. ಅದೇ ಸಂದರ್ಭದಲ್ಲಿ 2007 ರಲ್ಲಿ ದೇಶೀಯ ಅಥವಾ ಜವಾರಿ ತಳಿ ಹಸುಗಳ ಸಂಖ್ಯೆ 83.14 ಲಕ್ಷ ಆಗಿದ್ದದ್ದು ಅವು 2012 ರಲ್ಲಿ 66,01 ಲಕ್ಷಕ್ಕೆ ಕುಸಿದಿದೆ.

2007 ರಲ್ಲಿ ಒಟ್ಟು ಹಸುಗಳು 1.05 ಕೋಟಿ ಇದ್ದು 2017 ರಲ್ಲಿ ಅವು 84.69 ಲಕ್ಷ ಕ್ಕೆ ಕುಸಿದಿವೆ. ಅಂದರೇ, ಒಟ್ಟು 21 ಲಕ್ಷದಷ್ಟು ಕಡಿಮೆಯಾಗಿವೆ. ಕಡಿಮೆಯಾದ ಬಹುತೇಕ ಹಸುಗಳು ಬಹುತೇಕ ದೇಶೀಯ ತಳಿಗಳಾಗಿವೆ. ದೇಶೀಯ ಅಥವಾ ಜವಾರಿ ಹಸುಗಳ ಸಂಖ್ಯೆಯು 2007 ಕ್ಕೆ ಹೋಲಿಸಿದಲ್ಲಿ 2012 ರಲ್ಲಿ ಸುಮಾರು 13 ಲಕ್ಷದಷ್ಟು ಕಡಿಮೆಯಾಗಿವೆ. 2017 ರಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕಾಣೆಯಾಗಿವೆ. 2007 ರಲ್ಲಿ 43.29 ಲಕ್ಷ ಇದ್ದ ಎಮ್ಮೆಗಳು 2017 ರಲ್ಲಿ 29.84 ಲಕ್ಷಕ್ಕೆ ಕುಸಿದಿವೆ.

ಆದಾಗಲೂ ಹಾಲು ಉತ್ಪಾದನೆಯು ಕಡಿಮೆಯಾಗಿಲ್ಲ.

ಅದೇ ಸಂದರ್ಭದಲ್ಲಿ, ಒಟ್ಟು ದನದ ಮಾಂಸದ ಉತ್ಪಾದನೆಯು 2007 ರಲ್ಲಿ 2.54 ಕೋಟಿ ಕೇಜಿಗಳಾಗಿದ್ದರೇ, 2019 ರಲ್ಲಿ 2.70 ಕೋಟಿ ಕೇಜಿಗಳಾಗಿ ಹೆಚ್ಚಿನ ಗುರಿ ಹೊಂದಿದೆ. ದನದ ಮಾಂಸದ ಉತ್ಪಾದನೆ ಗಣನೀಯವಾಗಿ ಏರದಿರಲು ದೇಶೀ ತಳಿಗಳ ಹಸುಗಳ ಮತ್ತು ಎಮ್ಮೆಗಳ ಸಂಖ್ಯೆ ಕುಸಿತಗೊಂಡಿರುವುದು ಮತ್ತು ವಿದೇಶೀ ಮಾಂಸದ ಆಮದು ಕಾರಣವಾಗಿದೆ.

ಅದ್ದರಿಂದ, ಅವುಗಳ ಸಂತತಿ ಸಂರಕ್ಷಣೆಯ ಕುರಿತು ಸರಕಾರಗಳು ಹೆಚ್ಚಿನ ಆತಂಕಕ್ಕೊಳಗಾಗುವ ಅವಶ್ಯಕತೆಗಳೇ ಇಲ್ಲವಾಗಿವೆ.

ಜಾನುವಾರು ಸಾಕಾಣೆ: ಉಪಕಸಬು V/S ಪ್ರಧಾನ ಕಸುಬು

ಪರಿಸ್ಥಿತಿ ಹೀಗಿರುವಾಗ, ಜನತೆಗಿಲ್ಲದ, ಸರಕಾರದ ಆಳದಲ್ಲಿರುವ ಆತಂಕವಾದರೂ ಏನು? ಎಂಬ ಪ್ರಶ್ನೆ ಮರಳಿ ಸಹಜವಾಗಿಯೇ ನಮ್ಮನ್ನು ಕಾಡುತ್ತದೆ. ನಿಜಾ! ಮಾನವ ಸಮಾಜ ಅಭಿವೃದ್ಧಿ ಹೊಂದಿದ ಹಾಗೇ ಅವುಗಳ ಉಪಯುಕ್ತತೆಯಲ್ಲಿ ಬದಲಾವಣೆಗಳಾಗಿವೆ. ಆಧುನಿಕ ತಂತ್ರಜ್ಞಾನ ಮತ್ತು ಟ್ರಾಕ್ಟರ್ ಗಳ ಬಳಕೆ ಹೆಚ್ಚುತ್ತಿದ್ದ ಹಾಗೆ ವ್ಯವಸಾಯದಲ್ಲಿ ಕೋಣ ಹಾಗೂ ಎತ್ತುಗಳ ಬಳಕೆ ಗಣನೀಯವಾಗಿ ಕಡಿತಗೊಂಡಿದೆ, ಕಡಿತಗೊಳ್ಳುತ್ತದೆ. ಹೈನುಗಾರಿಕೆಯಲ್ಲಿ ಜವಾರಿ ತಳಿ ಹಸುಗಳ ಬದಲು ಸೀಮೆ ಹಸುಗಳು ಮತ್ತು ಜವಾರಿ ಎಮ್ಮೆಗಳ ಬದಲು ಮುರ್ರಾ ತಳಿ ಎಮ್ಮೆಗಳು ಜವಾರಿ ತಳಿಗಳ ಸ್ಥಾನಗಳನ್ನು ಆಕ್ರಮಿಸಿವೆ. ಈ ಹೊಸ ತಳಿಗಳ ಗಂಡು ಕರುಗಳು ವ್ಯವಸಾಯದಲ್ಲಿ ನಿರುಪಯುಕ್ತವಾಗಿವೆ. ಆದರೇ, ಅವುಗಳ ಇತರೇ ಉಪಯುಕ್ತತೆಗಳು ಹಾಗೆಯೇ ಉಳಿದಿವೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೆ ತರುತ್ತಿರುವ ರೈತರ, ಕೃಷಿಕೂಲಿಕಾರರ, ಕಸುಬುದಾರರ, ಹೈನುಗಾರರ ವಿರೋಧಿ ಮತ್ತು ಕೃಷಿ ವಿರೋಧಿ ನೀತಿಗಳಿಂದ ಹಾಗೂ ವ್ಯಾಪಕವಾದ ಅಗತ್ಯ ವಸ್ತುಗಳ ಬೆಲೆ ಏರಿಕೆ ನೀತಿಗಳಿಂದ ಜಾನುವಾರು ಸಾಕಾಣಿಕೆ ಅವರಿಗೆ ಭಾರವೆನಿಸುತ್ತದೆ.

ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಸಮಿತಿಯು ಕೋಲಾರ ಜಿಲ್ಲೆಯ ಹೈನುಗಾರಿಕೆಯಲ್ಲಿ ತಲಾ ಲೀಟರ್ ಹಾಲು ಉತ್ಪಾದನೆಯ ವೆಚ್ಚವನ್ನು 2015–16 ರಲ್ಲಿ ಲೆಕ್ಕ ಹಾಕಿದೆ. ಅದರಂತೆ ತಲಾ ಲೀಟರ್ ಗೆ ಆ ದಿನಗಳಲ್ಲಿ ಉತ್ಪಾದನಾ ವೆಚ್ಚ ಕನಿಷ್ಠ 30.50 ರೂ ಎಂದು ಗುರುತಿಸಿದೆ. ಆದರೇ ಆ ದಿನಗಳಲ್ಲಿ ಉತ್ಪಾದಕರು ತಲಾ ಲೀಟರ್ ಮಾರಾಟ ಮಾಡುತ್ತಿದ್ದುದು ಕೇವಲ 21.50

ಪುಟ 10 ಕ್ಕೆ

ಕೋಲಾರದ ನರಸಾಪುರದಲ್ಲಿ ನಡೆದ ಇತ್ತೀಚಿನ ವಿಸ್ಟ್ರಾನ್ ಕಾರ್ಖಾನೆಯಲ್ಲಿನ ಹಿಂಸಾಚಾರದ ಪ್ರಕರಣ ದೊಡ್ಡ ಸುದ್ದಿಯಾಗಿದೆ. ಕಂಪನಿಯೇ ಒಪ್ಪಿಕೊಂಡಂತೆ ಕಾರ್ಮಿಕರಿಗೆ ಖಂಡಿತ ಸಮಸ್ಯೆಗಳಿದ್ದವು ಆದರೆ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಲು ತುಂಬಾ ದಾರಿಗಳಿದ್ದವು. ಈ ರೀತಿಯ ಹಿಂಸೆಯ ಅಗತ್ಯವಿರಲಿಲ್ಲ ಎಂದು ಮಾಧ್ಯಮಗಳು, ಆಡಳಿತ, ಸರಕಾರ ಹೇಳುತ್ತಿವೆ. ಆದರೆ ಕಾರ್ಮಿಕರ ವಾಸ್ತವ ಅನುಭವ ಏನು? ವಿಸ್ಟ್ರಾನ್ ಮಾತ್ರವಲ್ಲ ಹಲವು ವಿದೇಶೀ ಕಂಪನಿಗಳ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳ ವ್ಯಾಪಕ ಉಲ್ಲಂಘನೆ ಆಗುತ್ತಿದೆ. ಕಾರ್ಖಾನೆ ಆಡಳಿತದ ದಬ್ಬಾಳಿಕೆಯಿಂದ ಕಾರ್ಮಿಕರ ಸಮಸ್ಯೆಗಳನ್ನು ಕೇಳುವವರಿಲ್ಲ. ಕಾರ್ಮಿಕ ಇಲಾಖೆ ಮಧ್ಯಪ್ರವೇಶ ಮಾಡದೆ ಕಣ್ಣುಮುಚ್ಚಿ ಕೂತಿದೆ. ಕಾರ್ಮಿಕ ಸಂಘಗಳಿಗೆ ಯಾವುದೇ ಅವಕಾಶ ಕೊಡಲಾಗಿಲ್ಲ. ವಿಸ್ಟ್ರಾನ್ ಮಾತ್ರವಲ್ಲ ಟೊಯೊಟಾ ಕಿರ್ಲೋಸ್ಕರ್, TRM, ಸ್ಟ್ಯಾನ್ ಝೆನ್ ಮುಂತಾದ ಹಲವು ವಿದೇಶೀ ಕಂಪನಿಗಳ ಕಾರ್ಖಾನೆಗಳಲ್ಲಿ ಕಾರ್ಮಿಕರ ಗುಲಾಮಗಿರಿಯ ಹೊಸ ಮಾಡೆಲ್ ಜಾರಿಗೊಳಿಸಲಾಗಿದೆ. ಈ ಮಾಡೆಲ್ ಕಾರ್ಮಿಕರಲ್ಲಿ ಉಂಟು ಮಾಡಿರುವ ದುರ್ಭರ ಪರಿಸ್ಥಿತಿ ಎಷ್ಟು ಹದಗೆಟ್ಟಿದೆಯೆಂದರೆ ವಿಸ್ಟ್ರಾನ್ ನಲ್ಲಿ ನಡೆದಂತಹ ಆಕ್ರೋಶದ ಸ್ಫೋಟಗಳು ಯಾವಾಗ ಎಲ್ಲಿ ಬೇಕಾದರೂ ಆಗಬಹುದು. ಆದರೂ ರಾಜ್ಯ ಸರ್ಕಾರ ಏಕಮುಖವಾಗಿ ವ್ಯಾಪಾರ ಸುಲಭೀಕರಣ ಹೆಸರಿನಲ್ಲಿ ಸಂಪೂರ್ಣವಾಗಿ ಬಂಡವಾಳದ ಎದುರು ಅದರ ಪರವಾಗಿ ಮಂಡಿಯೂರಿದೆ. ಈಗಲಾದರೂ ಸರಕಾರ ಎಚ್ಚೆತ್ತುಕೊಂಡು ಕಾರ್ಮಿಕ ಇಲಾಖೆಯ ಮೂಲಕ ಕಾರ್ಮಿಕರ ಪರ ಮಧ್ಯಪ್ರವೇಶ ಮತ್ತು ಕಾರ್ಮಿಕ ಸಂಘಗಳಿಗೆ ಅವಕಾಶ ಕೊಡದಿದ್ದರೆ ಆಗುವ ಆಸ್ಫೋಟಗಳಿಗೆ ಅದೇ ಹೊಣೆ.





ವಿಸ್ಟ್ರಾನ್: ಕಾರ್ಮಿಕರ ಗುಲಾಮಗಿರಿಯ ಹೊಸ ಮಾಡೆಲ್

ಎಸ್. ವರಲಕ್ಷ್ಮಿ

ವಿಸ್ಟ್ರಾನ್ ಇಂಡಿಯಾ ಕಂಪನಿಯಲ್ಲಿ ಕಾರ್ಮಿಕರ ಅತೀವ ಶೋಷಣೆ ಕಟ್ಟೆ ಒಡೆದದ್ದೇ ಹಿಂಸೆಗೆ ಪ್ರಮುಖ ಕಾರಣ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಸತತವಾಗಿ ಹೇಳಿವೆ. ಆದರೂ ಕೂಡಾ ಜಿಲ್ಲಾ ಮತ್ತು ರಾಜ್ಯದ ಆಡಳಿತ ಈ ಘಟನೆಯನ್ನು ಕೆಲವರ ತಲೆಗೆ ಕಟ್ಟಿ ಕೈ ತೊಳೆದು ಕೊಳ್ಳಲು ಪ್ರಯತ್ನಿಸಿತು. ವಿಸ್ಟ್ರಾನ್ ಕಂಪನಿಯ ಪ್ರಮುಖರು ತನಿಖೆ ನಡೆಸಿ ಕಂಪನಿಯದೇ ತಪ್ಪು ಎಂದು ಹೇಳಿ ಕಾರ್ಮಿಕರ ಬಳಿ ಕ್ಷಮೆ ಯಾಚಿಸಿದೆ. ಮಾತ್ರವಲ್ಲದೇ ಈ ಕಂಪನಿಯ ಉಪಾಧ್ಯಕ್ಷನನ್ನು ವಜಾಗೊಳಿಸಿದೆ.

ಇಲ್ಲಿ ವಿಸ್ಟ್ರಾನ್ ಮಾತ್ರವಲ್ಲದೆ TRMN (ಟೊಕಾಯ್ ರಿಕಾ ಮಿಂದಾ), ಟೊಯೋಟಾ ಕಿರ್ಲೋಸ್ಕರ್, ಸ್ಟ್ಯಾನ್ ಝೆನ್ ಮತ್ತು ವಂಡರ್ ಲಾ ಕಾರ್ಮಿಕರು ಸತತ ಹೋರಾಟಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ಕೆಲಸ ಮಾಡುವಾಗ ಪ್ರಾಣ ಹಾನಿಯಾಗುವಂತಹ ಅಪಘಾತಗಳು ನಡೆದಾಗ ಅದನ್ನು ಕೇಳಲು ಹೋಗಿದ್ದೇ ನೆಪವಾಗಿದೆ. STTE ನಲ್ಲಿ 35 ಜನರನ್ನು ಕೆಲಸದಿಂದ ತೆಗೆಯಲಾಗಿದೆ. TRMN ನಲ್ಲಿ ಮೂರು ವರ್ಷಗಳ ಸತತ ಹೋರಾಟ ನಡೆಸಿದ ಪರಿಣಾಮ 66 ಜನ ಕೆಲಸ ಕಳೆದು ಕೊಂಡಿದ್ದಾರೆ. ಟೊಯೋಟಾ ದಲ್ಲಿ ವಾರಕ್ಕೆ 30 ನಿಮಿಷ ನೈಸರ್ಗಿಕ ಕರೆಗಳಿಗೆ ಸಮಯ ನಿಗದಿ ಅಂದರೆ ದಿನಕ್ಕೆ 4 ನಿಮಿಷ ಮಾತ್ರ. ಅವರು ಬಿಡುವು ಕೊಡುವ ಸಮಯದಲ್ಲಿ ಮಾತ್ರ ಮೂತ್ರ-ಮಲ ವಿಸರ್ಜನೆ ಹೋಗಬೇಕು, ಆಗ ಬರದಿದ್ದರೆ ಮತ್ತೇ ಹೋಗುವ ಆಗಿಲ್ಲ, ಕಣ್ಣು ಮಿಟುಕಿಸಲು ಸ್ವಾತಂತ್ರವಿಲ್ಲ.

ಇಲ್ಲಿ ಕೆಲವರು ಹೇಳುವ ಹಾಗೆ, ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಲು ತುಂಬಾ ದಾರಿಗಳಿದ್ದವು. ಈ ರೀತಿಯ ಹಿಂಸೆ ಬೇಕಿರಲಿಲ್ಲ. ಖಂಡಿತವಾಗಿಯೂ ಹಿಂಸೆಯ ಅಗತ್ಯವಿರಲಿಲ್ಲ. ಆದರೆ ಕಾರ್ಮಿಕರ ವಾಸ್ತವ ಅನುಭವ ಏನು? ಉದಾಹರಣೆಗೆ ಡಾಬಸ್ ಪೇಟೆಯಲ್ಲಿರುವ TRMN ಕಂಪನಿಯಲ್ಲಿ ಸಂಘ ಮಾಡಿಕೊಂಡ ತಪ್ಪಿಗೆ 3 ವರ್ಷ ಕಾರ್ಮಿಕರು ಹೋರಾಟ ಮಾಡಿದರೂ ಕಂಪನಿ ಸಂಘಟನೆಯನ್ನು ಪರಿಗಣಿಸಲಿಲ್ಲ. ಟೊಯೋಟಾದಲ್ಲಿ ಕಾರ್ಮಿಕ ಹೋರಾಟ ಆರಂಭವಾಗಿ (ಡಿ. 25, 2020) ಇಂದಿಗೆ 40 ದಿನವಾದರೂ ಆಡಳಿತ ವರ್ಗ ಅವರ ಬೇಡಿಕೆ ಪರಿಗಣಿಸಲಿಲ್ಲ. ರಾಜ್ಯ ಸರ್ಕಾರವು ಕೂಡಾ ಕಾರ್ಮಿಕರಿಗೆ ನ್ಯಾಯ ಒದಗಿಸುವ ರೀತಿಯಲ್ಲಿ ಮಧ್ಯ ಪ್ರವೇಶ ಮಾಡದೇ 3500 ಕಾರ್ಮಿಕರು ಹೋರಾಟದಲ್ಲಿದ್ದಾರೆ. ಹಾಗೇಯೇ ವಂಡರ್ ಲಾ ಕಾರ್ಮಿಕರು 4-5 ವರ್ಷಗಳಿಂದ ಹೋರಾಟ ನಡೆಸುತ್ತಲೇ ಇದ್ದಾರೆ, ಹಾಗೆಯೇ ಬೆಳಗಾವಿ ಅರವಿಂದ್ ಗಾರ್ಮೆಟ್ಸ್ ಕಂಪನಿಯಲ್ಲಿ ಕೂಡಾ ಇನ್ನೂ ಹಲವಾರು ಕಡೆ ಇಂತಹ ಪರಿಸ್ಥಿತಿಗಳಿವೆ. ಆದರೆ ಕಾರ್ಮಿಕ ಇಲಾಖೆಯ ಪರಿಣಾಮಕಾರಿ ಮಧ್ಯ ಪ್ರವೇಶದ ಕೊರತೆ ಹಾಗೂ ಕಾರ್ಮಿಕರು ಸಂಘ ಕಟ್ಟಿ ಕೊಳ್ಳುವ ಮೂಲ ಹಕ್ಕನ್ನು ಚಲಾಯಿಸಲು ಸಾಧ್ಯವಾಗದಿರುವುದರಿಂದ ಯಾವ ಸಮಸ್ಯೆಯೂ ಬಗೆಹರಿಯುತ್ತಿಲ್ಲ.

ವಿಸ್ಟ್ರಾನ್ ಕಂಪನಿಯ ಕಾರ್ಮಿಕರ ಕಥೆ

ಈ ಕಂಪನಿಯಲ್ಲಿ 1343 ಖಾಯಂ ಕಾರ್ಮಿಕರು, 8483 ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮೂರು ಪಾಳಿಯಿದ್ದರೂ ಕೂಡಾ ವಾರದ ರಜೆ ಇಲ್ಲ. ಕಡ್ಡಾಯವಾಗಿ ಕೆಲಸದ ಅವಧಿ 12 ಗಂಟೆ, 1 ದಿನ ರಜೆ ಹಾಕಿದರೆ 5 ದಿನ ಸಂಬಳ ಕಟ್.

ಕಾರ್ಮಿಕರು (ಮಹಿಳಾ ಕಾರ್ಮಿಕರು ಸೇರಿದಂತೆ) ಬೆಳಗ್ಗೆ 3-30 ಕ್ಕೆ ನಿದ್ದೆಯಿಂದ ಎದ್ದು ದಿನ ನಿತ್ಯದ ಕರ್ಮಗಳನ್ನು ಮುಗಿಸಿ 4-30 ಕ್ಕೆ ನಿಗದಿ ಪಡಿಸಿದ ಸ್ಥಳಕ್ಕೆ ಮನೆಯಿಂದ ಬಂದು ಬಸ್ ಹತ್ತಬೇಕು. 5-30 ರಿಂದ 5-50 ಕಾರ್ಖಾನೆಯೊಳಗೆ ಪ್ರವೇಶಿಸಿ ಪಂಚ್ ಮಾಡಿ 6 ಗಂಟೆಗೆ 1 ನಿಮಿಷ ತಡವಾಗದೆ ಲೈನ್ ನಲ್ಲಿರಬೇಕು. ಬಹಳಷ್ಟು ಸಾರಿ ಸಮಯಕ್ಕೆ ಸರಿಯಾಗಿ ಪಂಚ್ ಮಾಡಿದರೂ ಅದು ಮಿಸ್ ಪಂಚ್ ಆದರೆ ಅದಕ್ಕೆ ಕಾರ್ಮಿಕ ಜವಾಬ್ದಾರಿ! ಪಂಚ್ ಮಶೀನ್ ಸಿಸ್ಟಮ್ ನಲ್ಲಿ ಅಪ್ ಡೇಟ್ ಆಗಿಲ್ಲ ಎನ್ನುತ್ತಾರೆ.

ಪ್ರತಿಯೊಬ್ಬರಿಗೂ ಪ್ರತಿ ನಿತ್ಯ ಉತ್ಪಾದನಾ ಗುರಿ (Production target) ಕೊಡುತ್ತಾರೆ. 1 ಗಂಟೆಗೆ 400 ರಿಂದ 600 UPH (Unit per hour) ನ್ನು ಪೂರ್ಣ ಮಾಡಲೇಬೇಕು.

24 ಗಂಟೆ ಮಶೀನ್ Running ನಲ್ಲಿರುವಾಗ ಕೆಲವೊಮ್ಮೆ DP (Dual piston) ಮಶೀನ್ ಕೆಟ್ಟು ಹೋಗುತ್ತದೆ. ಆಗ ಕೆಲಸ ನಿಂತು ಹೋಗುತ್ತದೆ. ಮೊಬೈಲ್‌ಗಳ ಅಸೆಂಬ್ಲಿ ಮಾಡುವಾಗ ಮೆಟೀರಿಯಲ್ ಮುಗಿದ ಕೊಡಲೇ ಕೆಲಸದ ಸ್ಥಳಕ್ಕೆ ಅದರ ಪೂರೈಕೆ ಆಗಿರದಿದ್ದರೆ ಕಾರ್ಮಿಕರೇ ಹೋಗಿ ತಗೆದು ಕೊಂಡುಬರಬೇಕು. ಸ್ಥಳಕ್ಕೆ ಮೆಟೀರಿಯಲ್ ಪೂರೈಸಲು ಬೇರೆಯವರು ಇರುತ್ತಾರೆ. ಅದರ ಕುರಿತು ಪ್ರಶ್ನೆ ಮಾಡಿದರೆ IR (Internal Record) ನ್ನು Raise ಮಾಡುತ್ತಾರೆ.

ಒಂದು ದಿನಕ್ಕೆ 2000 ರಿಂದ 3000 ಮೊಬೈಲ್‌ಗಳು ಉತ್ಪಾದನೆಯಾಗುತ್ತವೆ. ಕೆಲಸ ಮಾಡುವಾಗ ಕಡ್ಡಾಯವಾಗಿ ಗ್ಲೌಸ್ ಧರಿಸಿರಬೇಕು. ಮೊಬೈಲ್‌ಗೆ ಸಣ್ಣ ಸಣ್ಣ ಬಟನ್ ಹಾಕಬೇಕು. ಬೆಂಡ್ ಆಗಿರುವ ಬಟನನ್ನು ಟೂಲ್ಸ್ ನಲ್ಲಿಯೇ ಸರಿಪಡಿಸಿಬೇಕು. ಆದರೆ ಗ್ಲೌಸ್ ಹಾಕಿಕೊಂಡರೆ ಟೂಲ್ಸ್ ನಲ್ಲಿ ಪ್ರಾಯೋಗಿಕವಾಗಿ ಹೆಚ್ಚು ಸಮಯ ಅಥವಾ ಕಷ್ಟ. ಬೆಂಡ್ ಆದ ಬಟನ್ ಸರಿಮಾಡಿಕೊಂಡರೂ ಮಾಡದಿದ್ದರೂ IR Raise ಮಾಡ್ತಾರೆ.

ಕೆಲಸ ಮಾಡುವಾಗ (ಇಲೆಕ್ಟ್ರಿಕ್ ಅರ್ಥ್ ಖಾತ್ರಿಪಡಿಸಿ ಶಾಕ್ ಹೊಡೆಯದಂತೆ ತಡೆಯುವ) ರಿಸ್ಟ್ ಬ್ಯಾಂಡ್ ಕೈಗೆ ಹಾಕಿಕೊಳ್ಳಬೇಕು ಎನ್ನುತ್ತಾರೆ. ಆದರೆ ರಿಸ್ಟ್ ಬ್ಯಾಂಡ್ ಕೈಗೆ ಕಾಕಿಕೊಂಡರೆ ಕೆಲಸ ಮಾಡುವಾಗ ಕೈಗಳ ಸ್ವತಂತ್ರ ಚಲನೆಗೆ ಅಡ್ಡಿಯಾಗುತ್ತದೆ. ಆದ್ದರಿಂದ ಕಾಲಿಗೆ ಹಾಕಿ ಕೊಳ್ಳುತ್ತಾರೆ. ಕೆಲವೊಮ್ಮೆ ವೈರ್ ಹರಿದು ಅದರ ಕಾಪರ್ ನಿಂದ ಅದೆಷ್ಟೋ ಬಾರಿ ಶಾಕ್ ಹೊಡೆಯುವುದು ಸಾಮಾನ್ಯವಾಗಿದೆ.

ಒಂದು ಫ್ಲೋರ್ ನಲ್ಲಿ 3 ಲೈನ್ ಇರುತ್ತೆ ನೀರು ಕುಡಿಯಲು. ಕನಿಷ್ಠ 100 ಹೆಜ್ಜೆ ಹೋಗಿ ಕುಡಿಯಬೇಕು. ಕಾರ್ಮಿಕರು ಹೆಚ್ಚು ನೀರು ಕುಡಿಯಲು ಆಗುತ್ತಿರಲ್ಲಿಲ್ಲ. ಏಕೆಂದರೆ ಶೌಚಾಲಯಕ್ಕೆ ಹೋಗಬೇಕೆಂದರೆ ಲೈನ್ ಲೀಡರ್ ಮತ್ತು ಸೂಪರ್ ವೈಸರ್ ಇಬ್ಬರ ಬಳಿ ಅನುಮತಿ ಪಡೆಯಬೇಕು. ಬಾಗಿಲ ಬಳಿ ಬಜರ್ ಇಟ್ಟಿರುತ್ತಾರೆ. ಶೌಚಾಲಯಕ್ಕೆ ಹೋಗುವ ಕಾರ್ಮಿಕ ಬಜರ್ ಪ್ರೆಸ್ ಮಾಡಬೇಕು. ಸೂಪರ್ ವೈಸರ್ ಬರುವತನಕ ಕಾಯಬೇಕು.



ಅವನು ಬಂದು ಹೋಗಬಹುದು ಎಂದು ಹೇಳಿದರೆ ಮಾತ್ರ ಹೋಗಬೇಕು. ಶೌಚಾಲಯಗಳಿರುವಲ್ಲಿಗೆ ಕೆಲಸದ ಸ್ಥಳದಿಂದ 200 ಹೆಜ್ಜೆ ಗಳನ್ನು ಹಾಕಿ ಹೋಗಬೇಕು. ಒಂದು ಬಾರಿ ಒಬ್ಬ ಮಹಿಳಾ ಕಾರ್ಮಿಕಳು ಮುಟ್ಟಾಗಿ ಪ್ಯಾಡ್ ನೆಂದು ಹೋಗಿದೆ, ಬದಲಾಯಿಸಿಕೊಳ್ಳಬೇಕು ಎಂದು ಬಜರ್ ಪ್ರಸ್ ಮಾಡಿದಳು. ಸೂಪರ್ ವೈಸರ್ ಬಂದು 'ಈಗ ಆಗಲ್ಲ ಸ್ವಲ್ಪ ಸಮಯ ಬಿಟ್ಟು ಹೋಗಿ' ಎಂದ. ಆದರೆ ಆ ಮಹಿಳಾ ಕಾರ್ಮಿಕಳ ಪರಿಸ್ಥಿತಿ ಬೇರೆ ಇತ್ತು. ಪ್ಯಾಡ್ ನೆಂದು ಹೋಗಿ ಬಟ್ಟೆ ನೆಂದು ಹೋಗುತ್ತದೆ (ಅದು ಅವಳಿಗೆ ಮಾತ್ರ ತಾನೆ ಗೊತ್ತಾಗುವುದು) ಎಂದು ಸೂಪರ್ ವೈಸರ್ ಮಾತು ಮೀರಿ ಶೌಚಾಲಯಕ್ಕೆ ಹೋಗಿಬಂದಳು ಆಗ ಮೇಲ್ವಿಚಾರಕ ಹೇಳುತ್ತಾನೆ "ಇದು ವಿಸ್ಟ್ರಾನ್ ಕಂಪನಿ ಹೇಳಿದ್ದು ಕೇಳಬೇಕು! ಇಲ್ಲಿ ಪ್ರಶ್ನಿಸಬಾರದು! ಜೋರಾಗಿ ಮಾತಾನಾಡಬಾರದು! ವಿಧೇಯತೆ ಮುಖ್ಯ" ಎಂದು.

ಒಬ್ಬ ಕಾರ್ಮಿಕ ಬೆಳಗಿನ ಜಾವ 3-30 ಗಂಟೆಗೆ ಎದ್ದರೇ ಮನೆ ಸೇರುತ್ತಾ ಇದ್ದಿದ್ದು ರಾತ್ರಿ 8-00 ಘಂಟೆಗೆ ಅಂದರೆ ಒಟ್ಟು ಹದಿನೈದು ವರೆ ಗಂಟೆಗಳು. ಕೆಲಸದ ಅವಧಿ 12 ಗಂಟೆ. 12 ಗಂಟೆಗಳಲ್ಲಿ 30 ನಿಮಿಷ ಊಟ, 15 ನಿಮಿಷ ತಿಂಡಿ, 10 ನಿಮಿಷ ಟೀ, 1948 ರ ಕಾರ್ಖಾನೆಗಳ ಸೆಕ್ಷನ್ ಕಾಯ್ದೆಯ 51 ರ ಅನ್ವಯ 8 ಗಂಟೆಗಳಿಗಿಂತ ಹೆಚ್ಚುವರಿ ದುಡಿಮೆ ಮಾಡಿಸುವಂತಿಲ್ಲ. ಆದರೂ ಈ ಕಂಪನಿಯಲ್ಲಿ 10 ಸಾವಿರ ಕಾರ್ಮಿಕರಿಗೂ 12 ಘಂಟೆ ಕಡ್ಡಾಯ.

ಹಾಗೇಯೇ ಮಹಿಳಾ ಕಾರ್ಮಿಕರನ್ನು ಹೇಗೆ ದುಡಿಸಬೇಕು. ಎಲ್ಲಿ ದುಡಿಸಬೇಕು ಎಂಬುದರ ಬಗ್ಗೆ 1948 ಕಾರ್ಖಾನೆಗಳ ಕಾಯಿದೆಯ ಸೆಕ್ಷನ್ 66ರ ಉಲ್ಲಂಘನೆಯಾಗಿದೆ. ಅವರನ್ನು ದುಡಿಸಲು ಈ ನಿಯಮಗಳನ್ನು ಅನುಸರಿಸಲಾಗಿಲ್ಲ.

* ಮನೆಯಿಂದ ಕಾರ್ಖಾನೆಗೆ ಕರೆದೊಯ್ಯಲು ವಾಹನ ಸೌಲಭ್ಯ, ಸಿಸಿಟಿವಿ ಕ್ಯಾಮರಾದೊಂದಿಗೆ ಮತ್ತು ಭದ್ರತಾ ಸಿಬ್ಬಂದಿಯೊಂದಿಗೆ ಇರಬೇಕು.
* ಆರೋಗ್ಯಕರವಾದ ಮತ್ತು ಸ್ವಚ್ಛ ಪರಿಸ್ಥಿತಿ ಕೆಲಸದ ಸ್ಥಳದಲ್ಲಿ ಇರಬೇಕು.
* ಒಂದೊಂದು ಬ್ಯಾಚ್ ನಲ್ಲಿ ಗರಿಷ್ಟ 10 ಮಹಿಳಾ ಕಾರ್ಮಿಕರು ಮಾತ್ರ ಇರಬಹುದು. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಒಟ್ಟು ಸಂಖ್ಯೆ ಒಟ್ಟಾರೆ ಸಿಬ್ಬಂದಿಯ 2/3 ರಷ್ಟರ ನಿಗದಿತ ಸಂಖ್ಯೆಯನ್ನು ಮೀರುವಂತಿಲ್ಲ.
* ರಾತ್ರಿ ಪಾವಳಿಯಲ್ಲಿ ಕಾರ್ಖಾನೆಯ ಮಾಲೀಕರು ಕನಿಷ್ಠ ಇಬ್ಬರು ಮಹಿಳಾ ಮೇಲ್ವಿಚಾರಕರನ್ನು ನೇಮಿಸಬೇಕು. ಇವರು ವಿಶೇಷ ಕಲ್ಯಾಣ ಸಹಾಯಕರಾಗಿ ಕಾರ್ಯನಿರ್ವಹಿಸಬೇಕು. ಕಾರ್ಖಾನೆಯ ಪ್ರವೇಶ ದ್ವಾರ ಮತ್ತು ನಿರ್ಗಮ ದ್ವಾರದಲ್ಲಿ ಸೂಕ್ತ ಮಹಿಳಾ ಭದ್ರತೆಯನ್ನು ಒದಗಿಸಬೇಕು.
* ಒಂದು ವೇಳೆ ಊಟ, ವಸತಿ ಸೌಲಭ್ಯವಿದ್ದರೆ ಅದರ ಮೇಲ್ವಿಚಾರಣೆಯನ್ನು ಮಹಿಳೆಯರಿಗೇ ವಹಿಸಬೇಕು.
* ಕಾರ್ಖಾನೆಯ ಒಳಾಂಗಣದಲ್ಲಿ ಮಾತ್ರವೇ ಅಲ್ಲದೇ ಘಟಕದ ಸುತ್ತಮುತ್ತಲೂ ಸಹ ರಹಸ್ಯ ಕ್ಯಾಮರಾಗಳನ್ನು ಅಳವಡಿಸಬೇಕು. ಕನಿಷ್ಠ 45 ದಿನಗಳ ಕ್ಯಾಮರಾ ಚಿತ್ರಣವನ್ನು ಸಂಗ್ರಹಿಸಿಬೇಕು.
* ಒಂದು ಪಾಳಿಯಲ್ಲಿ ನೂರಕ್ಕೂ ಹೆಚ್ಚು ಮಹಿಳಾ ಕಾರ್ಮಿಕರು ಇದ್ದರೆ ತುರ್ತುಪರಿಸ್ಥಿತಿಯನ್ನು ಎದುರಿಸಲು ಪ್ರತ್ಯೇಕ ವಾಹನವನ್ನು ಸಿದ್ಧವಾಗಿಟ್ಟಿರಬೇಕು. ಗಾಯಗೊಂಡವರಿಗೆ, ಲೈಂಗಿಕ ದೌರ್ಜನ್ಯ ಕಿರುಕುಳಕ್ಕೊಳಗಾದವರಿಗೆ ಈ ವಾಹನ ತಕ್ಷಣದ ಪರಿಹಾರ ಒದಗಿಸಲು ಸಜ್ಜಾಗಿರಬೇಕು.
* ಮಹಿಳಾ ಕಾರ್ಮಿಕರನ್ನು ಬೆಳಗಿನ ಪಾಳಿಯಿಂದ ರಾತ್ರಿ ಪಾಳಿಗೆ ವರ್ಗಾಯಿಸಿದರೆ ಅಥವಾ ರಾತ್ರಿಯಿಂದ ಬೆಳಗಿನ ಪಾಳಿಗೆ ವರ್ಗಾಯಿಸಿದರೆ, ಆ ಮಹಿಳೆಯರಿಗೆ ಕನಿಷ್ಠ 12 ಗಂಟೆಗಳ ವಿಶ್ರಾಂತಿ ಸಮಯವನ್ನು ಒದಗಿಸಬೇಕು.
* ಸೂಕ್ತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು

ಪುಟ 10 ಕ್ಕೆ

ವಿಸ್ಟ್ರಾನ್: ಕಾರ್ಮಿಕರ ಗುಲಾಮಗಿರಿಯ ಹೊಸ ಮಾಡೆಲ್......

ಪುಟ 9 ರಿಂದ

* ವಿಶ್ರಾಂತಿ ಕೊಠಡಿಗಳನ್ನು ಸಮರ್ಪಕವಾಗಿ ಒದಗಿಸಬೇಕು. ಮಹಿಳಾ ಕಾರ್ಮಿಕರಿಗೆ ಕೊಠಡಿಗಳನ್ನು ಸಮರ್ಪಕವಾಗಿ ಒದಗಿಸಬೇಕು. ಮಹಿಳಾ ಕಾರ್ಮಿಕರಿಗೆ ಪ್ರತ್ಯೇಕ ಕ್ಯಾಂಟೀನ್ ಒದಗಿಸಬೇಕು.

ಮಾತ್ರವಲ್ಲದೇ ಈ ಕಾರ್ಮಿಕರ ದೈನಂದಿನ ಜೀವನದ ಹಾಗೂ ಕುಟುಂಬ ಮತ್ತು ಸಮಾಜದ ಮೇಲಾಗುವ ಪರಿಣಾಮಗಳನ್ನು ಚರ್ಚಿಸಬೇಕಾಗಿದೆ.

ಗುತ್ತಿಗೆ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸುವಾಗ ಅನುಮತಿ ತೆಗೆದುಕೊಂಡಿದಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಿಸಿ ಅವರಿಗೆ ಯಾವುದೇ ರೀತಿಯ ತರಬೇತಿಯನ್ನು ನೀಡದೆ ನೇರವಾಗಿ ಉತ್ಪಾದನೆಯಲ್ಲಿ ತೊಡಗಿಸಿರುವುದನ್ನು ಕಾರ್ಮಿಕ ಇಲಾಖೆ ಗುರ್ತಿಸಿದೆ. ಮಾತ್ರವಲ್ಲದೆ ಹೆಚ್ಚಿನ ಕಾರ್ಮಿಕರಿಗೆ ಉದ್ಯೋಗ ಪ್ರಮಾಣಪತ್ರ (appiontment order) ಕೊಡದೇ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ.

ವೇತನ ಸಮಸ್ಯೆ

ಕಾರ್ಮಿಕರನ್ನು ಕೆಲಸಕ್ಕೆ ತೆಗೆದು ಕೊಳ್ಳುವಾಗ ತಿಂಗಳಿಗೆ 21 ಸಾವಿರ ವೇತನ ನಿಗಪಡಿಸಿ, ESI, PF ಕಡಿತವಾಗಿ 16,500 ಕೈಗೆ ಸಿಗುತ್ತದೆ. ಎಂದು ನಂಬಿಸಲಾಗಿದೆ. ಆದರೆ ಆ ಮಹಿಳಾ ಕಾರ್ಮಿಕರಿಗೆ ಬಂದದ್ದು 1 ತಿಂಗಳು 4000, ಮತ್ತೊಂದು ತಿಂಗಳು 12,000 ಮತ್ತೊಂದು ತಿಂಗಳ ಸಂಬಳ ಬರಲೇ ಇಲ್ಲ. ಈ ಸಂಬಳ ಬರುವುದು ಆ ತಿಂಗಳ 15, 20 ನೇ ತಾರೀಖಿನ ನಂತರ ಆ ಸಂಬಳವೂ ಪೂರ್ತಿಯಾಗಿ ಬರುವುದಿಲ್ಲ. ಈ ಸಂಬಳವನ್ನು ತೆಗೆದುಕೊಳ್ಳಬೇಕಾದರೆ ಕಾರ್ಖಾನೆಯಲ್ಲಿ ಸುಮಾರು ಕಳೆದ ಮೂರು ತಿಂಗಳಲ್ಲಿ 7 ರಿಂದ 8 ಬಾರಿ ಲೈನ್ ನಲ್ಲಿ ಕೆಲಸವನ್ನು ನಿಲ್ಲಿಸಿದ ನಂತರ ಮುಖ್ಯ ಆಡಳಿತಾಧಿಕಾರಿಗಳು ಬಂದು ನಿಮ್ಮ ಸಂಬಳವನ್ನು ಹಾಕುತ್ತೇವೆ ಎಂದು ಸಮಜಾಯಿಸಿದ ನಂತರ ಕೆಲಸ ಪ್ರಾರಂಭ ಮಾಡುತ್ತಿದ್ದರು. ಕಾರ್ಮಿಕರು ಸಂಘವಿಲ್ಲದಿದ್ದರೂ ತಮ್ಮ ಅಸಹನೆಯನ್ನು ತೋರಿಸುತ್ತಿದ್ದರೂ ಕೂಡಾ ಸಂಬಳಗಳನ್ನು ಸರಿಯಾಗಿ ಪಾವತಿಸುತ್ತಿರಲಿಲ್ಲ. ಸಂಬಳ ಕಡಿಮೆ ಯಾಕೆಂದರೆ ಮಿಸ್ ಪಂಚ್ ಎನ್ನುತ್ತಿದ್ದರು ಅಷ್ಟೆ. ಇಷ್ಟು ದೊಡ್ಡ ಕಂಪನಿಯಲ್ಲಿ ಪಂಚಿಂಗ್ ಮಿಷನ್ ಸಿಸ್ಟಮ್ ಅಪ್ ಡೇಟ್ ಆಗುತ್ತಿರಲ್ಲಿಲ್ಲ. ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನವನ್ನು ಯಾರಿಗೂ ಕೊಟ್ಟಿರಲ್ಲಿಲ್ಲ. ಓವರ್ ಟೈಂ ಹಣ ಕೇಳಿದರೆ ಗುತ್ತಿಗೆದಾರರ ಉತ್ತರ ತಿಂಗಳಿಗೆ ಒಂದು ದಿನ ನೀವು ಉಚಿತವಾಗಿ ರಜೆ ಪಡೆಯಬಹುದು ಎಂದು. ಆ ರಜೆಯನ್ನು ಯಾರಿಗೂ ಕೊಡುತ್ತಿರಲ್ಲಿಲ್ಲ. 1948 ಕನಿಷ್ಠ ವೇತನ ಕಾಯ್ದೆ ಮತ್ತು ಈ ಕಾಯ್ದೆ ಸೆಕ್ಷನ್ 59 ರ ಪ್ರಕಾರ ಹೆಚ್ಚುವರಿ ಅವಧಿಗೆ ಹೆಚ್ಚುವರಿ ವೇತನ ನೀಡಬೇಕು. ಯಾವುದೇ ವ್ಯಕ್ತಿ ತನ್ನ ಶ್ರಮ ಅಥವಾ ಸೇವೆಯನ್ನು ವೇತನ ಪಡೆಯುವ ಉದ್ದೇಶದಿಂದ ಮತ್ತೊಬ್ಬರಿಗೆ ನೀಡಿ, ಕನಿಷ್ಠ ವೇತನಕ್ಕಿಂತಲೂ ಕಡಿಮೆ ದರದಲ್ಲಿ ಮಂಜೂರಿ ಪಡೆದಿದ್ದರೆ, ಅದು ಸಂವಿಧಾನದ ವಿಧಿ 23 ರ ಅನ್ವಯ ಬಲಾತ್ಕಾರದ ದುಡಿಮೆ ಎನಿಸಿಕೊಳ್ಳುತ್ತದೆ.

ಇನ್ನು ಊಟದ ವಿಷಯಕ್ಕೆ ಬಂದರೆ ಕ್ಯಾಂಟೀನ್ ನಲ್ಲಿ ತುಂಬಿರುವ ಕಸದ ಡಬ್ಬಿಗಳನ್ನು ನೋಡಿದರೆ ಗೊತ್ತಾಗುತ್ತದೆ ಎನ್ನುತ್ತಾರೆ. ಕಾರ್ಮಿಕರಿಗೆ ಮೊದಲು ಬೆಳಗ್ಗೆ ಟೀ ಬಿಸ್ಕೆಟ್ ಕೊಡುತ್ತಿದ್ದರು. ನಂತರ ಬಿಸ್ಕೆಟ್ ನಿಲ್ಲಿಸಿದರು. ಪ್ಲೇಟ್ ಒರೆಸಲು ಟಿಶ್ಯೂ ಪೇಪರ್ ಕೊಡುತ್ತಿದ್ದರು ನಂತರ ಅದನ್ನು ನಿಲ್ಲಿಸಿದರು. 15 ನಿಮಿಷದಲ್ಲಿ ಟಿಫಿನ್, ಟೀ, 10 ನಿಮಿಷದಲ್ಲಿ ಟೀ ಕುಡಿಯಬೇಕೆಂದರೆ ಸಾವಿರಾರು ಕಾರ್ಮಿಕರು ಸ್ಥಳದಿಂದ ಕ್ಯಾಂಟೀನ್‌ಗೆ ಹೆಚ್ಚು ದೂರ ನಡೆಯಬೇಕು. ಕ್ಯೂ ನಿಲ್ಲಬೇಕು, ನಿಗದಿತ ಸಮಯಕ್ಕೆ ವಾಪಸ್ಸು ಬರಬೇಕಾಗಿದ್ದರಿಂದ ಹಲವಾರು ಕಾರ್ಮಿಕರು ಟೀ ಕುಡಿಯಲು ಹೋಗುತ್ತಲೇ ಇರಲಿಲ್ಲ. ಅಂದರೆ ಬೆಳಿಗ್ಗೆ 3–30 ರಿಂದ ರಾತ್ರಿ 8 ರವರೆಗೆ ಸಮಯಕ್ಕೆ ಮತ್ತು ಅಗತ್ಯಕ್ಕೆ ತಕ್ಕ ನೀರು ಆಹಾರ ಸಿಕ್ಕುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕಿದೆ.

ಬಹುರಾಷ್ಟ್ರೀಯ ಕಂಪನಿಗಳು ವಿದೇಶಿ ಕಂಪನಿಗಳು ಮತ್ತು ದೊಡ್ಡ ಕಾರ್ಖಾನೆಗಳು ಇಂದು ಹಿಂದುಳಿದ ಪ್ರದೇಶಗಳಿಗೆ ಹೋಗುವುದು ಕೇವಲ ಅಲ್ಲಿಯ ಜನರಿಗೆ ಉದ್ಯೋಗ ಕೊಡುವುದು ಒಂದು ಅಂಶವಷ್ಟೇ. ಮುಖ್ಯವಾದ ಅವರ ಗುರಿ ಏನೆಂದರೆ ಕಡಿಮೆ ಬೆಲೆಗೆ ಭೂಮಿ, ಕಡಿಮೆ ಕೂಲಿಯಿರುವುದು. ಅಂದರೆ ಕಡಿಮೆ ಖರ್ಚಿನಲ್ಲಿ ವಸ್ತುಗಳ ಉತ್ಪಾದನೆ ಮಾಡುವುದು. ಬಂಡವಾಳಗಾರರು ವಸ್ತುವಿನ ಉತ್ಪಾದನೆಗೆ ಬೇಕಾಗುವ ಕಚ್ಚಾ ಸಾಮಗ್ರಿಗಳ ಬೆಲೆ ಹೆಚ್ಚಾಗಿರುವುದನ್ನು ಪರಿಗಣಿಸುವುದಿಲ್ಲ. ಬದಲಾಗಿ ಕಾಮಿಕರ ಮೇಲಿನ ವೆಚ್ಚವನ್ನು ಮಾತ್ರ ಹೆಚ್ಚು ಪರಿಗಣಿಸಲಾಗುತ್ತದೆ.

ಅದನ್ನು ಪ್ರಶ್ನಿಸಲು ಹೋದವರನ್ನು ನಿರ್ದಯವಾಗಿ ನಡೆಸಿಕೊಳ್ಳಲಾಗುತ್ತದೆ. ಅದಕ್ಕೆ ಸರಕಾರ ಬಂಡವಾಳಗಾರರ ಜೊತೆ ನಿಲ್ಲುತ್ತದೆಯೇ ಹೊರತು ಓಟು ಹಾಕಿದವರ ಪರ ನಿಲ್ಲುವುದಿಲ್ಲ ಎಂಬುದು ವಿಸ್ಟ್ರನ್ ನಲ್ಲಿ ನಡೆಯುತ್ತಿರುವ ಘಟನೆಗಳಿಂದ ಗೊತ್ತಾಗುತ್ತದೆ. ವಿಸ್ಟ್ರಾನ್ ಕಂಪನಿ ಮಾಲೀಕರು ನಮ್ಮ ಕಂಪನಿಯಿಂದ ತಪ್ಪಾಗಿದೆ, ಕಾರ್ಮಿಕರ ಬಳಿ ಕ್ಷಮೆ ಯಾಚಿಸುತ್ತೇವೆ ಎಂದು ಹೇಳಿದ್ದಾರೆ. ಆದರೂ ಕೂಡಾ ಅಲ್ಲಿಯ ಸಂಸದರು, ರಾಜ್ಯ ಮತ್ತು ಕೇಂದ್ರ ಸರ್ಕಾರ ಹಿಂಸೆ ಮಾಡಿದವರನ್ನು ಬಂಧಿಸುತ್ತೇವೆ, ಬಿಡುವುದಿಲ್ಲ ಎಂದು ಗುಟುರು ಹಾಕುತ್ತಿವೆ. ಕೋಲಾರ ಜಿಲ್ಲೆಯ ನೂರಾರು ಯುವಕ–ಯುವತಿಯರನ್ನು ಬಂಧನ ಮಾಡಿ ಜೈಲಿಗೆ ಕಳುಹಿಸುತ್ತಲೇ ಇವೆ.

ವಿಸ್ಟಾನ್ ಮಾತ್ರವಲ್ಲ ಹಲವು ವಿದೇಶೀ ಕಂಪನಿಗಳ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳ ವ್ಯಾಪಕ ಉಲ್ಲಂಘನೆ ಆಗುತ್ತಿದೆ. ಕಾರ್ಖಾನೆ ಆಡಳಿತದ ದಬ್ಬಾಳಿಕೆಯಿಂದ ಕಾರ್ಮಿಕರ ಸಮಸ್ಯೆಗಳನ್ನು ಕೇಳುವವರಿಲ್ಲ. ಕಾರ್ಮಿಕ ಇಲಾಖೆ ಮಧ್ಯಪ್ರವೇಶ ಮಾಡದೆ ಕಣ್ಣುಮುಚ್ಚಿ ಕೂತಿದೆ. ಕಾರ್ಮಿಕ ಸಂಘಗಳಿಗೆ ಯಾವುದೇ ಅವಕಾಶ ಕೊಡಲಾಗಿಲ್ಲ. ವಿಸ್ಟಾನ್ ಮಾತ್ರವಲ್ಲ ಟೊಯೊಟಾ ಕಿರ್ಲೋಸ್ಕರ್, ಖಿಖಒ, ಸ್ಟ್ಯಾನ್ ರ್ಝುನ್ ಮುಂತಾದ ಹಲವು ವಿದೇಶೀ ಕಂಪನಿಗಳ ಕಾರ್ಖಾನೆಗಳಲ್ಲಿ ಕಾರ್ಮಿಕರ ಗುಲಾಮಗರಿಯ ಹೊಸ ಮಾಡೆಲ್ ಜಾರಿಗೊಳಿಸಲಾಗಿದೆ. ಈ ಮಾಡೆಲ್ ಕಾರ್ಮಿಕರಲ್ಲಿ ಉಂಟು ಮಾಡಿರುವ ದುರ್ಭರ ಪರಿಸ್ಥಿತಿ ಎಷ್ಟು ಹದಗೆಟ್ಟಿದೆಯೆಂದರೆ ವಿಸ್ಟಾನ್ ನಲ್ಲಿ ನಡೆದಂತಹ ಆಕ್ರೋಶದ ಸ್ಫೋಟಗಳು ಯಾವಾಗ ಎಲ್ಲಿ ಬೇಕಾದರೂ ಆಗಬಹುದು. ಆದರೂ ರಾಜ್ಯ ಸರ್ಕಾರ ಏಕಮುಖವಾಗಿ ವ್ಯಾಪಾರ ಸುಲಭೀಕರಣ ಹೆಸರಿನಲ್ಲಿ ಸಂಪೂರ್ಣವಾಗಿ ಬಂಡವಾಳದ ಎದುರು ಅದರ ಪರವಾಗಿ ಮಂಡಿಯೂರಿದೆ. ಬಂಡವಾಳದ ಏಕ ಚಲನೆಯಿಂದ ಏನಾದರೂ ಸಾಧ್ಯವೇ? ಶ್ರಮ ಶಕ್ತಿ ಇಲ್ಲದಿದ್ದರೆ ಬಂಡವಾಳ ಕೇವಲ ಕಾಗದ ಮಾತ್ರ ಎಂಬುದರ ವೈಜ್ಞಾನಿಕ ಸತ್ಯವನ್ನು ಈ ಸರಕಾರಗಳು ಅರ್ಥ ಮಾಡಿಕೊಳ್ಳುತ್ತವೆಯೇ? ಈಗಲಾದರೂ ಸರಕಾರ ಎಚ್ಚೆತ್ತುಕೊಂಡು ಕಾರ್ಮಿಕ ಇಲಾಖೆಯ ಮೂಲಕ ಕಾರ್ಮಿಕರ ಪರ ಮಧ್ಯಪ್ರವೇಶ ಮತ್ತು ಕಾರ್ಮಿಕ ಸಂಘಗಳಿಗೆ ಅವಕಾಶ ಕೊಡದಿದ್ದರೆ ಆಗುವ ಆಸ್ಫೋಟಗಳಿಗೆ ಅದೇ ಹೊಣೆ ಹೊರಬೇಕು. ■

ಜಾನುವಾರು ಹತ್ಯಾ ನಿಷೇದ: ಕಾರ್ಪೋರೇಟ್ ಲೂಟಿಯನ್ನು ವಿಸ್ತರಿಸಿ......

ಪುಟ 9 ರಿಂದ

ಪೈಗೆ ಮಾತ್ರ, ಅಂದರೇ, ಪ್ರತಿ ಲೀಟರ್ ಗೆ ಕನಿಷ್ಠ 9 ರೂಗಳ ನಷ್ಟವನ್ನು ಹೊಂದುತ್ತಿದ್ದರು.

ಇದರಿಂದಾಗಿ, ಹೈನುಗಾರರ ಪ್ರತಿಭಟನೆಗಳಿಗೆ ಮಣಿದ ರಾಜ್ಯ ಸರಕಾರ ಆ ದಿನಗಳಲ್ಲಿ ಅವರ ನಷ್ಟವನ್ನು ಕಡಿಮೆ ಮಾಡಲು ತಲಾ ಲೀಟರ್ ಗೆ 4 ರೂ ಗಳನ್ನು ಸಹಾಯಧನವಾಗಿ ನೀಡುತ್ತಿತ್ತು. ಆದಾಗಲೂ ಅವರು ತಲಾ ಲೀಟರುಗಳಿಗೆ 5 ರೂಗಳ ನಷ್ಟವನ್ನೇ ಅನುಭವಿಸುತ್ತಿದ್ದರು.

ಇಂತಹುದೇ ಕಾರಣಗಳಿಂದಾಗಿ, ವ್ಯವಸಾಯಕ್ಕೆ ಬಾರದ ಜಾನುವಾರುಗಳನ್ನು ತಮ್ಮ ಬದುಕು ನಿರ್ವಹಿಸಲು, ಇತರೇ ಉದ್ಯಮಗಳಿಗಾಗಿ ಮಾರಾಟ ಮಾಡುತ್ತಿದ್ದಾರೆ. ಆದಾಗಲೂ, ಸರಕಾರಗಳ ಜನ ವಿರೋಧಿ ನೀತಿಗಳಿಂದ ಜಾನುವಾರು ಸಾಕಾಣಿಕೆಯೇ ಹೊರೆ ಎನಿಸಿ, ವ್ಯಾಪಕ ನಷ್ಟ ಉಂಟಾಗುತ್ತಿದ್ದಲ್ಲಿ ಅವರು ಪರಂಪರೆಯಿಂದ ನೆರವು ಪಡೆಯುತ್ತಿದ್ದ ಆ ಉಪಕಸುಬನ್ನು ತೊರೆಯುತ್ತಿದ್ದಾರೆ ಅಷ್ಟೇ! ರಾಜ್ಯದಲ್ಲಿ ಖಂಡಿತಾ, ಜಾನುವಾರು ಸಾಕಣೆ ಪ್ರಧಾನ ಕಸುಬಾಗದೇ, ಉಪ ಕಸುಬಾಗಿ ಅವನತಿಯೆಡೆಗೆ ದೂಡಲ್ಪಡುತ್ತಿದೆ.

ಅದೇ ಸಂದರ್ಭದಲ್ಲಿ ಜಾನುವಾರುಗಳ ಉಪಯುಕ್ತತೆಯಲ್ಲೇನು ಈಗಲೂ ಕೊರತೆಯಾಗಿಲ್ಲ. ಹೀಗಾಗಿ, ಒಂದೆರಡು ದನಗಳನ್ನು ಸಾಕಣೆ ಮಾಡುವ ಉಪಕಸುಬಾಗಿದ್ದ ಜಾನುವಾರು ಸಾಕಾಣೆಯು, ನೂರಾರು ದನಗಳನ್ನು ಸಾಕಾಣೆ ಮಾಡುವ ಹೆಚ್ಚು ಬಂಡವಾಳ ಹೂಡುವ ಪ್ರಧಾನ ಕಸುಬಾಗಿ ಬದಲಾಗುತ್ತಿದೆ. ಹೀಗೆ, ಅದು ಬಡವರು ಹಾಗೂ ರೈತರ ಕೈನಿಂದ ಬಂಡವಾಳ ತೊಡಗಿಸುವವರ ಕೈಗೆ ಬದಲಾಗುತ್ತಿದೆ. ಹಾಲು ಉತ್ಪಾದನೆಯಲ್ಲಿ ಹೆಚ್ಚು ಇಳುವರಿ ನೀಡಲಾಗದ ದೇಶೀಯ ಅಥವಾ ಜವಾರಿ ಹಸು ಮತ್ತು ಎಮ್ಮೆ ನಿಧಾನವಾಗಿ ನೇಪಥ್ಯಕ್ಕೆ ಸರಿಯುತ್ತಿವೆ. ಆದರೇ, ಇತರೇ ತಳಿಗಳ ಜಾನುವಾರುಗಳು ಅವುಗಳ ಸ್ಥಾನಗಳನ್ನು ಅಕ್ರಮಿಸಿವೆಯಷ್ಟೇ.

ಕೇಂದ್ರ ಸರಕಾರವು ಕಾರ್ಪೋರೇಟ್ ಕಂಪನಿಗಳಿಗೆ ಜಾನುವಾರು ಸಾಕಣೆ ಮಾಡಲು ಅನುಮತಿ ನೀಡುವ ಕಾಯ್ದೆಯನ್ನು ಜಾರಿಗೆ ತಂದಿರುವುದರಿಂದ ಇನ್ನು ಮುಂದೆ, ಭಾರೀ ಬಂಡವಾಳದ ಹೂಡಿಕೆಯಿಂದಾಗಿ ಇದೇ ಪ್ರಕ್ರಿಯೆ ಇನ್ನಷ್ಟು ವ್ಯಾಪಕವಾಗಿ ಘಟಿಸಲಿದೆ. ಯಾಕೆಂದರೇ, ಕಾರ್ಪೋರೇಟ್ ಕಂಪನಿಗಳು ಕೆಲವು ನೂರು ಸಂಖ್ಯೆಯಲ್ಲಲ್ಲಾ ಬದಲಿಗೆ, ಹಲವು ಸಾವಿರ ಸಂಖ್ಯೆಯಲ್ಲಿ ಅಧಿಕ ಇಳುವರಿ ನೀಡುವ ತಳಿ ಹಸು ಹಾಗೂ ಎಮ್ಮೆಗಳನ್ನು ತಮ್ಮ ಭಾರೀ ಪ್ರಮಾಣದ ಡೈರಿಗಳಲ್ಲಿ ಅತ್ಯಂತ ಆಧುನಿಕ ತಂತ್ರಜ್ಞಾನ ಬಳಸಿ ಸಾವಿರಾರು ಕೋಟಿ ಬಂಡವಾಳ ಹೂಡಿ ಹೈನುಗಾರಿಕೆ ಮತ್ತು ಮಾಂಸ ಮತ್ತಿತರೇ ಸಂಬಂದಿ ಉದ್ಯಮಗಳಲ್ಲಿ ತೊಡಗಲಿವೆ. ಇದರಿಂದ, ದೇಶೀಯ ತಳಿಗಳ ಹಸುಗಳು/ ಎಮ್ಮೆಗಳು ಇಲ್ಲವಾಗಿ ಅಳಿವಿನಂಚಿಗೆ ಸಾಗಲಿವೆ. ಈ ಕಾರ್ಪೋರೇಟ್ ಕಂಪನಿಗಳು ಹೈನುಗಾರಿಕೆ ಮತ್ತಿತರೇ ಉದ್ಯಮದಲ್ಲಿ ಒಡ್ಡುವ ಭಾರಿ ಸ್ಪರ್ಧೆಯಿಂದಾಗಿ, ಉಪಕಸುಬಾಗಿ ಅದರ ಸಾಕಾಣಿಕೆಯಲ್ಲಿ ತೊಡಗಿರುವ ಬಡವರು, ಅವರ ಹೈನುಗಾರಿಕೆ ಮತ್ತಿತರೇ ಉತ್ಪಾದನೆಗಳಿಂದ ಹೊರ ಹಾಕಲ್ಪಡಲಿದ್ದಾರೆ.

ಮಸೂದೆಯಲ್ಲೇನಿದೆ?

ಉಪಕಸುಬಾಗಿ ಮುಂದುವರೆಯುತ್ತಿರುವ ಮತ್ತು ಅದು ಎದುರಿಸುತ್ತಿರುವ ಜಾನುವಾರು ಸಾಕಾಣೆಯ ದುಸ್ಥಿತಿಯ ಮತ್ತು ಅದರಿಂದಾಗಿ ದೇಶಿ ತಳಿಯ ಹಸುಗಳು ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಕರ್ನಾಟಕ ಸರಕಾರ ಈ ಜಾನುವಾರು ಹತ್ಯೆ ನಿಷೇಧ ಮಸೂದೆ–2020 ತಂದಿದೆ. ಇದು, ಉಪಕಸುಬನ್ನು ಮುಂದುವರೆಸಲು ಸಹಕಾರಿಯಾಗಲಿದೆಯೇ? ಮತ್ತು ದೇಶೀ ತಳಿಗಳ ರಕ್ಷಣೆಗೆ ಸಹಕಾರಿಯಾಗಿದೆಯೇ? ಅಥವಾ ದೇಶೀ ತಳಿಗಳ ಮತ್ತು ಉಪಕಸುಬುದಾರರ ಏಳಿಗೆಗೆ ನೆರವು ನೀಡಲಿದೆಯೇ, ಅಥವಾ ಬೇರೇನಾದರು ಕ್ರಮ ವಹಿಸಲು ತರಲಾಗಿದೆಯೇ ಎಂಬುದನ್ನು ಗಮನಿಸ ಬೇಕಾಗಿದೆ.

ಮಸೂದೆಯು, ಬಹುತೇಕ ಜಾನುವಾರುಗಳ ಹತ್ಯೆಯೇ ಜಾನುವಾರು ಸಂತತಿಯ ನಾಶಕ್ಕೆ ಕಾರಣವಾಗಿದೆಯೆಂದು ಪರಿಭಾವಿಸುತ್ತದೆ ಮತ್ತು ಅದು ಹತ್ಯೆಯನ್ನು ಜಾನುವಾರುಗಳ ವಯೋ ಮಾನದ 13 ವರ್ಷಗಳ ಕಾಲದ ವರೆಗೆ ಮಾಡದಂತೆ ನಿರ್ಬಂಧಿಸುತ್ತದೆ. ಬಹುಶಃ ಮಿಶ್ರ ತಳಿಗಳ ಹಸುಗಳು ಸಾಮಾನ್ಯವಾಗಿ ಅವುಗಳ 13 ವರ್ಷಗಳ ವರೆಗೆ ಹೈನುಗಾರಿಕೆಗೆ ಉಪಯುಕ್ತವಾಗಿವೆ. ನಂತರ ಅವು ಬರಡಾಗುವುದರಿಂದ ಹೈನುಗಾರಿಕೆಗೆ ನಿರುಪಯುಕ್ತವಾಗುತ್ತವೆ. ಆ ನಂತರ ಅಂದರೇ, ಹಸುವಿನ 13 ವರ್ಷಗಳ ನಂತರ ಪರವಾನಗಿಯೊಂದಿಗೆ ಮಾರಾಟ ಮಾಡಬಹುದಾಗಿದೆ. ಇದರಿಂದ ಜಾನುವಾರು ರಕ್ಷಣೆಯಾಗುತ್ತದೆಯೆಂದು ಮಸೂದೆ ಅಭಿಪ್ರಾಯ ಪಡುತ್ತದೆ.

ನಿಜಾ! ಯಾವುದೇ ಹೈನುಗಾರನು ತನ್ನ ಹಸುವನ್ನು ಅದು ಹಾಲು ಕರೆಯುವ ಅವಧಿ ಪೂರ್ಣ ಪ್ರಮಾಣದಲ್ಲಿ ಪೂರೈಕೆಯಾಗುವವರೆಗೆ ಅದರ ಹತ್ಯೆಗಾಗಿ ಮಾರಾಟ ಮಾಡಲು ಬಯಸುವುದಿಲ್ಲಾ! ಆದರೇ ಅದು 13 ವರ್ಷ ಪೂರೈಕೆಗೆ ಮುಂಚೆಯೇ ಕಾರಣಾಂತರಗಳಿಂದ ಹಾಲು ಕೊಡುವುದನ್ನು ನಿಲ್ಲಿಸಿಬಿಟ್ಟರೇ, ಅಥವಾ ವ್ಯಾಪಕವಾಗಿ ನಷ್ಟವಾಗುವ ರೀತಿಯಲ್ಲಿ ಹಾಲಿನ ಇಳುವರಿ ಕಡಿಮೆಯಾದ ಸಂದರ್ಭಗಳು ಬಂದು ಬಿಟ್ಟರೇ, ಅಂತಹ ಹಸು ಅಥವಾ ಯಾವುದೇ ಜಾನುವಾರುಗಳನ್ನು ಇತರರಿಗೆ ಹಸು, ಎಮ್ಮೆಗಳಾದರೇ ಹೈನುಗಾರಿಕೆಗೂ ಅಥವಾ ನಿರುಪಯುಕ್ತ ದನಗಳಾದರೇ ಮಾಂಸಕ್ಕಾಗಿ ಮಾರಾಟ ಮಾಡುವುದಿದೆ. ಈ ಮಸೂದೆ ಇದನ್ನು ನಿರ್ಬಂಧಿಸುತ್ತದೆ.

ಅದೇ ರೀತಿ, ಮಿಶ್ರ ತಳಿಯ ಗಂಡುಕರುಗಳು, ಕೋಣ ಕರು, ಬೆದರಿಸುವ ಎತ್ತು ಅಥವಾ ನಿರುಪಯೋಗಿಯಾದ ಎತ್ತುಗಳನ್ನು ಕೂಡಾ ಮಸೂದೆಯಂತೆ ಸಾಕಾಣಿದಾರರು, ಈ ಉಪಕಸುಬುದಾರರು 13 ವರ್ಷಗಳ ಕಾಲ ಸಾಕಲೇ ಬೇಕಾಗುತ್ತದೆ. ಇಲ್ಲವೇ ಯಾವುದಾದರೂ ದೇವರ ಹೆಸರೇಳಿ, ಬೀದಿ ಬಸವಗಳಾಗಿ ಇಲ್ಲವೇ ಅಮ್ಮನ ಕೋಣಗಳಾಗಿ ಬಿಡಬೇಕಾಗುತ್ತದೆ. ಮಾರಾಟ ಮಾಡುವಂತಿಲ್ಲ. ಮಾರಾಟ ಮಾಡುವುದು ಅಪರಾಧವಾಗುತ್ತದೆ. ಯಾಕೆಂದರೇ ಅಂತಹ ನಿರುಪಯುಕ್ತ ದನಗಳನ್ನು ಯಾರೂ ಸಾಕಣೆಗಾಗಿ ಖರೀದಿಸುವುದಿಲ್ಲ. ಯಾರಾದರೂ ಖರೀದಿಸುವವರಿದ್ದರೇ ಅಂತಹವುಗಳನ್ನು ಮಾಂಸದ ಕಾರಣಕ್ಕಾಗಿಯೇ ಖರೀದಿಸಲಾಗುತ್ತದೆ. ಹಾಗೆ ಅವುಗಳಿಂದ ಮಾಂಸ ಪಡೆಯಲು ವಧೆ/ ಹತ್ಯೆ ಮಾಡಲೇ ಬೇಕಾಗುತ್ತದೆ. ಆದರೆ ಮಸೂದೆಯು, ಜಾನುವಾರುಗಳ ವಿಚಾರದಲ್ಲಿ ಯಾವುದೇ ಕಾನೂನು ಅಥವಾ ಸಂಪ್ರದಾಯ ಏನೇ ಹೇಳಿರಲಿ, ಯಾವುದೇ ರೀತಿಯಲ್ಲಿ ಹತ್ಯೆ / ವಧೆ ಮಾಡುವುದು ಅಪರಾಧವೆಂದೆ ಒತ್ತಿ ಹೇಳುತ್ತದೆ. ಆ ಮೂಲಕ ಊರಮ್ಮ ಅಥವಾ ಗ್ರಾಮ ದೇವತೆಗಳ ಜಾತ್ರೆ ಅಥವಾ ಉತ್ಸವಗಳ ಸಂದರ್ಭದಲ್ಲು ಜಾನುವಾರುಗಳನ್ನು ಯಾವುದೇ ಸ್ವರೂಪದಲ್ಲಿ ಬಲಿ/ ವಧೆ ಮಾಡುವುದನ್ನು ಅಪ್ರತ್ಯಕ್ಷವಾಗಿ ನಿಷೇಧಿಸಿದೆ.

ಹಾಗೊಂದು ವೇಳೆ 13 ವರ್ಷ ವರ್ಷದೊಳಗಿನ ಯಾವುದೇ ಜಾನುವಾರುಗಳನ್ನು ಹತ್ಯೆ ಮಾಡಿದರೇ ಅಥವಾ ಹತ್ಯೆ ಮಾಡುವ ಉದ್ದೇಶಕ್ಕೆ ಮಾರಾಟ ಮಾಡಿದರೇ ಅದನ್ನು ಶಿಕ್ಷಾರ್ಹ ಅಪರಾಧವೆಂದು ಮಸೂದೆಯು ಘೋಷಿಸುತ್ತದೆ. ಈ ಇಬ್ಬರನ್ನೂ ದಂಡಿಸಲು ಅದು ಹೇಳುತ್ತದೆ. ಇಂತಹ ಅಪರಾಧಕ್ಕೆ ಅದು ಮೊದಲ ಬಾರಿಯದಾಗಿದ್ದರೇ, ಮೂರರಿಂದ ಏಳು ವರ್ಷಗಳ ಜೈಲು ಶಿಕ್ಷೆಯನ್ನು ಇಲ್ಲವೇ 50 ಸಾವಿರದಿಂದ 5 ಲಕ್ಷ ರೂಗಳ ವರೆಗಿನ ದಂಡವನ್ನು ಇಲ್ಲವೇ ಎರಡನ್ನು ವಿಧಿಸಲು ನಿರ್ದೇಶಿಸುತ್ತದೆ.

ಎರಡನೇ ಬಾರಿಯೂ ಅಂತಹ ಅಪರಾಧ ಮಾಡಿದರೇ, 7 ವರ್ಷದ ಜೈಲು ಶಿಕ್ಷೆಯನ್ನು ಮತ್ತು ದಂಡವನ್ನು ದ್ವಿಗುಣಗೊಳಿಸುತ್ತದೆ.

ಅದು ಮಾತ್ರವೇ ಅಲ್ಲಾ, ಜಾನುವಾರು ಸಂರಕ್ಷಣೆಯ ಹೆಸರಿನಲ್ಲಿ ದಾಳಿ ಮಾಡುವ ಮತಾಂಧ ಕ್ರಿಮಿನಲ್ ಗಳ ಮೇಲೆ ಯಾವುದೇ ಕ್ರಮ ವಹಿಸಬಾರದೆಂದು ಅವರ ಕೆಲಸವನ್ನು ಸಮರ್ಥಿಸುತ್ತದೆ. ಈ ಮಸೂದೆಯು, ಈ ತೀವ್ರ ಸ್ವರೂಪದ ದಂಡನೆಗಳು ಹಾಗೂ ಗೋ ಸಂರಕ್ಷಕರ ದಾಳಿಗಳನ್ನು ಸಮರ್ಥಿಸುವ ಮೂಲಕ ಜಾನುವಾರುಗಳ ಹತ್ಯೆಯನ್ನು ಕಠಿಣವಾಗಿ ನಿರ್ಬಂಧಿಸುತ್ತದೆ. (ಮುಂದುವರೆಯುತ್ತದೆ)

[redacted]

ಪ್ಲಾಂಟೇಶನ್ ಕಾರ್ಮಿಕರು



19ನೇ ಶತಮಾನದ ಮಧ್ಯಭಾಗದಲ್ಲಿ ಭಾರತದ ಕ್ಷೀಣಿಸುತ್ತಿದ್ದ ಕೃಷಿ ಆರ್ಥಿಕತೆಯಿಂದ ಲಕ್ಷಾಂತರ ಕೃಷಿ ಕಾರ್ಮಿಕರು ಕೆಲಸ ಕಳೆದುಕೊಂಡು, ಆಗ ಅಭಿವೃದ್ಧಿ ಹೊಂದುತ್ತಿದ್ದ ಪ್ಲಾಂಟೇಶನ್ ಕೈಗಾರಿಕೆಗೆ ನಿರಂತರ ಕಾರ್ಮಿಕ ಬಲದ ಪೂರೈಕೆಯ ಮೂಲವಾಗಿ ರೂಪಗೊಂಡರು. ಭಾರತದ ಟೀ ಪ್ಲಾಂಟೇಶನಗಳ ಕಾರ್ಮಿಕರ ಪರಿಸ್ಥಿತಿ, ಸಾಗರೋತ್ತರ ಸಕ್ಕರೆ ಪ್ಲಾಂಟೇಶನ್‌ಗಳಲ್ಲಿನ ಭೀಕರ ಪರಿಸ್ಥಿತಿಯನ್ನು ಹೋಲುತ್ತಿತ್ತು. ಈ ತೋಟಗಳು ಸಂಪೂರ್ಣವಾಗಿ ಬ್ರಿಟಿಶ್ ಬಂಡವಾಳಶಾಹಿಗಳ ಏಕಸ್ವಾಮ್ಯದಲ್ಲಿದ್ದವು. ಅವರು ಕಾರ್ಮಿಕರ ಕ್ರೂರ ಶೋಷಣೆಯ ಮೂಲಕ ಅಪಾರ ಸಂಪತ್ತನ್ನು ಸುಲಿಗೆ ಮಾಡಿದರು; ಅದಕ್ಕೆ ಎಲ್ಲಾ ರೀತಿಯ ಘೋರ ವಿಧಾನಗಳನ್ನು ಆಶ್ರಯಿಸಿದರು. ಎಷ್ಟೆಂದರೆ ವಸಾಹತುಶಾಹಿ ಸರ್ಕಾರವೂ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಆಯೋಗವನ್ನು ನೇಮಿಸಬೇಕಾಯಿತು. ಪ್ಲಾಂಟೇಶನ್ ಆಕ್ಟ್, 1870 ಬಂತು. ಆದರೆ ಅದರ ಪಾಲನೆಗಿಂತ ತಿರಸ್ಕಾರಪೂರ್ಣ ಉಲ್ಲಂಘನೆಗಳೇ ಹೆಚ್ಚಿದ್ದವು.

ಮೂಲ ಲೇಖಕರು–ಸುಕೋಮಲ್ ಸೇನ್ ಸಂಗ್ರಹ–ಅನುವಾದ: ಸಿ.ಆರ್.ಶಾನಭಾಗ

ಭಾರತದಲ್ಲಿ ಪ್ಲಾಂಟೇಶನ್ ಕೈಗಾರಿಕೆಯ ಆರಂಭವು ಹತ್ತೊಂಬತ್ತನೇ ಶತಮಾನದ ಆದಿಯಲ್ಲಾಯಿತು. ಆದರೆ ಹದಿನೆಂಟನೇ ಶತಮಾನದ ಅಂತ್ಯದ ವೇಳೆಗೆ, ಯುರೋಪಿಯನ್ ಸಂಸ್ಥೆಗಳ ಪ್ರಭಾವದಿಂದ, ಇಂಡಿಗೊ ಉತ್ಪಾದನೆಯು ಭಾರತದಲ್ಲಿ ಅಭಿವೃದ್ಧಿಗೊಳ್ಳಲು ಪ್ರಾರಂಭಿಸಿತು, ಅದರ ಕೇಂದ್ರವು ಬಂಗಾಳದಲ್ಲಿತ್ತು. ಇಂಡಿಗೊ ಪ್ಲಾಂಟೇಶನ್‌ಗಳು ಹತ್ತೊಂಬತ್ತನೇ ಶತಮಾನದಲ್ಲಿ ಕೃತ್ರಿಮವಾಗಿ ಸಂಯೋಜಿತ ಬಣ್ಣಗಳ ಕೈಗಾರಿಕೆಗಳಿಂದ ನಾಶವಾಗುವ ವರೆಗೆ ಬಹಳವಾಗಿ ಅಭಿವೃದ್ಧಿ ಹೊಂದಿದವು. 1831 ರಲ್ಲಿ 500 ರಿಂದ 1,000 ಯುರೋಪಿಯನ್ನರು ಈ ವ್ಯವಹಾರದೊಂದಿಗೆ ಸಂಪರ್ಕ ಹೊಂದಿದ್ದರು ಮತ್ತು ಆಗ ಬಂಗಾಳದಲ್ಲಿ 300 ರಿಂದ 400 ಇಂಡಿಗೊ ಕಾರ್ಖಾನೆಗಳು ಇದ್ದವು ಎಂದು ಹೇಳಲಾಗಿದೆ. ಅದರೊಂದಿಗೆ ಸಂಪರ್ಕ ಹೊಂದಿದ ಕಾರ್ಮಿಕರು ರೈತರ ಸಮುದಾಯಕ್ಕೆ ಸೇರಿದವರು,

ಕಾಫಿ ಮತ್ತು ರಬ್ಬರ್ ಪ್ಲಾಂಟೇಶನ್‌ಗಳಲ್ಲದೆ, ಚಹಾವು ಭಾರತದ ಪ್ರಮುಖ ಪ್ಲಾಂಟೇಶನ್ ಕೈಗಾರಿಕೆಯಾಗಿದೆ ಮತ್ತು ಈ ಪ್ರಮುಖ ಪ್ಲಾಂಟೇಶನ್ ಕೈಗಾರಿಕೆಯ ಆರಂಭಿಕ ಅವಧಿಯಲ್ಲಿ ಕಾರ್ಮಿಕರ ಪರಿಸ್ಥಿತಿಗಳು ವಸಾಹತುಶಾಹಿ ಭಾರತದಲ್ಲಿ ಶೋಷಿತ ಸಮುದಾಯವು ಅನುಭವಿಸಿದ ದುಃಖಕರ ಕಥೆಯನ್ನು ಹೇಳುತ್ತವೆ.

ಚಹಾದ ಉತ್ಪಾದನೆಯು ಯುರೋಪಿಯನ್ನರು ಮತ್ತು ಭಾರತೀಯರಿಬ್ಬರಿಗೂ ತಿಳಿದಿಲ್ಲದ ಕಲೆಯಾಗಿದ್ದರೂ, 1815 ರ ಸುಮಾರಿಗೆ ಚೀನಾ ಟೀ ವ್ಯಾಪಾರವು ಈಸ್ಟ್ ಇಂಡಿಯಾ ಕಂಪನಿಯ ಲಾಭದ ಪ್ರಮುಖ ಮೂಲವಾಗಿತ್ತು. ಆದರೆ 1833 ರಲ್ಲಿ ಚೀನಾ ಕಂಪೆನಿಯ ವ್ಯಾಪಾರದ– ಏಕಸ್ವಾಮ್ಯವನ್ನು ರದ್ದುಗೊಳಿಸಿದ್ದು ಭಾರತದಲ್ಲಿ ಟೀ ಸಂಸ್ಕೃತಿಯನ್ನು ಪರಿಚಯಿಸಲು ಕಂಪನಿಯನ್ನು ಪ್ರೇರೇಪಿಸಿತು.

ಬಂಗಾಳದ ಪಾಲ ರಾಜವಂಶದ ಆಳ್ವಿಕೆಯಲ್ಲಿ ಮಹಾನ್ ಬೌದ್ಧ ವಿದ್ವಾಂಸ ಅತೀಶ್ ದೀಪಂಕರ್ ಟಿಬೆಟ್‌ಗೆ ಭೇಟಿ ನೀಡಿದಾಗ, ಚಕ್ರವರ್ತಿ ಅವನಿಗೆ ಚಹಾ ನೀಡಿ ಸತ್ಕರಿಸಿದ ಕಥೆಯಿದೆ. ಭಾರತದ ಬೌದ್ಧರು ಅತೀಶ್ ದೀಪಂಕರ್ ಮೂಲಕ ಚಹಾದ ಬಗ್ಗೆ ತಿಳಿದುಕೊಂಡರು ಮತ್ತು ಅವರು ಕಾಡುಗಳಲ್ಲಿನ ಚಹಾ ಸಸ್ಯಗಳನ್ನು ಹುಡುಕಲು ಪ್ರಾರಂಭಿಸಿದರು. ನಂತರ ಅವರು ಭಾರತದಲ್ಲಿ ಚಹಾವನ್ನು ಪರಿಚಯಿಸಿದರು. ಸಿನ್ಫೊ ಮತ್ತು ಖಮ್ತಿ ಬುಡಕಟ್ಟು ಜನಾಂಗದವರು ಚಹಾದ ಬಳಕೆಯಲ್ಲಿ ಪರಿಣತಿಯನ್ನು ಗಳಿಸಿದರು. ಸಿನ್ಫೊ ಬುಡಕಟ್ಟು ಮುಖ್ಯಸ್ಥ ಬಿಸಾಗಮ್ ಅವರು ಭಾರತದಲ್ಲಿ ಇಂಗ್ಲಿಷರಿಗೆ ಚಹಾವನ್ನು ಪರಿಚಯಿಸಿದವರಲ್ಲಿ ಮೊದಲಿಗರು ಎಂದು ಹೇಳಲಾಗುತ್ತದೆ. ಆದಾಗ್ಯೂ, 1838 ರಲ್ಲಿ ಭಾರತೀಯ ಚಹಾವನ್ನು ಲಂಡನ್‌ನಲ್ಲಿ ಪ್ರಥಮ ಭಾರಿಗೆ ಮಾರಾಟ ಮಾಡಲಾಯಿತು ಮತ್ತು 1839ರಲ್ಲಿ 200,000 ಪೌಂಡ್ ಬಂಡವಾಳ ಹೊಂದಿದ್ದ ದಿ ಅಸ್ಸಾಂ ಕಂಪನಿ ಎಂಬ ದೊಡ್ಡ ಕಂಪನಿಯನ್ನು ಭಾರತದಲ್ಲಿ ಚಹಾ ಬೆಳೆಯಲು ರಚಿಸಲಾಯಿತು. ನಂತರ ಅಸ್ಸಾಂ ಮತ್ತು ಬಂಗಾಳದ ಡಾರ್ಜಿಲಿಂಗ್ ನಗರದ ಸುತ್ತಮುತ್ತ ಪ್ರಮುಖ ಪ್ಲಾಂಟೇಶನುಗಳ ಅಭಿವೃದ್ಧಿಯೊಂದಿಗೆ ಚಹಾ ಪ್ಲಾಂಟೇಶನಗಳ ದೊಡ್ಡ ವಿಸ್ತರಣೆಯು ನಡೆಯಿತು.

ನಿಯಮಿತವಾಗಿ ಚಹಾ ಉತ್ಪಾದನೆಯನ್ನು 1851 ರಿಂದ ಪ್ರಾರಂಭಿಸಲಾಯಿತು. 1869 ರ ಹೊತ್ತಿಗೆ ದೇಶದಲ್ಲಿ ಚಹಾ ಕೈಗಾರಿಕೆಯು ದೃಡವಾಗಿ ಸ್ಥಾಪನೆಯಾಯಿತು.

ಭಾರತದ ಕ್ಷೀಣಿಸುತ್ತಿದ್ದ ಕೃಷಿ ಆರ್ಥಿಕತೆಯಿಂದ ಲಕ್ಷಾಂತರ ಕೃಷಿ ಕಾರ್ಮಿಕರು ಕೆಲಸ ಕಳೆದುಕೊಂಡು, ಈ ಅಭಿವೃದ್ಧಿ ಹೊಂದುತ್ತಿದ್ದ ಕೈಗಾರಿಕೆಗೆ ನಿರಂತರ ಕಾರ್ಮಿಕ ಬಲದ ಪೂರೈಕೆಯ ಮೂಲವಾಗಿ ರೂಪಗೊಂಡರು. ಭಾರತದ ಟೀ ಪ್ಲಾಂಟೇಶನಗಳ ಕಾರ್ಮಿಕರ ಪರಿಸ್ಥಿತಿ, ಸಾಗರೋತ್ತರ ಸಕ್ಕರೆ ಪ್ಲಾಂಟೇಶನ್‌ಗಳಲ್ಲಿನ ಪರಿಸ್ಥಿತಿಯನ್ನು ಹೋಲುತ್ತಿತ್ತು. ಹೊಸ ಮತ್ತು ಅಭಿವೃದ್ಧಿಯಾಗದ ಪ್ರದೇಶಗಳಲ್ಲಿ ಚಹಾ ತೋಟಗಳನ್ನು ಮಾಡಲಾಗುತ್ತಿದ್ದು, ಸಾಮಾನ್ಯವಾಗಿ ನೂರಾರು ಮೈಲುಗಳಷ್ಟು ದೂರದಲ್ಲಿದ್ದ ಹೆಚ್ಚು ಜನಸಂಖ್ಯೆ ಇದ್ದ ಜಿಲ್ಲೆಗಳಿಂದ ಕಾರ್ಮಿಕರನ್ನು ಕರೆತರುವುದು ಅಗತ್ಯವಾಗಿತ್ತು. ಸರ್ದಾರ್ ಅಥವಾ ತೋಟದ ಫೋರ್‌ಮ್ಯಾನ್ ಹಲವಾರು ಸ್ಥಳೀಯ ಏಜೆಂಟರ ಮೂಲಕ ಕಾರ್ಮಿಕರನ್ನು ಕಲೆಹಾಕುತ್ತಿದ್ದರು ಮತ್ತು ಈ ಉದ್ದೇಶಕ್ಕಾಗಿ ಅವರು ಅನುಸರಿಸಿದ ವಿಧಾನಗಳು ವಲಸೆ ಕಾರ್ಮಿಕರ ನೇಮಕಾತಿಯೊಂದಿಗೆ ಚಾಲ್ತಿಯಲ್ಲಿದ್ದಂತೆ ಬಹುತೇಕ ಮೋಸ–ವಂಚನೆಯದಾಗಿದ್ದವು. ಡಾರ್ಜಿಲಿಂಗ್ ಜಿಲ್ಲೆಯಲ್ಲಿ, ಸ್ಥಳೀಯ ಕೃಷಿ ಕಾರ್ಮಿಕರು ಮತ್ತು ನೇಪಾಳದವರು ಗಟ್ಟಿಮುಟ್ಟಾದ ಮತ್ತು ವಿಧೇಯ ಕಾರ್ಮಿಕ ಬಲವನ್ನು ಒದಗಿಸಿದರು, ಆದರೆ ಅಸ್ಸಾಂನಲ್ಲಿ ಹೊರಗಿನವರನ್ನು ಮುಖ್ಯವಾಗಿ ಬಳಸಲಾಗುತ್ತಿತ್ತು. ಮೂಲನವಾಸಿ ಬುಡಕಟ್ಟು ಜನಾಂಗದವರು ಮತ್ತು ಬಿಹಾರದ ಜನರು, ಆಗಿನ ಸಂಯುಕ್ತ ಪ್ರಾಂತ್ಯಗಳು(ಯು.ಪಿ.) ಮತ್ತು ಮಧ್ಯ ಪ್ರಾಂತ್ಯ(ಸೆಂಟ್ರಲ್ ಪ್ರಾವಿನ್ಸ್)ಗಳಿಂದ ಜನರನ್ನು ಆಮದು ಮಾಡಿಕೊಳ್ಳಲಾಯಿತು. ಇಡೀ ಕುಟುಂಬಗಳು ಗುತ್ತಿಗೆಗೆ ಒಳಪಟ್ಟವು. ಗುತ್ತಿಗೆಗಳನ್ನು ಸಾಮಾನ್ಯವಾಗಿ ಮೂರು ವರ್ಷಗಳ ಒಪ್ಪಂದಕ್ಕೆ ಸಹಿ ಮಾಡಿಸಲಾಗುತ್ತಿತ್ತು ಮತ್ತು ಆರಂಭಿಕ ಅವಧಿಯಲ್ಲಿ ಮಾಸಿಕ ವೇತನವು ಪ್ರತಿ ವ್ಯಕ್ತಿಗೆ 2 ರಿಂದ 5 ರೂ. ಇತ್ತು. ಈ ಆರಂಭಿಕ ಅವಧಿಯಲ್ಲಿ ವೇತನದ ಮೇಲೆ ರೈಲ್ವೆ ಮತ್ತು ಇತರ ಲೋಕೋಪಯೋಗಿ ನಿರ್ಮಾಣದ ಜೊತೆಗೆ ದೇಶವನ್ನು ಹಣದ ಆರ್ಥಿಕತೆಗೆ ತೆರೆದುಕೊಳ್ಳುವ ಘಟನೆಗಳು ಪರಿಣಾಮ ಬೀರಿದವು.. 1857 ರಲ್ಲಿ ಒಬ್ಬ ಕಾರ್ಮಿಕನನ್ನು ತಿಂಗಳಿಗೆ 2 1/2 ರೂಪಾಯಿಗೆ ಪಡೆಯಬಹುದಾಗಿತ್ತು, ಆದರೆ ಇದು ರೂ. 4 ಮತ್ತು ನಂತರ ರೂ. 12 ಕ್ಕೆ ಏರಿತು.

ಬಡತನದ ಬೇಗೆಯಿಂದ ದೂಡಲ್ಪಟ್ಟ, ನಿರ್ಗತಿಕ ಗ್ರಾಮೀಣ ಜನತೆ ನಿರ್ಲಜ್ಜ ನೇಮಕಾತಿ ಏಜೆಂಟರ ಹಿಡಿತಕ್ಕೆ ಸಿಲುಕಿದರು, ದುರುಪಯೋಗಗಳು ಎಷ್ಟು ಸ್ಪಷ್ಟವಾಗಿದ್ದವೆಂದರೆ, ವಸಾಹತುಶಾಹಿ ಸರ್ಕಾರವು ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಆಯೋಗವನ್ನು ನೇಮಿಸಬೇಕಾಯಿತು. ಇದರ ಪರಿಣಾಮವಾಗಿ, 1863 ರಲ್ಲಿ ಒಂದು ಕಾಯಿದೆಯನ್ನು ಅಂಗೀಕರಿಸಲಾಯಿತು, ಮುಖ್ಯವಾಗಿ ಕೂಲಿಗಳು ತಾವು ಕೈಗೊಳ್ಳುತ್ತಿರುವ ಒಪ್ಪಂದದ ಕಾರ್ಯಗಳನ್ನು ಅರ್ಥಮಾಡಿಕೊಳ್ಳುವಂತೆ ಮಾಡುವ ಮತ್ತು ತೋಟಗಳ ಕಡೆಗೆ ಉದ್ಯೋಗಕ್ಕಾಗಿನ ದೀರ್ಘ ಪ್ರಯಾಣದಲ್ಲಿ ಭೀಕರ ಮರಣದ ಪ್ರಮಾಣವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿತ್ತು. ಆದಾಗ್ಯೂ, ಈ ಕಾಯಿದೆ ಎರಡೂ ಉದ್ದೇಶಗಳನ್ನು ಈಡೇರಿಸುವಲ್ಲಿ ವಿಫಲವಾಯಿತು. ಅಸ್ಸಾಂ ಲೇಬರ್ ಅಂಡ್ ಇಮಿಗ್ರೇಶನ್ ಆಕ್ಟ್, 1901, ಸರದಾರರು ಟೀ ಎಸ್ಟೇಟ್‌ಗಳ ಉದ್ಯೋಗಿಗಳಾಗಿರಬೇಕು ಮತ್ತು ಸ್ಥಳೀಯ ಏಜೆಂಟರು ಕಾರ್ಮಿಕರನ್ನು ನೇಮಕ ಮಾಡಲು ಪರವಾನಗಿ ಹೊಂದಿರಬೇಕು ಎಂದು ಆದೇಶಿಸಿತು. ಈ ಕಾಯಿದೆಯ ಹೊರತಾಗಿಯೂ, ಮೋಸದ ಆಚರಣೆಗಳು ಅಬಾಧಿತವಾಗಿ ಮುಂದುವರೆದವು. ಇದಲ್ಲದೆ, ಕಾರ್ಮಿಕರ ಒಪ್ಪಂದದ ಉಲ್ಲಂಘನೆ ಕಾಯ್ದೆ ಮತ್ತು ಕಾರ್ಮಿಕರು ಉದ್ಯೋಗ ತೊರೆಯುವುದನ್ನು ಭಾರತೀಯ ದಂಡ ಸಂಹಿತೆಯ ಪ್ರಕಾರ ಅಪರಾಧವೆಂದು ಪರಿಗಣಿಸಲಾಯಿತು ಮತ್ತು ಅದೇ ಕಾಯಿದೆ ಕಾರ್ಮಿಕರಿಗೆ ಜೈಲು ಶಿಕ್ಷೆ ವಿಧಿಸಲು ಮತ್ತು ಅಂತಹ ಅಪರಾಧಕ್ಕಾಗಿ ಅವರಿಗೆ ಶಿಕ್ಷೆಯನ್ನು ವಿಧಿಸಲು ಮಾಲಿಕರಿಗೆ ಅಧಿಕಾರ ನೀಡಿತು. ಇವೆಲ್ಲವೂ ಒಟ್ಟಾಗಿ, ತೋಟದ ಕಾರ್ಮಿಕರನ್ನು ವಾಸ್ತವಿಕವಾಗಿ ಗುಲಾಮಗಿರಿಯ ಸ್ಥಿತಿಗೆ ಇಳಿಸಿದವು. ಆದಾಗ್ಯೂ, ದೀರ್ಘಕಾಲದ ಚಳುವಳಿ ಅಂತಿಮವಾಗಿ ಈ ಕಾಯಿದೆಗಳನ್ನು ತಿದ್ದುಪಡಿ ಮಾಡುವಲ್ಲಿ ಯಶಸ್ವಿಯಾಯಿತು.

ತೋಟಗಳ ವಿಸ್ತರಣೆಯೊಂದಿಗೆ, ಈ ಕೈಗಾರಿಕೆಯಲ್ಲಿ ತೊಡಗಿದ್ದ ಕಾರ್ಮಿಕರ ಸಂಖ್ಯೆಯು ಗಣನೀಯ ಹೆಚ್ಚಳವನ್ನು ದಾಖಲಿಸಿತು. 1903 ರಲ್ಲಿ ಕಾಫಿ ತೋಟಗಳಲ್ಲಿ, ಕಾರ್ಮಿಕರ ಸಂಖ್ಯೆ 82,000 ಆಗಿತ್ತು. ಚಹಾ ತೋಟಗಳಲ್ಲಿ ಇದು ಮತ್ತೂ ಹೆಚ್ಚು.

1928 ರಲ್ಲಿ ಈ 906,787 ಕಾರ್ಮಿಕರಲ್ಲಿ 544,193 ಜನರು ಅಸ್ಸಾಂನಲ್ಲಿ, 185,399 ಬಂಗಾಳದಲ್ಲಿ ಹಾಗೂ ಉಳಿದವರು ಭಾರತದ ದಕ್ಷಿಣ ಭಾಗದಲ್ಲಿ ಮತ್ತು ಬೇರೆ ಕಡೆಗಳಲ್ಲಿ ಉದ್ಯೋಗದಲ್ಲಿದ್ದರು.

ಈ ತೋಟಗಳು ಸಂಪೂರ್ಣವಾಗಿ ಬ್ರಿಟಿಶ್ ಬಂಡವಾಳಶಾಹಿಗಳ ಏಕಸ್ವಾಮ್ಯದಲ್ಲಿದ್ದವು. ಅವರು ಕಾರ್ಮಿಕರ ಕ್ರೂರ ಶೋಳಣೆಯ ಮೂಲಕ ಅಪಾರ ಸಂಪತ್ತನ್ನು ಸುಲಿಗೆ ಮಾಡಿದರು; ಕಾರ್ಮಿಕರನ್ನು, ಗಂಡು, ಹೆಣ್ಣು ಅಥವಾ ಕೋಮಲ ವಯಸ್ಸಿನ ಮಗುವೆನ್ನದೇ, ಅಸುರಕ್ಷಿತಗೊಳಿಸಲು, ಹಿಂಸಿಸಲು ಮತ್ತು ದುರುಪಯೋಗ ಪಡಿಸಿಕೊಳ್ಳಲು ಎಲ್ಲಾ ರೀತಿಯ ಘೋರ ವಿಧಾನಗಳನ್ನು ಆಶ್ರಯಿಸಿದರು. ಇದರಲ್ಲಿ ಯಾವುದೇ ನೈತಿಕ ಗೊಂದಲವು ಅವರನ್ನು ಅಥವಾ ಅವರ ಸರ್ದಾರ್‌ಗಳನ್ನು ತಡೆಯಲಿಲ್ಲ. ಅತ್ಯಂತ ವಿಷಾದಕರ ಸಂಗತಿಯೆಂದರೆ, ಇದು ವಸಾಹತುಶಾಹಿ ಆಡಳಿತದ ಪ್ರತ್ಯಕ್ಷ ಮತ್ತು ಕೆಲವೊಮ್ಮೆ ಅಪ್ರತ್ಯಕ್ಷ ಒಪ್ಪಿಗೆಯೊಂದಿಗೆ ಸಂಭವಿಸಿತು. ಉದಾಹರಣೆಗೆ, ಸಂಬಂಧವಿಲ್ಲದ ಪುರುಷರು ಮತ್ತು ಮಹಿಳೆಯರನ್ನು ಪಡೆಯುವುದಕ್ಕಿಂತ ವಿವಾಹಿತ ದಂಪತಿಗಳ ಗುಂಪುಗಳನ್ನು ಪಡೆಯುವುದು ಹೆಚ್ಚು ಲಾಭದಾಯಕವೆಂದು ಬ್ರಿಟಿಷ್ ಪ್ಲಾಂಟರುಗಳು ಪರಿಗಣಿಸಿದರು. ಸರದಾರರು ಅಂಕೆಯಿಲ್ಲದ ವಂಚನೆಗಳ ಮತ್ತು ದಬ್ಬಾಳಿಕೆಯ ಮಾದಕತೆಯ ಮೂಲಕ ಅಂತಹ ಮದುವೆಯಾಗದ ಪುರುಷರು ಮತ್ತು ಮಹಿಳೆಯರನ್ನು ದಂಪತಿಗಳಂತೆ ಜೋಡಿಯಾಗಿ ಬದುಕಲು ಒತ್ತಾಯಿಸಿದರು.



ಪ್ಲಾಂಟೇಶನ್ ಆಕ್ಟ್, 1870 ಪುರುಷರು ಮತ್ತು ಮಹಿಳೆಯರಿಗಾಗಿ ಒಂಬತ್ತು ಗಂಟೆಗಳ ಶ್ರಮವನ್ನು ಒದಗಿಸಿತು. ಈ ಕಾಯಿದೆಯು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಾರ್ಮಿಕರಿಗೆ ಉದ್ಯೋಗ ನೀಡುವುದನ್ನು ನಿಷೇಧಿಸಿತು. ಆದರೆ ನಿಜವಾದ ಆಚರಣೆಯಲ್ಲಿ ಈ ನಿಬಂಧನೆಗಳನ್ನು ತಿರಸ್ಕಾರದಿಂದ ಉಲ್ಲಂಘಿಸಲಾಯಿತು. ಯಾವುದೇ ಮಾನದಂಡದಿಂದಲೂ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದ ವಸತಿ ವ್ಯವಸ್ಥೆ, ವಿಪರೀತ ಕೊರತೆ ಮತ್ತು ಆ ದೂರದ ಮತ್ತು ಜನವಸತಿಯಿರದ ಪ್ರದೇಶಗಳಲ್ಲಿನ ದುಬಾರಿಯಾದ ಆಹಾರ ಸಾಮಗ್ರಿ, ನಂಬಲಾಗದಷ್ಟು ಕೆಳಮಟ್ಟದ ವೇತನಗಳು ಮತ್ತು ಅತ್ಯಂತ ಪ್ರಯಾಸಕರ ಕೆಲಸ–ಇವೆಲ್ಲ ಸೇರಿ ಅವರ ಜೀವನವನ್ನು ಭಯಾನಕಗೊಳಿಸಿದವು. ಅಪೌಷ್ಟಿಕತೆ ಮತ್ತು ಕಾಯಿಲೆ, ಮೂಲತಃ ತೀರಾ ಕೆಳಮಟ್ಟದ ಆರೋಗ್ಯದ ಮೇಲೆ ಕೆಲಸ, ಅನೇಕ ಕೂಲಿಗಳನ್ನು ಸಾಕಷ್ಟು ಅಸಮರ್ಥಗೊಳಿಸಿತು, ಅವರನ್ನು ಮಾರಣಾಂತಿಕ ಪರಿಸ್ಥಿತಿಗೆ ದೂಡಿತು. ಇದಲ್ಲದೆ, ಗುಲಾಮಗಿರಿಯ ಕಾಲವನ್ನು ನೆನಪಿಸುವ, ಪುರುಷರು, ಮಹಿಳೆಯರು ಮತ್ತು ಮಕ್ಕಳೆಂದು ಲೆಕ್ಕಿಸದೆ, ಥಳಿಸುವುದು ಮತ್ತು ಇತರ ರೀತಿಯ ದೈಹಿಕ ಹಿಂಸೆಗಳು, ಅನೇಕ ಸಂದರ್ಭಗಳಲ್ಲಿ ಕಾರ್ಮಿಕರು ಓಡಿಹೋಗುವಂತೆ ಮಾಡಿದವು.

ಕೂಲಿಗಳು ವಾಸಿಸುವ, ಕೆಲವು ಸಂದರ್ಭಗಳಲ್ಲಿ ಬೇಲಿಗಳಿಂದ ಸುತ್ತುವರಿಯಲ್ಪಟ್ಟ ಗಲ್ಲಿಗಳಿಂದ, ಹೊರಹೋಗಲು ಸಾಧ್ಯವಿರುವ ಪ್ರತಿಯೊಂದು ಕಡೆಗಳಲ್ಲಿ 'ಚೌಕೀದಾರ್'ಗಳನ್ನು (ಗಾರ್ಡ್‌ಗಳು) ನಿಯೋಜನೆ ಮಾಡಲಾಗುತ್ತಿತ್ತು, ಕೂಲಿಗಳಿಗೆ ಅದರ ಹೊರಗೆ ರಾತ್ರಿಯಲ್ಲಿ ಹೋಗಲು ಅನುಮತಿಯಿರಲಿಲ್ಲ. ಓಡಿಹೋದ ಕೂಲಿಯನ್ನು ಹಿಡಿಯುವ ಯಾರಿಗಾದರೂ ರೂ.5 ಇನಾಮು ನೀಡಲಾಗುತ್ತಿತ್ತು, ಹೊರಗಿನಿಂದ ತಂದವರ ಬಗ್ಗೆ ಸ್ಥಳೀಯ ಜನರಲ್ಲಿ ಇದ್ದ ಅಸಹ್ಯ ಭಾವವನ್ನು ಉಪಯೋಗಿಸಿಕೊಂಡು ಅವರನ್ನು ಈ ಕೆಲಸಕ್ಕೆ ಬಳಸಿಕೊಳ್ಳಲಾಯಿತು. ಸ್ಥಳೀಯ ಬೆಟ್ಟದ ನಿವಾಸಿಗಳು ಪರಾರಿಯಾದವರನ್ನು ಪತ್ತೆಹಚ್ಚಲು ರಚಿಸಿದ ವಿಶೇಷ ತಂಡದಲ್ಲಿದ್ದರು. ಕೂಲಿಗಳು ಸಿಕ್ಕಿಬಿದ್ದಾಗ ಅವರನ್ನು ಕಟ್ಟಿಹಾಕಿ ಹೊಡೆಯುತ್ತಿದ್ದರು, ಮತ್ತು ಅವರನ್ನು ಸೆರೆಹಿಡಿದವರಿಗೆ ನೀಡಲಾಗುವ ಬಹುಮಾನವನ್ನು ಅವರ ಭವಿಷ್ಯದ ಗಳಿಕೆಯಿಂದ ದಂಡದ ರೀತಿಯಲ್ಲಿ ಕಡಿತಗೊಳಿಸಲಾಗುತ್ತಿತ್ತು.

ಆದರೆ ಈ ಚಹಾ ತೋಟ ಕಾರ್ಮಿಕರೊಂದಿಗೆ ಈ ಕ್ರೂರ, ಅನಾಗರಿಕ ವರ್ತನೆ ಭಾರತದ ಜನರ ಭಾವನೆಗಳನ್ನು ಆಳವಾಗಿ ಘಾಸಿಗೊಳಿಸದಿರಲು ಸಾಧ್ಯವಾಗಲಿಲ್ಲ. ದೇಶೀಯ ಪತ್ರಿಕೆಗಳು ಈ ವಿಷಯವನ್ನು ಕೈಗೆತ್ತಿಕೊಂಡವು ಮತ್ತು ಚಹಾ ತೋಟವನ್ನು ಪ್ರಾರಂಭಿಸಿದ ಸಮಯದಿಂದಲೇ ಬಿಳಿ ಪ್ಲಾಂಟರುಗಳನ್ನು ನಿಸ್ಸಂದಿಗ್ಧವಾಗಿ ಖಂಡಿಸಿದವು. 1862 ರ ಹಿಂದಿನಿಂದಲೂ, ಲೇಖನಗಳ ಸರಣಿಗಳಲ್ಲಿ ಪ್ರಮುಖ ಬಂಗಾಳಿ ವಾರಪತ್ರಿಕೆ 'ಸೋಮಪ್ರಕಾಶ್' ಈ ಅನಾಗರಿಕತೆಯನ್ನು ಬಹಿರಂಗಪಡಿಸಲು

ಪುಟ 13 ನೋಡಿ

ಕಾರ್ಪೊರೇಟ್–ಹಿಂದುತ್ವ ಕಥನಕ್ಕೆ ರೈತ ಚಳುವಳಿಯ ಸವಾಲು



‘ರಾಷ್ಟ್ರ’ವನ್ನು ‘ಕಾರ್ಪೊರೇಟ್’ಗಳೊಂದಿಗೆ ಸಮೀಕರಿಸುವ ಕಥನವನ್ನು ಕಿಸಾನ್ ಚಳುವಳಿಯು ಪ್ರಶ್ನೆಗೆ ಒಳಪಡಿಸಿದೆ ಮಾತ್ರವಲ್ಲ, ಈ ಕಥನ–ನಿರೂಪಣೆಗೆ ಬದಲಿಯಾಗಿ, ‘ರಾಷ್ಟ್ರ,ವೆಂದರೆ ದುಡಿಯುವ ಜನರು ಎಂಬ ಪರಿಕಲ್ಪನೆಯನ್ನು ರಂಗಸ್ಥಳದ ಮಧ್ಯಕ್ಕೆ ಮತ್ತೊಮ್ಮೆ ತಂದು ನಿಲ್ಲಿಸಿದೆ. ಈ ಮೂರೂ ಕೃಷಿ ಕಾಯ್ದೆಗಳು ರೈತರಿಗೆ ಒಳಿತು ಮಾಡುತ್ತವೆ ಎಂಬುದಾಗಿ ಮೋದಿಯವರು ಮಂಡಿಸಿದ ವಾದವನ್ನು ತಿರಸ್ಕರಿಸಿದ ರೈತರ ಈ ಕ್ರಮವು, ಎಲ್ಲವನ್ನೂ ಬಲ್ಲ, ದೋಷ ರಹಿತ, ಸರ್ವಶಕ್ತ, ರಾಷ್ಟ್ರದ ಸಂಕೇತವೆಂದೇ ಗುರುತಿಸಲ್ಪಡುವ ಮತ್ತು ದೇವರೆಂದು ಆರಾಧಿಸಲ್ಪಡುತ್ತಿರುವ ಈ ನಾಯಕನಿಗೆ ಕೊಟ್ಟ ಒಂದು ದೊಡ್ಡ ಹೊಡೆತವೇ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಒಂದು ತಿಂಗಳಿನಿಂದಲೂ ದೇಶದ ರೈತರು ನಡೆಸುತ್ತಿರುವ ಚಳುವಳಿಯು, ಕನಿಷ್ಠ ಬೆಂಬಲ ಬೆಲೆಗಾಗಿ ಅಥವಾ ಕೃಷಿಯ ಕಾರ್ಪೊರೇಟೀಕರಣದ ವಿರುದ್ಧ ಎನ್ನುವುದಕ್ಕಿಂತಲೂ ಹಿರಿದಾದ ಒಂದು ಹೋರಾಟವಾಗಿ ಬಿಟ್ಟಿದೆ. ಈ ಹೋರಾಟವು ತನ್ನ ಘನ ನಡವಳಿಕೆಯ ಮೂಲಕ ನವ–ಉದಾರವಾದದ ಅಡಿಯಲ್ಲಿ ಪ್ರತಿಪಾದಿಸಲ್ಪಟ್ಟ ಕಥನ–ನಿರೂಪಣೆಯನ್ನು ಮರುನಿರೂಪಿಸುತ್ತಿದೆ. ಮುಂಬರುವ ದಿನಗಳಲ್ಲಿ ಈ ಆಂದೋಲನವನ್ನು ಮುರಿಯಲು ಮೋದಿ ಸರ್ಕಾರವು ನಿರ್ಲಜ್ಜ ಪ್ರಯತ್ನಗಳನ್ನು ಎಷ್ಟು ತೀವ್ರಗೊಳಿಸುತ್ತದೆಯೊ ಅಷ್ಟೇ ಜೋರಾಗಿ ಕಥನದ ಈ ಮರುನಿರೂಪಣೆಯೂ ಹೆಚ್ಚು ವ್ಯಾಪಕವೂ ಮತ್ತು ಸ್ಪಷ್ಟವೂ ಆಗಲಿದೆ. ಚಳುವಳಿಯೂ ಹೆಚ್ಚು ಪ್ರಖರವಾಗಲಿದೆ. ಈಗ, ‘ರಾಷ್ಟ್ರ’ ಎಂಬ ಪರಿಕಲ್ಪನೆಯನ್ನು ವಿವರಿಸುವ ಮೂಲಕವೇ ವಿಷಯವನ್ನು ಆರಂಭಿಸೋಣ.

‘ರಾಷ್ಟ್ರ’ ಎಂಬ ಪರಿಕಲ್ಪನೆಯು 17ನೇ ಶತಮಾನದ ಯೂರೋಪಿನಲ್ಲಿ ಬಂಡವಾಳಶಾಹಿಯ ಉದಯದೊಂದಿಗೆ ಒಂದು ಖಚಿತ ರೂಪ ಪಡೆಯಿತು. 19ನೇ ಶತಮಾನದ ಕೊನೆಯ ಭಾಗದಲ್ಲಿ ಹಣಕಾಸು ಬಂಡವಾಳದ ಉದಯದೊಂದಿಗೆ ರಾಷ್ಟ್ರದ ಪರಿಕಲ್ಪನೆಯು ಒಂದು ವಿಶೇಷ ಪ್ರಾಮುಖ್ಯತೆಯನ್ನು ಪಡೆಯಿತು. ‘ರಾಷ್ಟ್ರೀಯ ಭಾವನೆ’ಯ ವೈಭವೀಕರಣವೇ ಹಣಕಾಸು ಬಂಡವಾಳದ ಸಿದ್ಧಾಂತ ಎಂಬುದಾಗಿ ರುಡಾಲ್ಫ್ ಹಿಲ್ಫರ್ಡಿಂಗ್ (1877–1941, ಅರ್ಥಶಾಸ್ತ್ರಜ್ಞರು) ಹೇಳಿದ್ದರು. ಹಣಕಾಸು ಬಂಡವಾಳವು ‘ರಾಷ್ಟ್ರೀಯ ಭಾವನೆ’ಯನ್ನು ವೈಭವೀಕರಿಸುತ್ತಿತ್ತು, ಏಕೆಂದರೆ, ‘ರಾಷ್ಟ್ರ’ ಮತ್ತು ಹಣಕಾಸು ಬಂಡವಾಳ, ಈ ಎರಡೂ ಸಮಾನಾರ್ಥಕ ಎಂದೂ ಮತ್ತು ರಾಷ್ಟ್ರದ ಹಿತ ಮತ್ತು ಹಣಕಾಸು ಬಂಡವಾಳದ ಹಿತ ಬೇರೆ ಬೇರೆಯಲ್ಲ ಎಂದು ಪ್ರತಿಪಾದಿಸಿತು. ಹೀಗೆ ‘ರಾಷ್ಟ್ರ’ವನ್ನು ವೈಭವೀಕರಿಸುವುದರ ಜೊತೆಗೆ, ‘ರಾಷ್ಟ್ರ’ವನ್ನು ತನ್ನೊಂದಿಗೆ ಗುರುತಿಸಿಕೊಂಡ ಹಣಕಾಸು ಬಂಡವಾಳವು, ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿಯ ಅವಧಿಯಲ್ಲಿ, ಇತರ ದೇಶಗಳ ಹಣಕಾಸು ಬಂಡವಾಳಗಳ ವಿರುದ್ಧ ತೊಡಗಿದ ಹೋರಾಟದಲ್ಲಿ ‘ರಾಷ್ಟ್ರ’ದ ಪರಿಕಲ್ಪನೆಯನ್ನು ಬಳಸಿಕೊಂಡಿತು.

ಹೀಗೆ ಗುರುತಿಸಿಕೊಂಡ ಪರಿಣಾಮವಾಗಿ, ‘ರಾಷ್ಟ್ರ’ವು ಜನರಿಂದ ಸಂಬಂಧ ಕಳಚಿಕೊಂಡು ಅವರಿಂದ ದೂರ ಉಳಿಯಿತು. ‘ರಾಷ್ಟ್ರ’ ಎಂಬ ಕಲ್ಪನೆಯನ್ನು/ಭಾವನೆಯನ್ನು ಜನರಿಗಿಂತ ಎತ್ತರದಲ್ಲಿ ಇಡಲಾಯ್ತು. ಜನರು ‘ರಾಷ್ಟ್ರ’ಕ್ಕಾಗಿ ತ್ಯಾಗ ಮಾಡಿದರೇ ವಿನಃ, ‘ರಾಷ್ಟ್ರ’ವು ಜನರ ಅಭ್ಯುದಯಕ್ಕಾಗಿ ಅಥವಾ ಜನರ ಲೌಕಿಕ ಮತ್ತು ಅವರ ಸ್ಥಿತಿ–ಗತಿಗಳ ಬಗ್ಗೆ ವಿಶೇಷ ಕಾಳಜಿ ವಹಿಸಲಿಲ್ಲ. ‘ರಾಷ್ಟ್ರ’ದ ಕಾಳಜಿ ಏನಿದ್ದರೂ ತನ್ನ ಅಧಿಕಾರ–ಹಿರಿಮೆ–ಗರಿಮೆಗಳ ಬಗ್ಗೆ ಮಾತ್ರ ಇತ್ತೇ ವಿನಃ, ಕ್ಯಲೊರಿ ಸೇವನೆ ಅಥವಾ ಜನರ ಆರೋಗ್ಯದ ಬಗ್ಗೆ ಇರಲೇ ಇಲ್ಲ.

‘ರಾಷ್ಟ್ರ’ದ ಬಗ್ಗೆ ಯೂರೋಪಿನಲ್ಲಿ ಮೂಡಿಬಂದ ಈ ಪರಿಕಲ್ಪನೆಗಿಂತ ವಸಾಹತು–ವಿರೋಧಿ ಹೋರಾಟದ ಕಾಲದಲ್ಲಿ ಮೂರನೆಯ ಜಗತ್ತಿನಲ್ಲಿ (ವಸಾಹತುಗಳಲ್ಲಿ) ‘ರಾಷ್ಟ್ರ’ದ ಬಗ್ಗೆ ಹೊರಹೊಮ್ಮಿದ ಪರಿಕಲ್ಪನೆಯು ಸಂಪೂರ್ಣವಾಗಿ ಭಿನ್ನವಾಗಿತ್ತು. ತನ್ನ ಅಧೀನದಲ್ಲಿದ್ದ ದೇಶಗಳ ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ವಸಾಹತುಶಾಹಿ ಆಡಳಿತವು ಜನರನ್ನು ದಮನಮಾಡುತ್ತಿದ್ದ ಕಾರಣದಿಂದ, ಜನರು ‘ರಾಷ್ಟ್ರ’ದ ಹೊಸ ಪರಿಕಲ್ಪನೆಯೊಂದಿಗೆ ಗುರುತಿಸಿಕೊಂಡರು. ಭಾರತದಲ್ಲಿ, 1931ರಲ್ಲಿ ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಜನರ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಕೈಗೊಂಡ ನಿರ್ಣಯವು ‘ರಾಷ್ಟ್ರೀಯ’ ವಿಮೋಚನೆಯ ಕಾರ್ಯಸೂಚಿಗೆ ಒಂದು ಮಾದರಿಯಾಗಿತ್ತು. ವಸಾಹತುಶಾಹಿ ಆಳ್ವಿಕೆಗೆ ಒಳಗಾಗಿದ್ದ ಇತರ ದೇಶಗಳಲ್ಲಿಯೂ ಸಹ ಇದೇ ರೀತಿಯ ದಸ್ತಾವೇಜುಗಳನ್ನು ಕಾಣಬಹುದು.

ಯೂರೋಪಿಯನ್ ‘ರಾಷ್ಟ್ರೀಯತೆ’ಗೂ ಮತ್ತು ಮೂರನೆಯ ಜಗತ್ತಿನ ಜನರು ಪರಿಭಾವಿಸಿಕೊಂಡ ವಸಾಹತು–ವಿರೋಧಿ ‘ರಾಷ್ಟ್ರೀಯತೆ’ಗೂ ವ್ಯತ್ಯಾಸವಿದೆ. ಈ ವ್ಯತ್ಯಾಸದ ಮುಖ್ಯ ಕಾರಣವೆಂದರೆ, ಯೂರೋಪಿನಲ್ಲಿ, ತಮ್ಮ ನಿಯಂತ್ರಣದ ಮಾಧ್ಯಮಗಳ ಮೂಲಕ ಸಾಮ್ರಾಜ್ಯಶಾಹಿಯ ಒಳಗಣ ಪೈಪೋಟಿಯಲ್ಲಿ ತೊಡಗಿದ್ದ ಹಣಕಾಸು ಬಂಡವಾಳವು ಆಯಾ ದೇಶಗಳ ‘ರಾಷ್ಟ್ರೀಯತೆ’ಯ ಪರ ನಿಂತು ಅದಕ್ಕೆ ಪ್ರೋತ್ಸಾಹ–ಬೆಂಬಲವನ್ನು ನೀಡಿತ್ತು. ಇದಕ್ಕೆ ತದ್ವಿರುದ್ಧವಾಗಿ, ವಸಾಹತುಶಾಹಿ ಆಳ್ವಿಕೆಯಲ್ಲಿ ಉಸಿರುಗಟ್ಟಿದ ದೊಡ್ಡ ಬಂಡವಾಳಗಾರರನ್ನು ಹೊರತುಪಡಿಸಿದರೆ, ವಸಾಹತುಶಾಹಿ ವಿರೋಧಿ ಹೋರಾಟದ ವರ್ಗ–ನೆಲೆಯು, ಕಾರ್ಮಿಕರು, ರೈತರು, ಕಿರು ಉತ್ಪಾದಕರು ಮತ್ತು ಸಣ್ಣ ಸಣ್ಣ ಬಂಡವಾಳಗಾರರನ್ನು ಒಳಗೊಂಡಿತ್ತು.

ಆದರೆ, ನವ–ಉದಾರವಾದದ ಆಗಮನದೊಂದಿಗೆ ಒಂದು ಪ್ರತಿ–ಕ್ರಾಂತಿಯ ಪರಿಕಲ್ಪನೆ ಹಬ್ಬಿರುವುದನ್ನು ನಾವು ಕಾಣುತ್ತಿದ್ದೇವೆ. ನವ–ಉದಾರವಾದಿ ಬಂಡವಾಳಶಾಹಿ ಯುಗದ ಸಂದರ್ಭದಲ್ಲಿ, ‘ರಾಷ್ಟ್ರ’ವನ್ನು ದೇವರ ಮಟ್ಟಕ್ಕೆ ಏರಿಸಿ, ಅದನ್ನು ಜನರಿಗಿಂತ ಎತ್ತರದಲ್ಲಿ ಕೂರಿಸಿ, ಯೂರೋಪಿಯನ್ ಮಾದರಿಯ ‘ರಾಷ್ಟ್ರೀಯತೆ’ಯನ್ನು ಕಾರ್ಪೊರೇಟ್–ಹಣಕಾಸು ಕುಳಗಳಿಗೆ ಸಮನೆಂಬ ಭಾವನೆಯನ್ನು ಮೂಡಿಸಿ ಅದನ್ನು ಭಾರತವೂ ಸೇರಿದಂತೆ ತೃತೀಯ ಜಗತ್ತಿನ ದೇಶಗಳಲ್ಲಿ ಪ್ರೋತ್ಸಾಹಿಸಲಾಯಿತು. ಅಂತರ್–ಸಾಮ್ರಾಜ್ಯಶಾಹಿ ವೈರುಧ್ಯಗಳು ಮಂಕಾಗಿವೆ, ನಿಜ. ಆದರೂ, ಯೂರೋಪಿಯನ್ ಶೈಲಿಯ ‘ರಾಷ್ಟ್ರೀಯತೆ’ಯು, ಹಣಕಾಸಿನ ಬಂಡವಾಳದ ಹಿತಾಸಕ್ತಿಗಳ ಮಟ್ಟಿಗೆ, ಇನ್ನೂ ಚಿನ್ನದ ಮೊಟ್ಟೆ ಇಡುವ ಕೋಳಿಯೇ.

ಕಾರ್ಪೊರೇಟ್–ಹಣಕಾಸು ಕುಳಗಳು ಎಲ್ಲರಿಗೂ ಪ್ರಯೋಜನವಾಗುವಂತಹ ಆರ್ಥಿಕ ಬೆಳವಣಿಗೆಯನ್ನು ತರುತ್ತಾರೆ ಎಂಬ ನಂಬಿಕೆಯನ್ನು ಜನರಲ್ಲಿ ಮೂಡಿಸುವ ಸಲುವಾಗಿ, ‘ರಾಷ್ಟ್ರ’ದ ಮತ್ತು ಕಾರ್ಪೊರೇಟ್–ಹಣಕಾಸು ಕುಳಗಳ ಸ್ವರೂಪ–ಚಹರೆಗಳು ಒಂದೇ ಎಂಬ ರೀತಿಯಲ್ಲಿ ಬಿಂಬಿಸಿ ಅದನ್ನು ಆರಂಭದಲ್ಲಿ ಪ್ರೋತ್ಸಾಹಿಸಲಾಗಿತ್ತು.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಆದರೆ, ಅಸಲಿಯಾಗಿ ಇದೊಂದು ನಕಲಿ ಭರವಸೆಯ ಮೇಲಿನ ನಂಬಿಕೆಯಾಗಿತ್ತು ಎಂಬುದನ್ನು ನವ–ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟು ಬಯಲು ಮಾಡಿತು. ಈ ಇಕ್ಕಟ್ಟಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ನವ–ಉದಾರವಾದವು ಹೊಸದೊಂದು ವೇಷ ತೊಡಬೇಕಾಗಿ ಬಂತು. ಆರ್ಥಿಕ ಬೆಳವಣಿಗೆಯ ಪ್ರಯೋಜನವನ್ನು ಎಲ್ಲರಿಗೂ ತರುವ ವರಸೆಯನ್ನೂ ಕೈಬಿಡದೆ, ‘ರಾಷ್ಟ್ರ’ದ ಮತ್ತು ಕಾರ್ಪೊರೇಟ್–ಹಣಕಾಸು ಕುಳಗಳ ಸ್ವರೂಪ–ಚಹರೆಗಳು ಒಂದೇ ಎಂಬುದನ್ನು ಮತ್ತೊಮ್ಮೆ ನಂಬಿಸಲು ಹೊಸದೊಂದು ದಾರಿಯನ್ನು ಹುಡುಕಬೇಕಾಗಿ ಬಂತು. ‘ಹಿಂದೂರಾಷ್ಟ್ರ’ ಎಂಬ ಒಂದು ಅಲೌಕಿಕ ಪರಿಕಲ್ಪನೆಯನ್ನು ಪರ್ಯಾಯವಾಗಿ ಪ್ರತಿಪಾದಿಸಲಾಯಿತು. ಜನರಿಗಿಂತ ಎತ್ತರದಲ್ಲಿ ಕೂರಿಸಿದ ಈ ‘ಹಿಂದೂರಾಷ್ಟ್ರ’ಕ್ಕಾಗಿ ಜನರು ತ್ಯಾಗ ಮಾಡುವಂತೆ ಮತ್ತೊಮ್ಮೆ ಕರೆ ನೀಡಲಾಯಿತು. ಈ ‘ಹಿಂದೂರಾಷ್ಟ್ರ’ದ ದೃಷ್ಟಿಯಲ್ಲೂ ಸಹ ಜನರ ದೈನಂದಿನ ಸಮಸ್ಯೆಗಳಿಗೆ ಸಿಕ್ಕಿದ ಪ್ರಾಮುಖ್ಯತೆ ಅಲ್ಪವೇ.

ನವ ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟಿನ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಮತ್ತು ಕಳೆದ ಆರು ವರ್ಷಗಳಿಂದಲೂ ಬಲಗೊಳ್ಳುತ್ತಿರುವ ಕಾರ್ಪೊರೇಟ್–ಹಿಂದುತ್ವ ಮೈತ್ರಿಯ ಕಥನವನ್ನು ಹಿಂದುತ್ವದ ಭಕ್ತರು ಸುಂದರವಾಗಿ ಹೆಣೆದಿದ್ದಾರೆ. ಈ ಹೊಸ ಕಥನದ ನಿರೂಪಣೆಯನ್ನು ಕಾರ್ಪೊರೇಟ್ ಮಾಧ್ಯಮಗಳು ಸತತವಾಗಿ ಪ್ರಚಾರ ಮಾಡಿವೆ. ನರೇಂದ್ರ ಮೋದಿಯವರು ಕಾರ್ಪೊರೇಟ್–ಹಣಕಾಸು ಕುಳಗಳನ್ನು ‘ರಾಷ್ಟ್ರ’ದ ‘ಸಂಪತ್ತಿನ ಸೃಷ್ಟಿಕರ್ತರು’ ಎಂದು ಬಣ್ಣಿಸಿದಾಗ, ‘ರಾಷ್ಟ್ರ’ದ ಅರ್ಥ ಏನು ಎನ್ನುವುದರ ಬಗ್ಗೆ ಯಾವ ಅನುಮಾನವೂ ಉಳಿಯಲಿಲ್ಲ. ಈ ವಿವರಣೆಯು, ‘ರಾಷ್ಟ್ರ’ವು ಏಳಿಗೆ ಹೊಂದಬೇಕಾದರೆ ಈ ‘ಸಂಪತ್ತಿನ ಸೃಷ್ಟಿಕರ್ತ’ರನ್ನು ಸಂತೋಷವಾಗಿಟ್ಟಿರಬೇಕು ಎಂದು ಸೂಚಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಷ್ಟ್ರದ ಹಿತಾಸಕ್ತಿಯು, ಕಾರ್ಪೊರೇಟ್–ಹಣಕಾಸು ಕುಳಗಳ ಹಿತಾಸಕ್ತಿಗೆ ಸಮಾನವಾಗುತ್ತದೆ. ಆರ್‌ಎಸ್‌ಎಸ್ ಪ್ರತಿಪಾದಿಸುವ ‘ಹಿಂದೂರಾಷ್ಟ್ರ’ವು ವಾಸ್ತವದಲ್ಲಿ ಕಾರ್ಪೊರೇಟ್–ಹಣಕಾಸು ಕುಳಗಳ ಸರ್ವಾಧಿಕಾರದ ಪ್ರಭುತ್ವವೇ – ಅದರಲ್ಲಿಯೂ ಬೆರಳೆಣಿಕೆಯಷ್ಟು ಮಂದಿಯ ಮತ್ತು ಅವರ ಹಿತಾಸಕ್ತಿ ಕಾಪಾಡುವ ನಿರಂಕುಶ ಪ್ರಭುತ್ವವೇ.

ಸಂಪನ್ಮೂಲಗಳನ್ನು ಹೊಂದಿರುವ ಮತ್ತು ನೀತಿಗಳನ್ನು ಸ್ವತಂತ್ರವಾಗಿ ನಿರ್ಧರಿಸುವ ಅಧಿಕಾರವುಳ್ಳ ರಾಜ್ಯಗಳಿಂದ ಕೂಡಿರುವ ಒಂದು ಒಕ್ಕೂಟ ಪ್ರಭುತ್ವ ವ್ಯವಸ್ಥೆಯು, ಕಾರ್ಪೊರೇಟ್–ಹಣಕಾಸು ಕುಳಗಳ ಒಡೆತನದ ಬೃಹತ್ ಘಟಕಗಳನ್ನು ಪ್ರೋತ್ಸಾಹಿಸುವುದರ ಜೊತೆಯಲ್ಲೇ ಸಣ್ಣ ಸಣ್ಣ ಸ್ಥಳೀಯ ಬಂಡವಾಳಗಾರರಿಗೆ ತಮ್ಮ ಸುತ್ತ ಮುತ್ತಲ ಪ್ರದೇಶಗಳ ಅಭಿವೃದ್ಧಿಯಲ್ಲಿ ಪಾಲುದಾರರಾಗುವ ಅವಕಾಶವನ್ನು ಕಲ್ಪಿಸುತ್ತದೆ ಮತ್ತು ಸಣ್ಣ ಪುಟ್ಟ ಗೃಹ ಕೈಗಾರಿಕೆಗಳು ಹಾಗೂ ರಾಜ್ಯ ಸರ್ಕಾರಗಳ ಉದ್ದಿಮೆಗಳು ಸರಾಗವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ನೋಡಿಕೊಳ್ಳುತ್ತದೆ. ಆದರೆ, ರಾಜ್ಯಗಳಿಗೆ ದಕ್ಕಬೇಕಿದ್ದ ಸಂಪನ್ಮೂಲಗಳನ್ನು ಕೇಂದ್ರವೇ ಕಬಳಿಸಿದರೆ, ನೀತಿ–ನಿರ್ಧಾರಗಳು ಕೇಂದ್ರೀಕೃತಗೊಳ್ಳುತ್ತವೆ. ಅಂದರೆ, ಕೇಂದ್ರವು ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುತ್ತದೆ. ಆಗ, ಸರ್ವಾಂಗೀಣ (ಎಲ್ಲ ಪ್ರದೇಶಗಳ) ಅಭಿವೃದ್ಧಿಯ ಮಾತುಗಳು ಬೊಗಳೆಯಾಗುತ್ತವೆ. 1930ರ ದಶಕದಲ್ಲಿ ಜಪಾನ್ ದೇಶದಲ್ಲಿ, ಕೈಗಾರಿಕೆ, ವಾಣಿಜ್ಯ ಮುಂತಾದ ಎಲ್ಲ ರೀತಿಯ ಚಟುವಟಿಕೆಗಳನ್ನೂ ನಿರ್ವಹಿಸಿದ ಶಿಂಕೊ ಎಂಬ ಕಂಪೆನಿಗಳ ಸಮೂಹ (shinko zaibatsu) ಮಾದರಿಯಲ್ಲಿ, ಕೇಂದ್ರ ಸರ್ಕಾರದ ಕೃಪಾಕಟಾಕ್ಷಕ್ಕೆ ಪಾತ್ರರಾದ ಬೆರಳೆಣಿಕೆಯ ಕಾರ್ಪೊರೇಟ್–ಹಣಕಾಸು ಕುಳಗಳಿಗೆ ಬೇಕಾದದ್ದನ್ನು ಮಾಡಿಕೊಳ್ಳುವ ಅನುಕೂಲವನ್ನು ಕಲ್ಪಿಸಿಕೊಡಲಾಗುತ್ತಿದೆ. ಈ ಬೆರಳೆಣಿಕೆಯ ಏಕಸ್ವಾಮ್ಯ ಉದ್ದಿಮೆ ಮನೆತನಗಳು ಹೊಂದಿರುವ ಪ್ರಾಬಲ್ಯದ ಪ್ರತಿರೂಪದಂತೆ ಎಲ್ಲ ಸಂಪನ್ಮೂಲಗಳನ್ನು ಮತ್ತು ಅಗಾಧ ಅಧಿಕಾರಗಳನ್ನು ಮೋದಿ ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಅವರ ಈ ಪ್ರಾಬಲ್ಯವನ್ನು ಪೂರ್ಣಗೊಳಿಸಲು ಈಗ ರೈತರನ್ನು ಬಲಿ ಪಡೆಯಲಾಗುತ್ತಿದೆ.

ಕೇಂದ್ರೀಕರಣದ ಅರ್ಥವೆಂದರೆ, ರಾಜ್ಯ ಸರ್ಕಾರಗಳ ವಿರುದ್ಧವಾಗಿ ಕೇಂದ್ರ ಸರ್ಕಾರದ ಬಲಗೊಳ್ಳುವಿಕೆ ಎಂಬುದಷ್ಟೇ ಅಲ್ಲ. ಕೇಂದ್ರ ಸರ್ಕಾರದ ಒಳಗೂ ಸಹ ಎಲ್ಲಾ ಅಧಿಕಾರಗಳೂ, ಜನರಿಗೆ ಯಾವುದು ಒಳ್ಳೆಯದು ಎಂಬುದನ್ನು ಬಲ್ಲ ಮತ್ತು ಯಾವ ತಪ್ಪನ್ನೂ ಮಾಡದ ಒಬ್ಬ ಸರ್ವಶಕ್ತ “ನಾಯಕ”ನ ಕೈಯಲ್ಲಿ ಸೇರಿರುವುದೂ ಸಹ ಕೇಂದ್ರೀಕರಣವೇ. ಕಾರ್ಪೊರೇಟ್–ಹಿಂದುತ್ವ ಮೈತ್ರಿಯ ‘ರಾಷ್ಟ್ರೀಯತೆ’ಯು ಈ ‘ನಾಯಕ’ನನ್ನು ‘ರಾಷ್ಟ್ರ’ದ ಸಂಕೇತ ಎಂದು ಭಾವಿಸುತ್ತದೆ ಮತ್ತು ಆ ನಾಯಕನನ್ನು ದೇವರೆಂದು ಆರಾಧಿಸುತ್ತದೆ. ಹಾಗಾಗಿ, ಮೋದಿ ಅವರನ್ನು ಯಾರಾದರೂ ಗೇಲಿಮಾಡಿದರೆ, ನಿಂದಿಸಿದರೆ, ಅಥವಾ ಲೇವಡಿ ಮಾಡಿದರೆ, ಅವರನ್ನು ಎನ್‌ಐಎ ಅಂಥಹ ಪ್ರಭುತ್ವದ ತನಿಖಾ ಸಂಸ್ಥೆಗಳು ‘ದೇಶ ವಿರೋಧಿ’ ಎಂದು ಪರಿಗಣಿಸುವುದು ಆಶ್ಚರ್ಯವಲ್ಲ. ಹಾಗಾಗಿ, ‘ದೇಶ ವಿರೋಧಿ’ಗಳನ್ನು ಬಂಧಿಸಲಾಗುತ್ತಿದೆ.

ರಾಷ್ಟ್ರದ ಬಗ್ಗೆ ಪ್ರತಿಪಾದಿಸಲ್ಪಟ್ಟ ಈ ಕಥನ–ನಿರೂಪಣೆಯನ್ನು, ತನ್ನ ಘನ ನಡವಳಿಕೆಯ ಮೂಲಕ ಕಿಸಾನ್ ಚಳುವಳಿಯು ಪ್ರಶ್ನೆಗೆ ಒಳಪಡಿಸಿದೆ ಮಾತ್ರವಲ್ಲ, ಈ ಕಥನ–ನಿರೂಪಣೆಗೆ ಬದಲಿಯಾಗಿ, ‘ರಾಷ್ಟ್ರವೆಂದರೆ ದುಡಿಯುವ ಜನರು ಎಂಬ ಪರಿಕಲ್ಪನೆಯನ್ನು ರಂಗಸ್ಥಳದ ಮಧ್ಯಕ್ಕೆ ಮತ್ತೊಮ್ಮೆ ತಂದು ನಿಲ್ಲಿಸಿದೆ. ಈ ಮೂರೂ ಕೃಷಿ ಕಾಯ್ದೆಗಳು ರೈತರಿಗೆ ಒಳಿತು ಮಾಡುತ್ತವೆ ಎಂಬುದಾಗಿ ಮೋದಿಯವರು ಮಂಡಿಸಿದ ವಾದವನ್ನು ತಿರಸ್ಕರಿಸಿದ ರೈತರ ಈ ಕ್ರಮವು, ಎಲ್ಲವನ್ನೂ ಬಲ್ಲ, ದೋಷ ರಹಿತ, ಸರ್ವಶಕ್ತ, ರಾಷ್ಟ್ರದ ಸಂಕೇತವೆಂದೇ ಗುರುತಿಸಲ್ಪಡುವ ಮತ್ತು ದೇವರೆಂದು ಆರಾಧಿಸಲ್ಪಡುತ್ತಿರುವ ಈ ನಾಯಕನಿಗೆ ಕೊಟ್ಟ ಒಂದು ದೊಡ್ಡ ಹೊಡೆತವೇ. ರೈತರ ಮಾತುಗಳನ್ನು ಆಲಿಸದ ಅಥವಾ ಅವರೊಂದಿಗೆ ಅರ್ಥಪೂರ್ಣ ಮಾತು ಕತೆ ನಡೆಸದ ಸರ್ಕಾರದ ಕ್ರಮವನ್ನು ಅನೇಕರು ಟೀಕಿಸಿದ್ದಾರೆ. ಆದರೆ, ಬೇರೆಯವರ ಮಾತುಗಳನ್ನು ಆಲಿಸುವುದೇ, ಮೂಲಭೂತವಾಗಿ, ರಾಷ್ಟ್ರದ ಈ ಪರಿಕಲ್ಪನೆಗೆ ವಿರೋಧಾತ್ಮಕವಾಗುತ್ತದೆ. ಈ ಪರಿಕಲ್ಪನೆಯ ಪ್ರಕಾರ, ರಾಷ್ಟ್ರೀಯ ಏಕತೆ ಎಂಬುದು ಎಲ್ಲರಲ್ಲೂ ಮೊದಲೇ ಅಂತರ್ಗತವಾಗಿರುತ್ತದೆ. ಆದ್ದರಿಂದ, ಅದನ್ನು ಪ್ರತ್ಯೇಕವಾಗಿ ಮಾತು ಕತೆಗಳ ಮೂಲಕ ಮೂಡಿಸುವ ಅಗತ್ಯವಿಲ್ಲ. ಅದು ನಾಯಕನ ಮೂಲಕ ಪ್ರತಿಬಿಂಬಿತವಾಗುತ್ತದೆ. ಈ ಕಾರಣದಿಂದಾಗಿ, ನಾಯಕನನ್ನು ಪ್ರಶ್ನಿಸುವ ಕ್ರಮವು ಒಂದೊ ರಾಷ್ಟ್ರ–ವಿರೋಧಿ ಕೃತ್ಯವಾಗುತ್ತದೆ ಅಥವಾ ಜ್ಞಾನದ ಕೊರತೆಯಿಂದ ನೆಲೆಸಿರುವ ಮುಗ್ಧತೆಯ ಮೂಲದ್ದಾಗಿರುತ್ತದೆ.

ಅಂಬಾನಿ ಒಡೆತನದ ಜಿಯೋ ಮೊಬೈಲ್

ಪುಟ 13 ನೋಡಿ

ರೈತ ಚಳುವಳಿಯ ಸವಾಲು

ಪುಟ 12 ರಿಂದ

ಸಂಪರ್ಕವನ್ನು ಬಹಿಷ್ಕರಿಸುವಂತೆ ರೈತ ಚಳುವಳಿಯು ಕೊಟ್ಟಿರುವ ಕರೆ ಮತ್ತು ಅಂಬಾನಿ–ಅದಾನಿ ಜೊತೆಗೆ ಮೋದಿಯವರ ಪ್ರತಿಕೃತಿಗಳನ್ನು ಸುಡುವುದು; ಇವೆಲ್ಲವೂ ಮೋದಿ ಅವರು 'ಸಂಪತ್ತಿನ ಸೃಷ್ಟಿ'ಯ ಹೆಸರಿನಲ್ಲಿ ಕೆಲವು ಉದ್ಯಮ ಸಂಸ್ಥೆಗಳನ್ನು ರಾಷ್ಟ್ರದೊಂದಿಗೆ ಗುರುತಿಸಿದ ಸುಳ್ಳಿನ ಬಗ್ಗೆ ಅರಿವು ಮೂಡಿಸುತ್ತಿವೆ. ವಿಪರ್ಯಾಸವೆಂದರೆ, ರೈತರು ಜಿಯೋ ಮೊಬೈಲ್ ಸಂಪರ್ಕವನ್ನು ಬಹಿಷ್ಕರಿಸುವಂತೆ ಕರೆ ಕೊಟ್ಟ ಹಿಂದಿನ ದಿನವಷ್ಟೇ ಮುಖೇಶ್ ಅಂಬಾನಿ 5–ಜಿ ಅನ್ನು ಶುರು ಮಾಡುವುದಾಗಿ ಘೋಷಿಸಿದ್ದರು. ಇದನ್ನು ಎಲ್ಲಾ ಟಿವಿ ಚಾನೆಲ್‌ಗಳೂ ಒಂದು ದೊಡ್ಡ 'ರಾಷ್ಟ್ರೀಯ' ಸಾಧನೆ ಎಂದೇ ಬಿಂಬಿಸಿದ್ದವು. ಜಿಯೋ ಮೊಬೈಲ್ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ರೈತ ಚಳುವಳಿಯು ಕೊಟ್ಟಿರುವ ಕರೆಯು ಕೇವಲ ಒಂದು ನಿರ್ದಿಷ್ಟ ತಂತ್ರಗಾರಿಕೆ ಮಾತ್ರವಲ್ಲ; ಅದು, 'ರಾಷ್ಟ್ರ'ವನ್ನು ಕೆಲವು ಕಾರ್ಪೊರೇಟ್ ಸಂಸ್ಥೆಗಳ ಜೊತೆಗೆ ಸಮಾನವೆಂದು ಭಾವಿಸುವ ಕಥನದ ನಿರೂಪಣೆಗೆ ವಿರುದ್ಧವಾಗಿ ನಿಲ್ಲುತ್ತದೆ.

ರೈತರು ವಿರೋಧಿಸುತ್ತಿರುವುದು ಕೇವಲ ಈ ಕಥನವನ್ನು ಮಾತ್ರವಲ್ಲ. ಈ ಕಥನಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಬದಲಿ ಕಥನವನ್ನು ಒದಗಿಸುವ ಮೂಲಕ, ರೈತರು, ವಸಾಹತು–ವಿರೋಧಿ ಹೋರಾಟದ ಸಂದರ್ಭದಲ್ಲಿ ಪ್ರತಿಪಾದಿಸಿದ್ದ ಮತ್ತು ಕ್ರಮೇಣ ತೆಳುವಾಗುತ್ತಿದ್ದ ನೈಜ ರಾಷ್ಟ್ರೀಯತೆಯನ್ನು ಮರಳಿ ಪಡೆದಿದ್ದಾರೆ. ಅವರು ಜಮಾವಣೆಯಾಗಿರುವ ಸ್ಥಳಗಳಲ್ಲಿ ಕೇಳಿ ಬರುವ ಸಾಮಾನ್ಯ ಘೋಷಣೆ ಎಂದರೆ: ಜೈ ಭಾರತ್, ಜೈ ಕಿಸಾನ್. ಈ ಘೋಷಣೆಗಳಿಗೆ ಇಬ್ಬಗೆಯ ಮಹತ್ವವಿದೆ. ಒಂದು ಕಡೆಯಲ್ಲಿ, ಅದು ರಾಷ್ಟ್ರವನ್ನು ದುಡಿಯುವ ಜನರೊಂದಿಗೆ ಗುರುತಿಸುತ್ತದೆ. ಮತ್ತೊಂದೆಡೆಯಲ್ಲಿ, ಭಾರತ್ ಮಾತಾ ಕಿ ಜೈ ಎಂಬ ಘೋಷಣೆ ಕೂಗದೇ ಇರುವುದೂ ಗಮನಾರ್ಹವೇ. ಭಾರತ್ ಮಾತಾ ಕಿ ಜೈ ಎಂಬ ಘೋಷಣೆಯ ಮೂಲಕ "ರಾಷ್ಟ್ರ"ವನ್ನು ಮಾತೃ–ಸಂಕೇತವಾಗಿ ತೋರಿಸುವ ಉದ್ದೇಶವೆಂದರೆ, ರಾಷ್ಟ್ರವನ್ನು ದೇವರ ಮಟ್ಟಕ್ಕೆ ಏರಿಸುವುದು (ದೈವೀಕರಣ). ಅಂದರೆ, ರಾಷ್ಟ್ರವನ್ನು ಜನರಿಗಿಂತ ಎತ್ತರದ ಮಟ್ಟದಲ್ಲಿ ಇರಿಸಿದಾಗ ಜನರು ರಾಷ್ಟ್ರಕ್ಕಾಗಿ ತ್ಯಾಗ ಮಾಡಬೇಕಾಗುತ್ತದೆ. ಜನರನ್ನು, ತಮ್ಮ ತನು–ಮನ–ಧನವನ್ನು ರಾಷ್ಟ್ರಕ್ಕಾಗಿ ತ್ಯಾಗ ಮಾಡುವಂತೆ ಪ್ರೇರೇಪಿಸುವಲ್ಲಿ ರಾಷ್ಟ್ರದ ದೈವೀಕರಣವು ಒಂದು ಸಾಧನವಾಗುತ್ತದೆ. ಇದುವೇ, ಕಾರ್ಪೊರೇಟ್–ಹಿಂದುತ್ವ ಮೈತ್ರಿಯ 'ರಾಷ್ಟ್ರೀಯತೆ'ಯನ್ನು ಪ್ರಸರಿಸುವ ಮಾದರಿ. ಈ ಮಾದರಿಯು, ರಾಷ್ಟ್ರದ ಒಳಿತಿಗಾಗಿ ಜನರು ಕಾರ್ಪೊರೇಟ್‌ಗಳ ಪರವಾಗಿ ತ್ಯಾಗ ಮಾಡಬೇಕು (ಅಥವಾ ಅವರನ್ನು ಸಹಿಸಿಕೊಳ್ಳಬೇಕು) ಎಂದು ಬಯಸುತ್ತದೆ. ಅದೇ ರೀತಿಯಲ್ಲಿ, ರೈತರು ಘೋಷಣೆಗಳನ್ನು ಕೂಗುವಾಗ, ಒಂದು ಭಾಷೆ–ಒಂದು ದೇಶ ಎಂಬ ನಿರೀಕ್ಷೆಯ ಪ್ರಕಾರ ಕೇವಲ ಹಿಂದಿ ಭಾಷೆಯ ಘೋಷಣೆಗಳಿಗೆ ಸೀಮಿತಗೊಳ್ಳದೆ, ಪಂಜಾಬಿ ಮತ್ತು ಇತರ ಭಾಷೆಗಳನ್ನು ಬಳಸುವಂತೆ ಪಟ್ಟುಹಿಡಿಯುವ ನಡವಳಿಕೆಯು, ಒಂದೇ–ಕೇಂದ್ರೀಕೃತ–'ರಾಷ್ಟ್ರ' ಎಂಬ ಪರಿಕಲ್ಪನೆಗಿಂತ ಭಿನ್ನವಾಗಿ, ದೇಶದ ಪ್ರಾದೇಶಿಕ–ಭಾಷಾ ರಾಷ್ಟ್ರೀಯತೆಗಳ ಬಹುತ್ವವನ್ನು ಗುರುತಿಸಿ ಅವುಗಳಿಗೆ ಕೊಡುವ ಮನ್ನಣೆಯು ಶ್ಲಾಘನೀಯವೇ.

ಸಂಕೇತಗಳು ಗಟ್ಟಿಯಾಗಿ ಮಾತನಾಡುತ್ತವೆ. ಕಿಸಾನ್ ಚಳುವಳಿಯು ಬಳಸಿದ ಸಂಕೇತಗಳು, ಸರ್ಕಾರದ ವಿರುದ್ಧ ತೆಗೆದುಕೊಂಡ ಸಹಜ ನಿಲುವು ಮುಂತಾದವುಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಘನತೆಯಿಂದ ಕೂಡಿದ ಅವರ ಒಟ್ಟಾರೆ ನಡವಳಿಕೆಗಳು, ಕಾರ್ಪೊರೇಟ್–ಹಿಂದುತ್ವ ಮೈತ್ರಿಯು ಪ್ರಚುರಪಡಿಸುತ್ತಿರುವ ರಾಷ್ಟ್ರೀಯತೆಯ ಮಾದರಿಯನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತವೆ. ವಸಾಹತು–ವಿರೋಧಿ ಹೋರಾಟದ ಜೀವಾಳವಾಗಿದ್ದ ಮತ್ತು ಸ್ವತಂತ್ರ ಭಾರತದ ತಳಹದಿಯಾದ ನೈಜ ರಾಷ್ಟ್ರೀಯತೆಯನ್ನು ಮರುಸ್ಥಾಪಿಸುವ ಕಾರ್ಯವನ್ನು ರೈತರು ಮಾಡಿದ್ದಾರೆ. ■

"ವಿಶೇಷ ಅಧಿವೇಶನಕ್ಕೆ ಕೇರಳ ರಾಜ್ಯಪಾಲರ ನಕಾರ ಅಸಂವಿಧಾನಿಕ"

ಕೇಂದ್ರ ಸರಕಾರ ಪಾಸು ಮಾಡಿಸಿರುವ ಕೃಷಿ ಕಾಯ್ದೆಗಳ ಪರಿಣಾಮದ ಬಗ್ಗೆ ಚರ್ಚಿಸಲು ಡಿಸೆಂಬರ್ 23 ರಂದು ಕೇರಳ ವಿಧಾನ ಸಭೆಯ ವಿಶೇಷ ಅಧಿವೇಶನ ಕರೆಯಬೇಕೆಂಬ ಎಲ್‌ಡಿಎಫ್ ಮಂತ್ರಿಮಂಡಳದ ಪ್ರಸ್ತಾಪವನ್ನು ಅಲ್ಲಿನ ರಾಜ್ಯಪಾಲರು ತಿರಸ್ಕರಿಸಿದ್ದಾರೆ.

ಈ ರೀತಿ ತುರ್ತು ಅಧಿವೇಶನ ಕರೆಯುವುದಕ್ಕೆ ಆಧಾರಗಳೇನೂ ಇಲ್ಲ ಎಂದು ರಾಜ್ಯಪಾಲರು ಕಾರಣ ಕೊಟ್ಟಿರುವುದಾಗಿ ವರದಿಯಾಗಿದೆ. ಅದಕ್ಕೆ ಉತ್ತರವಾಗಿ, ಎಲ್‌ಡಿಎಫ್ ಸರಕಾರ, ಈ ಕೃಷಿ ಕಾಯ್ದೆಗಳು ದೇಶವ್ಯಾಪಿ ಪರಿಣಾಮ ಹೊಂದಿವೆ, ರಾಜ್ಯದ ರೈತರು ಈ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದಾರೆ ಎಂದು ರಾಜ್ಯಪಾಲರಿಗೆ ತಿಳಿಸಿತು.

ಒಂದು ಸೀಮಿತ ಕಾರ್ಯಸೂಚಿಯೊಂದಿಗೆ ಈ ಅಧಿವೇಶನವನ್ನು ಕರೆಯಬೇಕೆಂದು ಸಂಪುಟ ನಿರ್ಧರಿಸಿತ್ತು. ಮುಖ್ಯಮಂತ್ರಿಗಳು ಈ ಕುರಿತು ಒಂದು ನಿರ್ಣಯ ಮಂಡಿಸುತ್ತಾರೆ. ಅದರ ಮೇಲೆ ರಾಜಕೀಯ ಪಕ್ಷಗಳ ಮುಖಂಡರು ಮಾತಾಡುತ್ತಾರೆ. ದಿಲ್ಲಿಯ ಗಡಿಗಳಲ್ಲಿ ಪ್ರತಿಭಟಿಸುತ್ತಿರುವ ರೈತರೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಲಿಕ್ಕಾಗಿ ಈ ನಿರ್ಣಯ. ಸಂಪುಟದ ಈ ಪ್ರಸ್ತಾವದ ಬಗ್ಗೆ ರಾಜ್ಯಪಾಲರ ನಿರ್ಧಾರ ಅಸಹಜ, ಇದನ್ನು ನಂಬಲು ಸಾಧ್ಯವಿಲ್ಲ ಎಂದು ವಿಧಾನ ಸಭಾಧ್ಯಕ್ಷರು ಈ ಕುರಿತು ಪ್ರತಿಕ್ರಿಯಿಸುತ್ತ ಹೇಳಿದ್ದಾರೆ.

ರಾಜ್ಯಪಾಲರ ಈ ಕ್ರಮ ಅಸಂವಿಧಾನಿಕ, ಅವರಿಗೆ ಒಂದು ಸ್ಪಷ್ಟ ಬಹುಮತ ಪಡೆದಿರುವ ಸರಕಾರದ ಪ್ರಸ್ತಾವವನ್ನು ತಿರಸ್ಕರಿಸುವ ಅಧಿಕಾರ ಇಲ್ಲ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಈ ಕುರಿತು ಟಿಪ್ಪಣಿ ಮಾಡುತ್ತ ಈ ವಿಷಯವನ್ನು ಸುಪ್ರಿಂ ಕೋರ್ಟ್ ಈಗಾಗಲೇ ಇತ್ಯರ್ಥ ಮಾಡಿದೆ, ಈ ಸರಕಾರಕ್ಕೆ ಸಂವಿಧಾನ ಎಂಬುದು ಇದೆಯೇ ಎಂದು ಪ್ರಶ್ನಿಸಿದ್ದಾರೆ. ಇದು ಚುನಾಯಿತ ಸರಕಾರದ ಹಕ್ಕುಗಳ ನಗ್ನ ಉಲ್ಲಂಘನೆ ಎಂದು ಅವರು ಇದನ್ನು ಖಂಡಿಸಿದ್ದಾರೆ.

ಕೇರಳ ಮಂತ್ರಿಮಂಡಲ ಡಿಸೆಂಬರ್ 31ರಂದು ಕೇಂದ್ರ ಸರಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಒಂದು ನಿರ್ಣಯವನ್ನು ಅಂಗೀಕರಿಸಲು ಮತ್ತೊಮ್ಮೆ ನಿರ್ಧರಿಸಿ ಇದಕ್ಕೆ ವಿಧಾನಸಭೆಯ ' ಅಧಿವೇಶನವನ್ನು ಕರೆಯಲು ರಾಜ್ಯಪಾಲರಿಗೆ ಮತ್ತೊಮ್ಮೆ ಶಿಫಾರಸು ಮಾಡುವುದಾಗಿ ವರದಿಯಾಗಿದೆ.

ಕಸಿದುಕೊಂಡ ಹಕ್ಕುಗಳನ್ನು ಮರಳಿಸಬೇಕು: ಜಮ್ಮು–ಕಾಶ್ಮೀರ ಜನಾದೇಶ

ಪುಟ 7 ರಿಂದ

'ಗುಪ್ಕರ್ ಗ್ಯಾಂಗ್' ಎಂದು ಕರೆದು ತನ್ನ ಕೋಪವನ್ನು ಪ್ರದರ್ಶಿಸಿದರು. ಚುನಾವಣೆಗಳನ್ನು ಮುಂದೂಡಲು ಸಾಧ್ಯವಾಗದ ಪರಿಸ್ಥಿತಿ ಇದ್ದುದರಿಂದ ಮೈತ್ರಿಕೂಟದ ಅಭ್ಯರ್ಥಿಗಳು, ಅದರ ಹಿರಿಯ ಮುಖಂಡರೂ ಮುಕ್ತವಾಗಿ ಚುನಾವಣಾ ಪ್ರಚಾರ ನಡೆಸಲಾಗದಂತಹ ವಾತಾವರಣವನ್ನು ಅಭ್ಯರ್ಥಿಗಳ ಭದ್ರತೆಯ ನೆಪದಲ್ಲಿ ಜಮ್ಮು ಮತ್ತು ಕಾಶ್ಮೀರ ಆಡಳಿತ ಸೃಷ್ಟಿಸಿತು. ಆದರೆ ಬಿಜೆಪಿಯ ಅಭ್ಯರ್ಥಿಗಳು ಆರಾಮವಾಗಿ ಪ್ರಚಾರ ನಡೆಸಲು ಬಿಡಲಾಯಿತು. ಅವರ ಕೆಲವು ಹಿರಿಯ ಮುಖಂಡರಂತೂ ಈ ಚುನಾವಣಾ ಪ್ರಚಾರದ ವೇಳೆಗೆ ಇಲ್ಲಿಯೇ ಕ್ಯಾಂಪ್ ಹೂಡಿದ್ದರು.

ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ, ಕಲಮು 370 ಮತ್ತು 35ಎ ಮರುಸ್ಥಾಪನೆಗೊಳ್ಳಬೇಕು, ಮತ್ತೆ ರಾಜ್ಯದ ಸ್ಥಾನಮಾನ ಸಿಗಬೇಕು ಎಂದು ಮತ್ತೆ ಸಾರಿದ ಗುಪ್ಕರ್ ಘೋಷಣೆಯ ಮೈತ್ರಿಕೂಟ ಮೇಲುಗೈ ಪಡೆದಿರುವುದು ಜಮ್ಮು ಮತ್ತು ಕಾಶ್ಮೀರದ ಜನತೆ ಆಗಸ್ಟ್ 5, 2019ರ ಮೋದಿ ಸರಕಾರದ ಕ್ರಮಗಳನ್ನು ಒಪ್ಪಿಲ್ಲ ಎಂಬುದನ್ನು ತೋರಿಸಿರುವುದಾಗಿ ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಆದರೂ ಬಿಜೆಪಿ ತಾನು ಅತ್ಯಂತ ದೊಡ್ಡ ಪಕ್ಷವಾಗಿ ಮೂಡಿ ಬಂದಿರುವುದಾಗಿ ಹೇಳಿಕೊಂಡಿದೆ. ತನ್ನ ಮತಗಳಿಕೆಯೂ ಎಲ್ಲರಿಗಿಂತ ಹೆಚ್ಚು ಎಂದೂ ಅದು ಹೇಳಿಕೊಂಡಿದೆ. ಆದರೆ ಈ ಮೂಲಕ ಅದು ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಸಾಧ್ಯವಿಲ್ಲ ಎಂದು ಪರಿಣಿತರು ಹೇಳುತ್ತಾರೆ. ಅದು ಉಳಿದೆಲ್ಲ ಪಕ್ಷಗಳಿಗಿಂತ ಅತೀ ಹೆಚ್ಚು ಸಂಖ್ಯೆಯಲ್ಲಿ ಸ್ಪರ್ಧಿಸಿರುವುದರಿಂದ ಮತ್ತು ಕಾಶ್ಮೀರ ಕಣಿವೆಯಲ್ಲಿ ಮತದಾನದ ಪ್ರಮಾಣ ಜಮ್ಮು ಪ್ರದೇಶದ ಸುಮಾರು ಅರ್ಧದಷ್ಟು ಮಾತ್ರವಾದ್ದರಿಂದ ಎಂಬುದನ್ನು ಅಂಕಿ–ಅಂಶಗಳು ಹೇಳುತ್ತವೆ.(ಪುಟ 7ರ ಬಾಕ್ಸ್‌ನಲ್ಲಿರುವ ಅಂಕಿ–ಅಂಶಗಳನ್ನು ನೋಡಿ)

ಈಗ ಈ ಜಿಲ್ಲಾ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರನ್ನು ಆರಿಸುವ ಪ್ರಕ್ರಿಯೆ ಆರಂಭವಾಗಲಿದೆ. ಈ ಮೇಲೆ ಹೇಳಿರುವಂತೆ ಒಟ್ಟು 20 ಜಿಲ್ಲೆಗಳಲ್ಲಿ 12 ರಲ್ಲಿ ಪಿ.ಎ.ಜಿ.ಡಿ. ಅಧ್ಯಕ್ಷರು ಆಇಸಿ ಬರುವ ಸಾಧ್ಯತೆಗಳಿವೆ. ಇನ್ನೊಂದೆಡೆಯಲ್ಲಿ 5 ಜಿಲ್ಲೆಗಳಲ್ಲಿ ಮಾತ್ರ ಬಿಜೆಪಿ ಅಧ್ಯಕ್ಷ ಸ್ಥಾನಗಳನ್ನು ಪಡೆಯಬಹುದು ಎಂದು 'ಕಾಶ್ಮೀರ್ ಇಮೇಜಸ್' ವೆಬ್ ಪತ್ರಿಕೆ ಹೇಳಿದೆ.

ಈ ನಡುವೆ ಗಮನಾರ್ಹ ಸಂಖ್ಯೆಯಲ್ಲಿ ಆರಿಸ ಬಂದಿರುವ ಪಕ್ಷೇತರರನ್ನು(ಒಟ್ಟು 50) ಸೆಳೆದುಕೊಳ್ಳಲು ಬಿಜೆಪಿ ಎಲ್ಲ ಮಾರ್ಗಗಳನ್ನೂ ಅನುಸರಿಸುತ್ತಿದೆ ಎಂದು ಪಿ.ಎ.ಜಿ.ಡಿ. ವಕ್ತಾರರು ಹೇಳಿದ್ದಾರೆ. ಈ ಹಿಂದೆ ಹಲವು ಬಾರಿ ಆದಂತೆ ಈ ಬಾರಿಯೂ ಇಂತಹ ಜನಾದೇಶವನ್ನು ಹುಸಿಗೊಳಿಸುವ ಪ್ರಯತ್ನಗಳು ವಿನಾಶಕಾರಿಯಾಗಲಿವೆ ಎಂದು ಅವರು ಎಚ್ಚರಿಸಿದ್ದಾರೆ.

ಸಿಪಿಐ(ಎಂ)ನ ಜಮ್ಮು ಮತ್ತು ಕಾಶ್ಮೀರ ಘಟಕ ಚುನಾವಣೆಗಳಲ್ಲಿ ಭಾಗವಹಿಸಿದ ಜನತೆಗೆ ಅಭಿನಂದನೆಗಳನ್ನು ಸಲ್ಲಿಸಿದೆ. ಈ ಚುನಾವಣೆಗಳಲ್ಲಿನ ಜನಾದೇಶ ಕಳೆದ ಆಗಸ್ಟ್‌ನಲ್ಲಿ ತಮ್ಮಿಂದ ಕಸಿದುಕೊಂಡ ಹಕ್ಕುಗಳನ್ನು, ಸೌಲಭ್ಯಗಳನ್ನು ಮತ್ತೆ ನೆಲೆಗೊಳಿಸಬೇಕು ಎಂದು ಇಲ್ಲಿಯ ಜನತೆ ಬಯಸುತ್ತಾರೆ ಎಂಬುದರ ಸೂಚನೆ ಎಂದಿರುವ ಅದು ಜನಗಳ ರಾಜಕೀಯ ಮತ್ತು ಅಭಿವೃದ್ಧಿ ಕಾಳಜಿಗಳನ್ನು ಗಮನಕ್ಕೆ ತಗೊಳ್ಳಬೇಕಾದ್ದು ಅತ್ಯಗತ್ಯ ಎಂದು ಹೇಳಿದೆ.

* ಬಿಜೆಪಿ 278ರಲ್ಲಿ 183 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಅದರಲ್ಲಿ ಗೆದ್ದದ್ದು 75 ರಲ್ಲಿ, ಅಂದರೆ ಗೆಲುವಿನ ದರ 41%
* ನ್ಯಾಷನಲ್ ಕಾನ್ಫರೆನ್ಸ್ ಸ್ಪರ್ಧಿಸಿದ್ದು 132ರಲ್ಲಿ, ಗೆದ್ದಿರುವುದು 67ರಲ್ಲಿ ಅಂದರೆ ಗೆಲುವಿನ ದರ 51%
* 2014ರ ವಿಧಾನಸಭಾ ಚುನಾವಣೆಗಳಲ್ಲಿ ಒಟ್ಟು 83 ಸೀಟುಗಳಲ್ಲಿ ಜಮ್ಮು ಪ್ರದೇಶದಲ್ಲಿ 37 ಸೀಟುಗಳಿದ್ದರೆ, ಕಾಶ್ಮೀರ ಕಣಿವೆಯಲ್ಲಿ 46 ಇದ್ದವು, ಆಗ ಬಿಜೆಪಿ ಗೆದ್ದದ್ದು 25ರಲ್ಲಿ, ಅಂದರೆ 30% ಸೀಟುಗಳಲ್ಲಿ.
*ಡಿಡಿಸಿ ಚುನಾವಣೆಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಕಣಿವೆ ಎರಡರಲ್ಲೂ ತಲಾ 140 ಸೀಟುಗಳು., ಒಟ್ಟು 280. ಜಮ್ಮು ಪ್ರದೇಶದಲ್ಲಿ ಸೀಟುಗಳನ್ನು ಹೆಚ್ಚಿಸಿದರೂ ಬಿಜೆಪಿ ಈಗ ಗೆದ್ದಿರುವುದು 75, ಅಂದರೆ 26.7% ಸೀಟುಗಳಲ್ಲಿ.
* ಬಿಜೆಪಿ ಗೆದ್ದಿರುವ 75 ರಲ್ಲಿ 72 ಜಮ್ಮು ಪ್ರದೇಶದಲ್ಲಿ, ಕಾಶ್ಮಿರ ಕಣಿವೆಯಲ್ಲಿ ಅದು ಗೆದ್ದಿರುವುದು 3 ಮಾತ್ರ.
* ತದ್ವಿರುದ್ಧವಾಗಿ ಪಿ.ಎ.ಜಿ.ಡಿ. ಜಮ್ಮು ಪ್ರದೇಶದಲ್ಲೂ 26 ಸೀಟುಗಳನ್ನು ಗೆದ್ದಿದೆ. ಕಾಂಗ್ರೆಸ್ ಕೂಡ 26ರಲ್ಲಿ 17 ನ್ನು ಗೆದ್ದಿರುವುದು ಜಮ್ಮು ಪ್ರದೇಶದಲ್ಲಿ.
* ಈ ಚುನಾವಣೆಗಳಲ್ಲಿ ಒಟ್ಟು ಮತದಾನ 51%, ಇದರಲ್ಲಿ ಜಮ್ಮು ಪ್ರದೇಶದಲ್ಲಿ 68% ಮತದಾನವಾಗಿದ್ದರೆ, ಕಣಿವೆಯಲ್ಲಿ ಆಗಿರುವುದು 34% ಮಾತ್ರ. ಅಂದರೆ ಕಾಶ್ಮೀರ ಕಣಿವೆಯಲ್ಲಿ ಜನಗಳ ವಿಶ್ವಾಸ ಗೆಲ್ಲುವುದು ಅದಕ್ಕೆ ಸಾಧ್ಯವಾಗಿಲ್ಲ.

ಪ್ಲಾಂಟೇಶನ್ ಕಾರ್ಮಿಕರು

ಪುಟ 11 ರಿಂದ

ಪ್ರಾರಂಭಿಸಿತು. ಡಾಕಾದಿಂದ ಪ್ರಕಟವಾಗುತ್ತಿದ್ದ ಮತ್ತೊಂದು ನಿಯತಕಾಲಿಕ 'ಡಾಕಾ–ಪ್ರಕಾಶ್' ಪ್ರತಿಭಟನೆಗೆ ನಾಂದಿ ಹಾಡಿತು.

ಶೋಷಣೆಯ ತೀವ್ರತೆಯು ಯುದ್ಧ–ಸಮಯದ ಉತ್ಕರ್ಷದೊಂದಿಗೆ ಸೇರಿ ಈ ಕೈಗಾರಿಕೆಗಳಿಗೆ ಕೆಲವು ಸಂದರ್ಭಗಳಲ್ಲಿ ಆಕಾಶದೆತ್ತರದ, 450 ಪ್ರತಿಶತದ ವರೆಗೆ ಲಾಭವನ್ನು ತಂದುಕೊಟ್ಟಿತು. ಈ ಅಸಾಧಾರಣ ಲಾಭದ ಹೊರತಾಗಿಯೂ, ಮಾಲಿಕರು ಕಾರ್ಮಿಕರ ವೇತನಕ್ಕೆ ಒಂದೇ ಒಂದು ಪೈಸೆಕೂಡ ಸೇರಿಸಲಿಲ್ಲ. ಆದರೆ ಯುದ್ಧದ ಕೊನೆಯಲ್ಲಿ ಕುಸಿತವುಂಟಾದಾಗ, ಕಾರ್ಮಿಕರು ಯಾವುದೇ ವೇತನವನ್ನು ಪಡೆಯಬಾರದು, ಆದರೆ ಕಡಿಮೆ ಭತ್ಯೆಯನ್ನು ಮಾತ್ರ ಪಡೆಯಬೇಕೆಂದು ಪ್ಲಾಂಟರಗಳು ಬಯಸಿದರು. ಪೂರ್ಣ ಪ್ರಮಾಣದ ವೇತನವನ್ನು ಪಡೆಯುತ್ತಿದ್ದಾಗ ಅಷ್ಟು ಕನಿಷ್ಟ ವೇತನದಲ್ಲಿ ಬದುಕುಳಿಯಲೂ ಒದ್ದಾಡುತ್ತಿದ್ದ ಕಾರ್ಮಿಕರು, ವೇತನವನ್ನು ಈಗ ದಿನಕ್ಕೆ 3 ಪೈಗೆ ಇಳಿಸಲಾದಾಗ ಮತ್ತಷ್ಟು ಸಂಕಷ್ಟಕ್ಕೆ ಒಳಗಾದರು.

1921 ರ ಆರಂಭದಲ್ಲಿ, ತೋಟ ಕಾರ್ಮಿಕರ ಆರ್ಥಿಕ ಸ್ಥಿತಿಯು ಗಂಭೀರ ಪ್ರಮಾಣವನ್ನು ಪಡೆದುಕೊಂಡಿತು. ಜೀವನ ವೆಚ್ಚವು ತುಂಬಾ ಹೆಚ್ಚಾಯಿತು ಮತ್ತು ವೇತನ ಹೆಚ್ಚಳಕ್ಕೆ ಸಾರ್ವತ್ರಿಕ ಬೇಡಿಕೆ ಮೂಡಿಬಂದಿತು. 1920ರ ಸೆಪ್ಟೆಂಬರ್ 6 ರಂದು ಡೂಮ್–ಡೂಮಾ ಕಂಪನಿಯ ತೋಟದ ಕಾರ್ಮಿಕರು ಕೆಟ್ಟ ಮತ್ತು ಸಾಕಾಗದ ಅಕ್ಕಿ ಸರಬರಾಜನ್ನು ವಿರೋಧಿಸಿ ಕೆಲಸ ಮಾಡಲು ನಿರಾಕರಿಸಿದಾಗ ಅಶಾಂತಿಯ ಮೊದಲ ಚಿಹ್ನೆಗಳು ಕಾಣಿಸಿಕೊಂಡವು. ಅಶಾಂತಿ ಹರಡಿ ಲಖಿಂಪುರ ಜಿಲ್ಲೆಯಲ್ಲಿ ಕೆಲವು ಘರ್ಷಣೆಗಳಿಗೆ ಕಾರಣವಾಯಿತು.


ಹೀಗೆ ಕಾರ್ಮಿಕರ ಸಹನೆ ಕೊನೆಗೊಳ್ಳುತ್ತಿತ್ತು. 1921 ರಲ್ಲಿ, ಸಾಮ್ರಾಜ್ಯಶಾಹಿ ಸರ್ಕಾರದ ವಿರುದ್ಧದ ಅಸಹಕಾರ ಚಳವಳಿಯ ಅಲೆಯು ಇಡೀ ದೇಶದಲ್ಲಿ ಹರಿಯುತ್ತಿದ್ದಾಗ, ಸಾವಿರಾರು ಚಹಾ ತೋಟ ಕಾರ್ಮಿಕರು ಸಹ ಈ ಗುಲಾಮಗಿರಿಯಿಂದ ಹೊರಬಂದು ಮನೆಗೆ ಮರಳಲು ನಿರ್ಧರಿಸಿದರು.

ಚಹಾ ತೋಟ ಕಾರ್ಮಿಕರಲ್ಲಿ ಟ್ರೇಡ್–ಯೂನಿಯನ್ ಪ್ರಜ್ಞೆ ಮತ್ತು ಸಂಘಟನೆಯ ಬೆಳವಣಿಗೆಯಲ್ಲಿ ಸಾಕಷ್ಟು ವಿಳಂಬವಿತ್ತು. ತಮ್ಮ ಮನೆಗಳಿಂದ ದೂರದಲ್ಲಿರುವ ಭಯಾನಕ ಒಂಟಿತನ, ಅಜ್ಞಾನ, ಶಿಕ್ಷಣದ ಕೊರತೆ ಮತ್ತು ಹೊರಗಿನ ರಾಜಕೀಯ ಮತ್ತು ಟ್ರೇಡ್ ಯೂನಿಯನ್ ಕಾರ್ಮಿಕರೊಂದಿಗಿನ ಸಂಪರ್ಕದ ತೊಂದರೆ, ಸಂಘಟನೆಯ ಯಾವುದೇ ಪ್ರಯತ್ನದ ವಿರುದ್ಧ ಮಾಲಿಕರ ತೀವ್ರ ಎಚ್ಚರ ಮತ್ತು ಪ್ರತೀಕಾರದ ಮನೋಭಾವ ಈ ವಿಳಂಬ ಪ್ರಕ್ರಿಯೆಗೆ ಕಾರಣವಾಗಿದೆ. ಆದರೂ ಬ್ರಿಟಿಶ್ ತೊಟದ ಮಾಲಿಕರಿಂದ ಶೋಷಣೆ, ಅವಮಾನ, ದೈಹಿಕ ಚಿತ್ರಹಿಂಸೆ ಮತ್ತು ಇತರ ಅನೇಕ ರೀತಿಯ ಸಂಕಟಗಳ ವಿರುದ್ಧದ ಪ್ರತಿರೋಧದ ಬಗ್ಗೆ ಅವರ ಪ್ರಾಥಮಿಕ ಉತ್ಸಾಹವು ಕ್ರಮೇಣವಾಗಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಒಟ್ಟಾಗಬೇಕೆಂಬ ಉನ್ನತ ಪ್ರಜ್ಞೆಗೆ ಕಾರಣವಾಯಿತು.

ಮೇ 1921 ರಲ್ಲಿ ನಡೆದಂತೆ ಸಾಮೂಹಿಕವಾಗಿ ಕೆಲಸದಿಂದ ದೂರವಿರುವ ಮತ್ತು ಚಹಾ ತೋಟಗಳನ್ನು ತ್ಯಜಿಸುವ ಅವರ ದೃಡ ನಿರ್ಧಾರವು ಈ ಪ್ರಜ್ಞೆಯ ಅಭಿವ್ಯಕ್ತಿಯನ್ನು ಪರಾಕಾಷ್ಠೆಗೆ ಕೊಂಡೊಯ್ದಿತು. ಆದಾಗ್ಯೂ, ಅದೇ ಸಮಯದಲ್ಲಿ, ಹಲವಾರು ಗಲಭೆ ಪ್ರಕರಣಗಳು ನಡೆದವು ಮತ್ತು 1921–22ರ ಅವಧಿಯಲ್ಲಿ, 96 ಕೂಲಿಗಳಿಗೆ ಕಠಿಣ ಜೈಲು ಶಿಕ್ಷೆ ವಿಧಿಸಲಾಯಿತು, 1925–26ರ ಈ ಸಂಖ್ಯೆ 24 ಆಗಿತ್ತು. ■

"ಮಹಾಡ್‌ನ ಕೆರೆಯಲ್ಲಿ ಎದ್ದ ಅಲೆಗಳು ಇನ್ನೂ ಅಪ್ಪಳಿಸುತ್ತಿವೆ, ಮನುಸ್ಮೃತಿಯನ್ನು ಸುಟ್ಟಬೆಂಕಿ ಈಗಲೂ ಉರಿಯುತ್ತಿದೆ": ದೇವನೂರ

ವಸಂತರಾಜ ಎನ್.ಕೆ.



"ಮಹಾಡ್‌ನ ಕೆರೆಯಲ್ಲಿ ಎದ್ದ ಅಲೆಗಳು ಇನ್ನೂ ಅಪ್ಪಳಿಸುತ್ತಿವೆ, ಮನುಸ್ಮೃತಿಯನ್ನು ಸುಟ್ಟಬೆಂಕಿ ಈಗಲೂ ಉರಿಯುತ್ತಿದೆ" ಎಂದು ದೇವನೂರ ಮಹಾದೇವ ಅವರು ಹೇಳಿದ್ದಾರೆ. ಅವರು ಡಿಸೆಂಬರ್ 19, 2020 (ಶನಿವಾರ) ರಂದು ಸಂಜೆ 5 ರಿಂದ ನಡೆದ ಆನ್ ಲೈನ್ ಸಭೆಯಲ್ಲಿ **'ಮಹಾಡ್ ಕೆರೆ ಸತ್ಯಾಗ್ರಹ – ದಲಿತ ಚಳುವಳಿಗಳ ಒರೆಗಲ್ಲು'** ಮತ್ತು **'ಮಹಾಡ್ – ಮೊದಲ ದಲಿತ ಬಂಡಾಯ'**– ಎಂಬ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡುತ್ತ ಮಾರ್ಮಿಕವಾಗಿ ಈ ಮಾತುಗಳನ್ನು ಹೇಳಿದರು. ಮಹಾಡ್‌ನಲ್ಲಿ 1927ರಲ್ಲಿ ಅಸ್ಪೃಶ್ಯತೆಯ ಸಿದ್ಧಾಂತ ಮತ್ತು ಆಚರಣೆಗಳ ವಿರುದ್ಧ ಸಮರ ಸಾರಿದ ಎರಡು ಸಮ್ಮೇಳನಗಳಲ್ಲಿ ಸಾವಿರಾರು ದಲಿತರು ನಿಷಿದ್ಧವಾಗಿದ್ದ ಚವದಾರ್ ಕೆರೆಯಲ್ಲಿ ನೀರು ಕುಡಿದದ್ದು ಮತ್ತು ಮನುಸ್ಮೃತಿಯ ಪ್ರತಿಯನ್ನು ಸುಟ್ಟದ್ದು – ಭಾರತದ ದಲಿತ ಚಳುವಳಿಯ ಈ ಎರಡು ಪ್ರಮುಖ ಮೈಲಿಗಲ್ಲುಗಳ ಕುರಿತು ಅವರು ಈ ಮಾತುಗಳನ್ನು ಹೇಳಿದ್ದು.

ಈ ಎರಡು ಪುಸ್ತಕಗಳನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದ್ದು ಇವು ಡಾ. ಆನಂದ ತೇಲ್ತುಂಬ್ಡೆ ಅವರು ಮಹಾಡ್ ಚಳುವಳಿ ಕುರಿತು ಇಂಗ್ಲೀಷಿನಲ್ಲಿ ಬರೆದ ಪುಸ್ತಕದ ಎರಡು ಭಾಗಗಳು. **'ಮಹಾಡ್ ಕೆರೆ ಸತ್ಯಾಗ್ರಹ – ದಲಿತ ಚಳುವಳಿಗಳ ಒರೆಗಲ್ಲು'** ಆ ಎರಡು ಸಮ್ಮೇಳನಗಳ ಪ್ರಧಾನ ಸಂಘಟಕರಾಗಿದ್ದ ಆರ್.ಬಿ.ಮೋರೆ ಅವರು ಮೂಲ ಮರಾಠಿಯಲ್ಲಿ ಬರೆದ (ಇದೇ ಹೆಸರಿನ) ಪುಸ್ತಕದ ಅನುವಾದ. ಆದರೆ ಜೊತೆಗೆ ಇದರಲ್ಲಿ ತೇಲ್ತುಂಬ್ಡೆ ಅವರು ಬರೆದ ದೀರ್ಘ ಮುನ್ನುಡಿ ಮತ್ತು ಹಿನ್ನುಡಿಗಳು ಇವೆ. **'ಮಹಾಡ್ – ಮೊದಲ ದಲಿತ ಬಂಡಾಯ'** ಪುಸ್ತಕದಲ್ಲಿ, ಇದೇ ಹೆಸರಿನ ತೇಲ್ತುಂಬ್ಡೆ ಅವರು ಬರೆದ ಪುಸ್ತಕದಲ್ಲಿ ಇರುವ ಇತರ ಅಧ್ಯಾಯಗಳು ಇದ್ದು, ಇದರಲ್ಲಿ ಮಹಾಡ್ ಚಳುವಳಿಯ ಇನ್ನಷ್ಟು ವಿಸ್ತೃತ ನಿರೂಪಣೆ ಮತ್ತು ವಿಶ್ಲೇಷಣೆಗಳು ಇವೆ.

ಈ ಎರಡು ಪುಸ್ತಕಗಳಲ್ಲಿ ಬರುವ ಎರಡು ಚಾರಿತ್ರಿಕ ಸಮ್ಮೇಳನಗಳಲ್ಲಿ ನಡೆದ ಎರಡು ಚಾರಿತ್ರಿಕ ಘಟನೆಗಳ ಸಾರಸತ್ವವನ್ನು ದೇವನೂರ ಅವರು ತಮ್ಮ ಮಾತುಗಳಲ್ಲಿ ಸೆರೆ ಹಿಡಿದದ್ದು ಹೀಗೆ – "1927, ಮಾರ್ಚ್ 20. ಅಂದು ಅಂಬೇಡ್ಕರ್ ಅವರು ಮಹಾಡ್‌ನ ಚಾವದಾರ್ ಕೆರೆಯ ನೀರನ್ನು ಸ್ಪರ್ಶಿಸಿ ಆ ನೀರನ್ನು ಕುಡಿಯುತ್ತಾರೆ. ಆ ಒಂದು ಕ್ರಿಯೆಯಲ್ಲಿ ಆಗ ಎದ್ದ ಅಲೆಗಳು ಇನ್ನೂ ಇಂದಿಗೂ ಭಾರತದಲ್ಲಿ ಅಪ್ಪಳಿಸುತ್ತಲೇ ಇವೆ. ಈ ಸಂದರ್ಭದಲ್ಲಿ ದಲಿತರ ಮೇಲೆ ನಡೆದ ಹಲ್ಲೆಯನ್ನು ಪ್ರತಿಭಟಿಸಲು ಹಾಗೂ ಸತ್ಯಾಗ್ರಹವನ್ನು ಮುಂದುವರಿಸಲು 1927ರ ಡಿಸೆಂಬರ್ ಕೊನೆಯ ವಾರದಲ್ಲಿ ಸತ್ಯಾಗ್ರಹವನ್ನು ಹಮ್ಮಿಕೊಂಡಾಗ, ಕೆಲವು ಜಾತಿವಾದಿಗಳು ಚಾವದಾರ್ ಕೆರೆ ಖಾಸಗಿ ಆಸ್ತಿ ಎಂದು ವಿತಂಡವಾದ ಮಾಡಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಬಿಡುತ್ತಾರೆ. ಆಗ ಆ ಸತ್ಯಾಗ್ರಹವು, ಮೆರವಣಿಗೆ ಸಮಾವೇಶವಾಗಿ ಬದಲಾವಣೆಯಾಗುತ್ತದೆ. ಹತ್ತು ಸಹಸ್ರಕ್ಕೂ ಹೆಚ್ಚಾಗಿ ಸೈನಿಕರೇನೊ ಎಂಬಂತೆ ಶಿಸ್ತಾಗಿ ದೃಢನಿರ್ಧಾರದಿಂದ ದಲಿತ ಸಮುದಾಯ ಆ ಸಮಾವೇಶದಲ್ಲಿ ಭಾಗವಹಿಸುತ್ತಾರೆ. ಆ ಸಮಾವೇಶ ಮೂರ್‍ನಾಲ್ಕು ದಿನಗಳ ಕಾಲ ಜರುಗುತ್ತದೆ. ಇಲ್ಲೇ, ಈ ಸಮಾವೇಶದಲ್ಲೆ ಮನುಸ್ಮೃತಿಯ ಶವ ಸಂಸ್ಕಾರದ ವಿಧಿಗಳನ್ನು ಅಸ್ಪೃಶ್ಯ ವರ್ಗದ ಸಂತರು ಮತ್ತು ಸನ್ಯಾಸಿಗಳು ನಡೆಸಿಕೊಡುತ್ತಾರೆ. ಇದಾದ ಮೇಲೆ ಮನುಸ್ಮೃತಿಯ ಅಮಾನವೀಯ ಭಾಗಗಳನ್ನು ಸುಡಲಾಗುತ್ತದೆ. "ಉದ್ದೇಶಿತ ಸತ್ಯಾಗ್ರಹವು ಚಾವ್‌ದಾರ್ ಕೆರೆಯ ಬಳಿ ನಡೆಯದೇ ಇದ್ದರೂ, ಸಮ್ಮೇಳನವು ಮನುಸ್ಮೃತಿಯನ್ನು ಸುಡುವುದರಲ್ಲಿ ಮತ್ತು ಆ ಮೂಲಕ ಸಾಂಕೇತಿಕವಾಗಿ ಜಾತಿವ್ಯವಸ್ಥೆಯ ಸೈದ್ಧಾಂತಿಕ ಮೂಲವನ್ನೇ ನಿರಾಕರಿಸುವುದರಲ್ಲಿ ಯಶಸ್ವಿಯಾಯಿತು". ಆ ಅಂದು ಮನುಸ್ಮೃತಿಯನ್ನು ಸುಟ್ಟಬೆಂಕಿ ಈಗಲೂ ಸುಡುತ್ತಾ ಭಾರತದ ಉದ್ದಗಲಕ್ಕೂ ಉರಿಯುತ್ತಿದೆ."

ಮಹಾಡ್ ಕಂಪನಗಳು ಮತ್ತು ಬಿತ್ತನೆ

ಎರಡು ಪುಸ್ತಕಗಳನ್ನು ಓದಿದ ಮೇಲಿನ ಅವರ ಪ್ರತಿಕ್ರಿಯೆ ಹೀಗಿದೆ : "ನಾನು ಬೆರಗಾದೆ. ಇದೊಂದು, ಒಮ್ಮೆಗೆ ಹತ್ತು ಡಾಕ್ಟರೇಟ್ ಕೊಟ್ಟರೂ ಇನ್ನೂ ಮಿಗಿಲಾದ ಬೆಲೆಯುಳ್ಳ ಸಂಶೋಧನಾ ಗ್ರಂಥ ಅನ್ನಿಸಿಬಿಟ್ಟಿತು. ಈ ಕೃತಿಯಲ್ಲಿ ಸಂಶೋಧನೆ ಹೇಗಿದೆ ಎಂದರೆ ಗತಕಾಲದ ಮಹಾಡ್ ಘಟನೆಯ ತಳ ಮುಟ್ಟಿ, ಅದರ ಆಳ–ಅಗಲ ಅದರ ವಿಸ್ತಾರವನ್ನು ಮುಟ್ಟಿಮುಟ್ಟಿ ನೋಡುತ್ತಾ ಅದಕ್ಕೆ ಜೀವ ತಂದು ಕೊಟ್ಟು ಬಿಡುತ್ತಾರೆ."

ಮುಂದುವರೆದು ಅವರು ಪುಸ್ತಕಗಳಲ್ಲಿ ಏನಿದೆ ಎಂಬುದರ ಕುರಿತು ಹೀಗೆಂದರು: "ತೇಲ್ತುಂಬ್ಡೆ ಮಹಾಡ್ ಸತ್ಯಾಗ್ರಹವನ್ನು ಜಾಗತಿಕ ಆಂದೋಲನಗಳ ಇತಿಹಾಸದಲ್ಲಿಟ್ಟು ತೂಕ ಮಾಡುತ್ತಾರೆ. ಈ ಗ್ರಂಥದ ಪುಟಪುಟಗಳಲ್ಲೂ ಆ ಕಾಲದ ಉಲ್ಲೇಖಗಳು, ಟಿಪ್ಪಣಿಗಳು, ಡೈರಿ ದಾಖಲಾತಿ, ಸರ್ಕಾರದ ಗೌಪ್ಯವರದಿಗಳು, ಪತ್ರಿಕಾ ವರದಿಗಳು, ಠರಾವುಗಳು, ಯಥಾವತ್ ಭಾಷಣಗಳು, ಭಾಗವಹಿಸಿದ ವ್ಯಕ್ತಿ/ಸಂಘಟನೆಗಳ ಪರಿಚಯಗಳು, ಆ ಸಂದರ್ಭದಲ್ಲಿ ನಡೆದ ಮಾತುಕತೆಗಳು, ಕೋರ್ಟ್ ಆಜ್ಞೆಯ ವಿವರಗಳು, ಅಂದಿನ ಜನ ಜೀವನದ ರೀತಿ ರಿವಾಜು ಆಲೋಚನೆಗಳು.. ಹೀಗೆ ಹೀಗೆ ಎಲ್ಲವೂ ಇಲ್ಲಿ ಅಡಕವಾಗಿದೆ. ಹೇಳುವುದಾದರೆ, ತೇಲ್ತುಂಬ್ಡೆ ಅಲ್ಲ, ಇಲ್ಲಿ ದಾಖಲೆಗಳು ಮಾತಾಡುತ್ತವೆ. ಇಂತಹ ಪ್ರಕಾರ ಗೊತ್ತಿಲ್ಲದ ನನಗೆ ಇದೊಂದು ವಿಸ್ಮಯವೆ."

ಮಹಾಡ್ ಚಳುವಳಿ ಅಂಬೇಡ್ಕರ್ ಅವರ ಬದುಕು–ಕೆಲಸಗಳಲ್ಲಿ ಮತ್ತು ಮುಂದಿನ ದಲಿತ ಚಳುವಳಿಯ ಮೇಲೆ ಬೀರಿದ ಪರಿಣಾಮಗಳನ್ನು ದೇವನೂರ ಹೀಗೆ ಗುರುತಿಸುತ್ತಾರೆ : "ಅಂಬೇಡ್ಕರ್‌ರವರ ಅಂತರಂಗದಲ್ಲಿ ಮಹಾಡ್ ಅನುಭವ ಎಬ್ಬಿಸಿದ ಕಂಪನಗಳು ಅವರ ಮುಂದಿನ ಹೆಜ್ಜೆಗಳನ್ನು ನಿರ್ಧರಿಸುವುದರಲ್ಲಿ ಭೂಮಿಕೆಯಾಗುತ್ತವೆ ಎಂದೂ ಅನ್ನಿಸುತ್ತದೆ. ಯಾಕೆಂದರೆ, ಮಹಾಡ್ ಸತ್ಯಾಗ್ರಹದ ನಂತರ ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ತ್ಯಜಿಸುವ ಮಾತುಗಳನ್ನಾಡತೊಡಗಿದರು. .. ಇದಾದ ನಂತರ ಬಹಳ ಬೇಗನೇ ಅಂಬೇಡ್ಕರ್ ರಾಜಕೀಯದ ಕಡೆ ತಮ್ಮ ಲಕ್ಷ್ಯವನ್ನು ಬದಲಾಯಿಸಿದರು. ಮುಂದೆ ಅಂಬೇಡ್ಕರ್, ಮಹಾನಾಯಕ ಅಂಬೇಡ್ಕರ್ ಆಗಿ ಬೆಳೆದು ನಿಲ್ಲುವಂತಾಗಲು ಈ ಮಹಾಡ್ ಬಿತ್ತನೆ ಕಾರಣವೆನ್ನಬಹುದು."

"ಸಮಾಜವನ್ನು ಮುನ್ನಡೆಸಲು ಹೋರಾಟ ಮಾಡುವ ಹೋರಾಟಗಾರರಿಗೆ, ಒಂದು ಹೋರಾಟವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂದು ನೋಡಲು ಈ ಗ್ರಂಥ ಕಲಿಸುತ್ತದೆ, ಹಾಗೇ ಸಂಶೋಧನ ವಿದ್ಯಾರ್ಥಿಗಳು ತಾವು ಸಂಶೋಧನೆಯನ್ನು ಕೈಗೊಳ್ಳುವ ಮುನ್ನ ಈ ಕೃತಿಯನ್ನು ಪಠ್ಯವಾಗಿ ಅಧ್ಯಯನ ಮಾಡಿದರೆ ಅದು ಅವರನ್ನು ಕೈಹಿಡಿದು ಮುನ್ನಡೆಸುತ್ತದೆ ಎಂದೆನ್ನಿಸಿತು." ಎಂಬುದು ಈ ಪುಸ್ತಕಗಳ ಮಹತ್ವದ ಕುರಿತು ದೇವನೂರ ಅವರ ಅಭಿಪ್ರಾಯ."


ದೇವನೂರ ಮಹಾದೇವ ಅವರು ಪುಸ್ತಕ ಬಿಡುಗಡೆ ಮಾಡಿದ ನಂತರ, ಎರಡನೆಯ ಮಹಾಡ್ ಸಮ್ಮೇಳನದಲ್ಲಿ ಅಂಬೇಡ್ಕರ್ ನಾಯಕತ್ವದಲ್ಲಿ ಮನುಸ್ಮೃತಿ ಸುಡುವ ಮತ್ತು ಅದಕ್ಕಿಂತ ಮೊದಲು ಅವರ ಭಾಷಣದ (ಜಬ್ಬಾರ್ ಪಟೇಲ್ ಅವರ 'ಅಂಬೇಡ್ಕರ್' ಸಿನಿಮಾದ ಭಾಗ) ದೃಶ್ಯಗಳಿರುವ ವಿಡಿಯೊವನ್ನು ತೋರಿಸಲಾಯಿತು.

'ದಲಿತರು ಕಲೆಕ್ಟರ್ ನಿಷೇಧಾಜ್ಞೆ ಧಿಕ್ಕರಿಸಿ ಮಹಾಡ್ ಕೆರೆಯಿಂದ ಮತ್ತೆ ನೀರು ಕುಡಿದಿದ್ದರೆ?'

ಬಿಡುಗಡೆಯಾದ ಪುಸ್ತಕಗಳ ವಿವರವಾದ ಪರಿಚಯ ಮಾಡುತ್ತಾ ಚಿಂತಕ ಡಾ. ಬಂಜಗೆರೆ ಜಯಪ್ರಕಾಶ್ ಅವರು, ಎರಡು ಸಮ್ಮೇಳನಗಳ ಎರಡು ಚಾರಿತ್ರಿಕ ಘಟನೆಗಳ ಸ್ಥೂಲ ನಿರೂಪಣೆಯ ಜೊತೆಗೆ ತೇಲ್ತುಂಬ್ಡೆ ಅವರ ವಿಶ್ಲೇಷಣೆಯ ಮುಖ್ಯ ಅಂಶಗಳ ಕುರಿತು ಮಾತನಾಡಿದರು. ಪ್ರಮುಖವಾಗಿ ಮೊದಲನೆಯ ಸಮ್ಮೇಳನದಲ್ಲಿ ದಲಿತರು "ತಮ್ಮ ಮೇಲಾದ ಹಲ್ಲೆಗೆ ಪ್ರತೀಕಾರ ತೀರಿಸಿಕೊಂಡಿದ್ದರೆ?" ಮತ್ತು ಎರಡನೆಯ ಸಮ್ಮೇಳನದಲ್ಲಿ ದಲಿತರು ಕೋರ್ಟಿನ ತಡೆಯಾಜ್ಞೆ ಮತ್ತು ಕಲೆಕ್ಟರ್ ನಿಷೇಧಾಜ್ಞೆ ಧಿಕ್ಕರಿಸಿ ಸತ್ಯಾಗ್ರಹ ಮಾಡಿ ಕೆರೆಯಿಂದ ಮತ್ತೆ ನೀರು ಕುಡಿದಿದ್ದರೆ" ದೇಶದ ಮತ್ತು ದಲಿತರ ಚರಿತ್ರೆಯ ದಿಕ್ಕೇ ಬದಲಾಗುತ್ತಿತ್ತು. ದಲಿತರು ಈ ಎರಡು ಪ್ರಕರಣಗಳಲ್ಲಿ ತಮ್ಮ ನಾಗರಿಕ ಹಕ್ಕುಗಳನ್ನು ಸಾಧಿಸುವಲ್ಲಿ ತಡೆಯೊಡ್ಡಿ ಸರಕಾರ ಮತ್ತು ಆಡಳಿತ ಹಾಕಿದ ಕಾನೂನಿನ ನಿರ್ಬಂಧಗಳನ್ನು ಧಿಕ್ಕರಿಸಿ ಪ್ರತಿರೋಧ ತೋರದೆ ಹೋಗಿದ್ದು ಆಗಲೂ ಮುಂದೆನೂ ದಲಿತ ಚಳುವಳಿಯ ಸ್ಥೈರ್ಯ ಮತ್ತು ಚೈತನ್ಯವನ್ನು ಕುಗ್ಗಿಸಿತು. ಇದಕ್ಕೆ ಕಾರಣ ಗಾಂಧೀಜಿ ಅವರ ಸತ್ಯಾಗ್ರಹ ಮತ್ತು ಅಹಿಂಸೆಯ ವಿಧಾನಗಳಲ್ಲಿ ಅಂಬೇಡ್ಕರ್ ಅವರಿಗೆ ಇದ್ದ ವಿಶ್ವಾಸ ಕಾರಣವಾಯಿತು ಎನ್ನುವ ತೇಲ್ತುಂಬ್ಡೆ ಅವರ ವಾದದತ್ತ ಬಂಜಗೆರೆ ಗಮನ ಸೆಳೆದರು.

ಇದಲ್ಲದೆ ಈ ಎರಡು ಪುಸ್ತಕಗಳಲ್ಲಿ ಹೇರಳವಾಗಿ ಸಿಗುವ ಮಹಾಡ್ ಚಳುವಳಿಯ ಸವರ್ಣೀಯರ ಮತ್ತು ಬ್ರಿಟಿಷ್ ಇಬ್ಬಂದಿತನ, ಸವರ್ಣೀಯರ ಮನ ಪರಿವರ್ತನೆಯಿಂದ ಅವರ ವಿರುದ್ಧ ಪ್ರತಿರೋಧದ ಚಳುವಳಿಯ ಅಗತ್ಯ ಮನಗಾಣುವ ಅಂಬೇಡ್ಕರ್ ಮತ್ತು ದಲಿತ ಚಳುವಳಿಯ ಬೆಳವಣಿಗೆ ಮುಂತಾದ ಹಲವು ಒಳಸುಳಿಗಳನ್ನೂ ಮತ್ತು ಮುಖಗಳನ್ನೂ ಬಂಜಗೆರೆ ಗುರುತಿಸಿದರು. ಮಹಾಡ್ ಚಳುವಳಿ ಮಹಾಡ್ ನಲ್ಲೇ ಯಾಕೆ ಹುಟ್ಟಿತು? ಚಳುವಳಿಗೆ ಯಾವ ರೀತಿಯ ತಯಾರಿ ನಡೆಸಲಾಯಿತು? ಯಾವ ರೀತಿಯ ಅಡೆ ತಡೆಗಳು ಬಂದವು? ಕಾರ್ಯಕರ್ತರು, ಇತರ ಸಂಪನ್ಮೂಲಗಳನ್ನು ಹೇಗೆ ಹೊಂದಿಸಲಾಯಿತು? ಮೊದಲ ಸಮ್ಮೇಳನಕ್ಕೆ 3 ಸಾವಿರ ಮತ್ತು ಎರಡನೆಯ ಸಮ್ಮೇಳನಕ್ಕೆ 15 ಸಾವಿರ ಪ್ರತಿನಿಧಿಗಳನ್ನು ಹೇಗೆ ಅಣಿ ನೆರೆಸಲಾಯಿತು? ಚಳುವಳಿಗೆ ಸವರ್ಣೀಯರ ವಿಭಾಗಗಳು ಜಾತಿಗಳು, ಆಡಳಿತ ಇತ್ಯಾದಿ ಹೇಗೆ ಪ್ರತಿಕ್ರಿಯಿಸಿದರು? ಇತ್ಯಾದಿಗಳ ವಿವರಗಳನ್ನು ಒದಗಿಸುವ ಮೂಲಕ ಈ ಪುಸ್ತಕಗಳು ಒಂದು ಜನಪರ ಚಳುವಳಿ ಕಟ್ಟಬೇಕಾದರೆ ಬೇಕಾದ ತಯಾರಿ, ಎದುರಿಸಬೇಕಾದ ಅಡೆತಡೆಗಳು, ಕಾರ್ಯಕರ್ತರು ಮತ್ತು ಜನಸಮೂಹಗಳನ್ನು ಅಣಿ ನೆರೆಸುವ ವಿಧಾನ, ಚಳುವಳಿಯ ಶತ್ರುಗಳ ಪ್ರತಿಕ್ರಿಯೆಯನ್ನು ಮುಂಗಂಡು ನಿರ್ವಹಣೆ ಮಾಡಬೇಕಾದ ವಿಧಾನ ಇತ್ಯಾದಿ ಸುದೀರ್ಘ ಪ್ರಯಾಸಕರ ಕೆಲಸದ ಪರಿಚಯ ಮಾಡಿಸುತ್ತದೆ. ಚಳುವಳಿಕಾರರು, ಹೋರಾಟಗಾರರ ಕೈಪಿಡಿ ಆಗುತ್ತದೆ ಎಂದು ಅವರು ಅಭಿಪ್ರಾಯ ಪಟ್ಟರು.

ದೇವನೂರ ಮಹಾದೇವ ಮತ್ತು ಬಂಜಗೆರೆ ಜಯಪ್ರಕಾಶ ಇಬ್ಬರು ಇಂತಹ ಅದ್ಭುತ ಕೃತಿಗಳನ್ನು 'ಪ್ರಕಟಿಸುವ ಸಾಹಸ ಮಾಡಿದ್ದಕ್ಕೆ' ಮತ್ತು 'ಸಕಾಲಿಕವಾಗಿ ಅಚ್ಚುಕಟ್ಟಾಗಿ ಪ್ರಕಟಿಸಿದ್ದಕ್ಕೆ' ಕ್ರಿಯಾ ಮಾಧ್ಯಮವನ್ನು ಅಭಿನಂದಿಸಿದರು. ಇಬ್ಬರೂ 'ಇದು ಅನುವಾದವೇ ಅಲ್ಲ ಅನ್ನುವಷ್ಟು ಅನುರೂಪವಾಗಿ



ಕನ್ನಡೀಕರಿಸಿದ' ಪ್ರೊ. ಅಬ್ದುಲ್ ರೆಹಮಾನ್ ಪಾಷ ಅವರನ್ನೂ ಅಭಿನಂದಿಸಿದರು.

ಅನುವಾದಕ ಪ್ರೊ. ಅಬ್ದುಲ್ ರೆಹಮಾನ್ ಪಾಷ ಮಾತನಾಡಿ ಈ ಕೃತಿಗಳು ಐತಿಹಾಸಿಕವಾಗಿದ್ದು ಈ ಕೃತಿಗಳಿಂದ ಪ್ರೇರೇಪಿತನಾಗಿದ್ದೇನೆ. ಮಹಾಡ್ ಗೆ ಭೇಟಿ ನೀಡಿ ಚೌದಾರ್ ಕೆರೆ ನೋಡಲು ತೀರ್ಮಾನಿಸಿದ್ದೇನೆ. ಈ ಘಟನಾವಳಿ ಆಧರಿಸಿ ಒಂದು ಕಾದಂಬರಿ ಬರೆಯಲು ಚಿಂತಿಸಿದ್ದೇನೆ. ಈ ಕೃತಿಗಳನ್ನು ಆಧರಿಸಿ ಸಿನಿಮಾ ಮಾಡುವ ಆಸೆಯೂ ಮೂಡಿದೆ ಎಂದು ಹೇಳಿದರು.

ಪುಸ್ತಕ ಬಿಡುಗಡೆ ಮತ್ತು ಪರಿಚಯದ ಕಾರ್ಯಕ್ರಮದ ನಿರೂಪಣೆಯನ್ನು ಮಹಾಂತೇಶ್ ಕೆ ಅವರು ಮಾಡಿದರು. ಚಿಂತನ್ ವಿಕಾಸ ಅವರು ಕಾರ್ಯಕ್ರಮದ ಮೊದಲಿಗೆ ಮತ್ತು ಕೊನೆಗೆ ಹಾಡುಗಳನ್ನು ಹಾಡಿದರು.

ಎರಡು ಮಹಾಡ್ ಪುಸ್ತಕಗಳ ಬಿಡುಗಡೆ ಜೊತೆಗೆ **"ಮಹಾಡ್' ಅರಿವು ಮತ್ತು ಜಾತಿ–ಅಸ್ಪೃಶ್ಯತೆ ವಿನಾಶಕ್ಕಾಗಿ ಚಳುವಳಿ'** ಎಂಬ ವಿಚಾರ ಸಂಕಿರಣವನ್ನೂ ಹಮ್ಮಿಕೊಳ್ಳಲಾಗಿತ್ತು. ಈ ವಿಚಾರ ಸಂಕಿರಣದ ನಿರೂಪಣೆ ಮಾಡಿದ ನಾಗರಾಜ ಎನ್. ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಮಹಾಡ್ ಪುಸ್ತಕಗಳಲ್ಲಿ ಮೂಡಿ ಬಂದಿರುವ ಒಟ್ಟು "ಮಹಾಡ್ ಅರಿವು" ಜಾತಿ–ಅಸ್ಪೃಶ್ಯತೆಯ ವಿನಾಶದತ್ತ ಚಳುವಳಿಗೆ ಹೊಸ ಸ್ಫೂರ್ತಿ ದಿಕ್ಕು ದೆಸೆ ಕೊಡಬಲ್ಲದು ಎಂದರು. ಇಂತಹ ಚಿಂತನ ಮಂಥನಕ್ಕೆ ಸಾಕಷ್ಟು ಸಮಯ ಬೇಕು. ಇಂದಿನ ಅಸಹಜ ಸ್ಥಿತಿಯಲ್ಲಿ ಅದು ಕಷ್ಟ ಸಾಧ್ಯವಾದರೂ, ಒಂದು ವಿಚಾರ ಸಂಕಿರಣ ಅನಿವಾರ್ಯವೆಂದು ಭಾವಿಸಿ ಅದನ್ನು ಸಂಘಟಿಸಲಾಗಿದೆ. ಜಾತಿ–ಅಸ್ಪೃಶ್ಯತೆಯ ವಿನಾಶದತ್ತ ಚಳುವಳಿಗೆ ಸಂಬಂಧಿತ ಪ್ರಮುಖ ಅಗತ್ಯಗಳಾದ ಪ್ರಬಲ ದಲಿತ ಚಳುವಳಿ ಮತ್ತು ಎಡ–ದಲಿತ ಚಳುವಳಿಯ ಐಕ್ಯ ಕಾರ್ಯಾಚರಣೆ ಗಳ ಕುರಿತು ಎರಡು ಸಂವಾದಗಳನ್ನು ಏರ್ಪಡಿಸಲಾಗಿದೆ ಎಂದರು.

"ಮಹಾಡ್'ನಿಂದ ದಲಿತ ಚಳುವಳಿ ಏನು ಕಲಿಯಬಹುದು?" ಎಂಬ ಮೊದಲ ಸಂವಾದದಲ್ಲಿ ಡಾ. ಡಿ.ಜಿ.ಸಾಗರ್, ಲಕ್ಷ್ಮೀನಾರಾಯಣ ನಾಗವಾರ, ಮೋಹನರಾಜ್ ಭಾಗವಹಿಸಿ ಮಾತನಾಡಿದರು. **"ದಲಿತ–ಎಡ ಚಳುವಳಿಗಳ ಐಕ್ಯತೆಗೆ 'ಮಹಾಡ್'ನ ಪಾಠಗಳು"** ಎಂಬ ಇನ್ನೊಂದು ಸಂವಾದದಲ್ಲಿ **ಡಾ. ರತಿ ರಾವ್, ಮಾವಳ್ಳಿ ಶಂಕರ್, ಗೋಪಾಲಕೃಷ್ಣ ಅರಳಹಳ್ಳಿ** ಭಾಗವಹಿಸಿ ಮಾತನಾಡಿದರು. ಎರಡು ಸಂವಾದಗಳ ನಿರೂಪಣೆಯನ್ನು ನಾಗರಾಜ ಎನ್. ನಿರ್ವಹಿಸಿದರು. ಕ್ರಿಯಾ ಮಾಧ್ಯಮದ ಚಂದ್ರಶೇಖರ್ ಜಿ ಅವರು ವಂದನಾರ್ಪಣೆ ಮಾಡಿದರು. ■

10 ನೇ ದಿನಕ್ಕೆ ಕಾಲಿಟ್ಟ ನಿರಂತರ ಧರಣಿ..........

ಪುಟ 16 ರಿಂದ



6ನೇ ದಿನದ ಧರಣಿ

ಸಂಚಾಲಕ ಹಾಗೂ ಹಿರಿಯ ಹೋರಾಟಗಾರ ಮಾವಳ್ಳಿ ಶಂಕರ್ ಉದ್ಘಾಟಿಸಿ ಮಾತನಾಡಿದ ಅವರು ಸುಳ್ಳು ಪ್ರಚಾರ ಹಾಗೂ ಕೋಮುವಾದದ ಮೂಲಕ ಅಡ್ಡದಾರಿಯಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರ ಜನರನ್ನು ಮರಳು ಮಾಡುತ್ತಿದೆ. ಮತ ಖರೀದಿ ಮತ್ತು ವಿರೋಧ ಪಕ್ಷಗಳ ಶಾಸಕರ ಖರೀದಿಯನ್ನೇ ತನ್ನ ರಾಜಕೀಯ ಕಾರ್ಯತಂತ್ರ ಮಾಡಿಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾನಿ ಉಂಟು ಮಾಡುತ್ತಿದೆ.

ಈ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಬಂಡವಾಳಶಾಹಿ ಪರ ಧೋರಣೆಗಳನ್ನು ಅನುಸರಿಸುತ್ತಾ ದುರ್ಬಲ ವರ್ಗಗಳ ಹಕ್ಕು ನಿರಾಕರಿಸುವ ಕಾಯ್ದೆಗಳನ್ನು ಮಾಡುತ್ತಿದೆ. ನೋಟು ರದ್ದು, ಜಿಎಸ್‌ಟಿ ಯಂತೆಯೇ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿ ಕೊಡುವ ಉದ್ದೇಶವನ್ನೇ ಈ ಕೃಷಿ ಕಾಯ್ದೆಗಳು ಹೊಂದಿವೆ. ಇದರಿಂದ ಕೋಟ್ಯಾಂತರ ಜನರ ಬದುಕು ದಿವಾಳಿಯಾಗಲಿದೆ. ಇದರ ವಿರುದ್ಧ ದೆಹಲಿಯಲ್ಲಿ ಸುಮಾರು 40 ಜನ ಹೋರಾಟ ನಿರತ ರೈತರು ಹುತಾತ್ಮರಾಗಿದ್ದರೂ ಅಂಜದೇ ಹೋರಾಡುತ್ತಿರುವ ಬೆಂಬಲಕ್ಕೆ ಇಡೀ ದೇಶದ ಶ್ರಮಿಕರು ನಿಲ್ಲಬೇಕು ಎಂದು ಕರೆ ನೀಡಿದರು.

ಪ್ರತಿಭಟನೆ ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕೆ. ಮಹಾಂತೇಶ್, ಕೆ.ಎನ್. ಉಮೇಶ್, ರಾಜ್ಯ ಉಪಾಧ್ಯಕ್ಷೆ ಲೀಲಾವತಿಯವರು ಕೃಷಿ ಕಾಯ್ದೆಗಳ ಅಪಾಯಗಳ ಕುರಿತು ಮಾತಾನಾಡಿದರು.

ಇಂದಿನ ಪ್ರತಿಭಟನಾ ಧರಣಿಯಲ್ಲಿ ಯಶವಂತಪುರ ಎಪಿಎಂಸಿ ಯಾರ್ಡ್ ಮಂಡಿ ಹಮಾಲರ ಸಂಘದ ಅಧ್ಯಕ್ಷರಾದ ಮೂರ್ತಿ, ಕಾರ್ಯದರ್ಶಿ ಕುಮರೇಷನ್, ಉಪಾಧ್ಯಕ್ಷ ವೇಲು ಮುರುಗನ್, ಮಹಿಳಾ ಹಮಾಲಿ ಕಾರ್ಮಿಕರ ನಾಯಕಿ ತಂಗಮ್ಮ, ಮುಖಂಡ ಅಣ್ಣಾದೊರೈ, ಕಟ್ಟಡ ಕಾರ್ಮಿಕ ಸಂಘಟನೆ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ವೀರಮಣಿ, ಜಿಲ್ಲಾ ಮುಖಂಡರಾದ ಹರೀಶ್, ದಲಿತ ಹಕ್ಕುಗಳ ಹೋರಾಟ ಸಮಿತಿ ಮುಖಂಡ ಶರಣಪ್ಪ, ಕೆಪಿಆರ್‌ಎಸ್ ನ ಟಿ. ಯಶವಂತ, ಕರ್ನಾಟಕ ಜನಶಕ್ತಿಯ ರವಿ ಮೋಹನ್ ಮುಂತಾದವರು ಭಾಗವಹಿಸಿದ್ದರು.

ಯಶವಂತಪುರ ಎಪಿಎಂಸಿ ಹಮಾಲಿ ಕಾರ್ಮಿಕರಿಂದ ಧರಣಿ ಸತ್ಯಾಗ್ರಹ

ಸಿಐಟಿಯು ನೇತೃತ್ವದ ಎಪಿಎಂಸಿ ಯಶವಂತಪುರ ಮಾರುಕಟ್ಟೆ ಹಮಾಲಿ ಕಾರ್ಮಿಕರು ಭಾಗವಹಿಸಿದ್ದ ಧರಣಿಯನ್ನು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಹಾಗೂ ಹಿರಿಯ ಹೋರಾಟಗಾರ ಮಾವಳ್ಳಿ ಶಂಕರ್ ಉದ್ಘಾಟಿಸಿದರು.

ಸುಳ್ಳು ಪ್ರಚಾರ ಹಾಗೂ ಕೋಮುವಾದದ ಮೂಲಕ ಅಡ್ಡದಾರಿಯಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರ ಜನರನ್ನು ಮರಳು ಮಾಡುತ್ತಿದೆ. ಮತ ಖರೀದಿ ಮತ್ತು ವಿರೋಧ ಪಕ್ಷಗಳ ಶಾಸಕರ ಖರೀದಿಯನ್ನೇ ತನ್ನ ರಾಜಕೀಯ ಕಾರ್ಯತಂತ್ರ ಮಾಡಿಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾನಿ ಉಂಟು ಮಾಡುತ್ತಿದೆ.

ಈ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಬಂಡವಾಳಶಾಹಿ ಪರ ಧೋರಣೆಗಳನ್ನು ಅನುಸರಿಸುತ್ತಾ ದುರ್ಬಲ ವರ್ಗಗಳ ಹಕ್ಕು ನಿರಾಕರಿಸುವ ಕಾಯ್ದೆಗಳನ್ನು ಮಾಡುತ್ತಿದೆ. ನೋಟು ರದ್ದು, ಜಿಎಸ್‌ಟಿ ಯಂತೆಯೇ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿ ಕೊಡುವ ಉದ್ದೇಶವನ್ನೇ ಈ ಕೃಷಿ ಕಾಯ್ದೆಗಳು ಹೊಂದಿವೆ. ಇದರಿಂದ ಕೋಟ್ಯಾಂತರ ಜನರ ಬದುಕು ದಿವಾಳಿಯಾಗಲಿದೆ. ಇದರ ವಿರುದ್ಧ ದೆಹಲಿಯಲ್ಲಿ ಸುಮಾರು 40 ಜನ ಹೋರಾಟ ನಿರತ ರೈತರು ಹುತಾತ್ಮರಾಗಿದ್ದರೂ ಅಂಜದೇ ಹೋರಾಡುತ್ತಿರುವ ಬೆಂಬಲಕ್ಕೆ ಇಡೀ ದೇಶದ ಶ್ರಮಿಕರು ನಿಲ್ಲಬೇಕು ಎಂದು ಕರೆ ನೀಡಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕೆ. ಮಹಾಂತೇಶ್, ಕೆ.ಎನ್. ಉಮೇಶ್, ರಾಜ್ಯ ಉಪಾಧ್ಯಕ್ಷೆ ಲೀಲಾವತಿ ಕೆಪಿಆರ್‌ಎಸ್ ನ ಟಿ. ಯಶವಂತ ಕೂಡ ಕೃಷಿ ಕಾಯ್ದೆಗಳ ಅಪಾಯಗಳ ಕುರಿತು ಮಾತಾನಾಡಿದರು.

ಧರಣಿಯ ನೇತೃತ್ವವನ್ನು ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯ ಅಧ್ಯಕ್ಷರಾದ ಕೆ. ಮಹಾಂತೇಶ್, ಯಶವಂತಪುರ ಎಪಿಎಂಸಿ ಯಾರ್ಡ್ ಮಂಡಿ ಹಮಾಲರ ಸಂಘ ದ ಅಧ್ಯಕ್ಷರಾದ ಮೂರ್ತಿ, ಕಾರ್ಯದರ್ಶಿ ಕುಮರೇಷನ್, ಉಪಾಧ್ಯಕ್ಷ ವೇಲು ಮುರುಗನ್, ಮಹಿಳಾ ಹಮಾಲಿ ಕಾರ್ಮಿಕರ ನಾಯಕಿ ತಂಗಮ್ಮ, ಮುಖಂಡ, ಕಟ್ಟಡ ಕಾರ್ಮಿಕ ಸಂಘಟನೆ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ವೀರಮಣಿ, ಜಿಲ್ಲಾ ಮುಖಂಡರಾದ ಹರೀಶ್, ದಲಿತ ಹಕ್ಕುಗಳ ಹೋರಾಟ ಸಮಿತಿ ಮುಖಂಡ ಶರಣಪ್ಪ ಕರ್ನಾಟಕ ಜನಶಕ್ತಿಯ ರವಿ ಮೋಹನ್ ಮುಂತಾದವರು ವಹಿಸಿದ್ದರು.

ರೈತರ ನಿರಂತರ ಪ್ರತಿಭಟನೆಗೆ ವಕೀಲರ ಸಾತ್

ಒಂಬತ್ತನೇ ದಿನ, ರಾಜ್ಯ ಕಬ್ಬು ಬೆಳೆಗಾರರ ಸಂಘ ಕರ್ನಾಟಕ ದ ಕಾರ್ಯಕರ್ತರು ಭಾಗವಹಿಸಿದ್ದ ಇಂದಿನ ಧರಣಿಯನ್ನು ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್ ರವರು ಉದ್ಘಾಟಿಸಿ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ವಿವರವಾಗಿ ರೈತರ ಜೊತೆ ಚರ್ಚಿಸಿ ಜಾರಿಗೆ ತರಲಾಗಿದೆ ಎಂದು ಸುಳ್ಳು ಹೇಳುತ್ತಿದೆ. ಸ್ವತಃ ಆ ಪಕ್ಷದ ರೈತ ಸಂಘವೇ ವಿರೋಧಿಸುತ್ತಿರುವುದನ್ನು ಮರೆ ಮಾಚಿ ಕಾರ್ಪೊರೇಟ್ ಕಂಪನಿಗಳ ಪಕ್ಷಪಾತದ ಕಾನೂನನ್ನು ರೈತರ ಹೆಸರಿನಲ್ಲಿ ಜಾರಿಗೆ ಎಲ್ಲಾ ರೀತಿಯ ಪ್ರಯತ್ನ ನಡೆಸುತ್ತಿದೆ.ಇದೊಂದು ಸುಳ್ಳಿನ ಸರ್ಕಾರ ಎಂದು ವಾಗ್ದಾಳಿ ನಡೆಸಿದರು.

ಪ್ರತಿಭಟನಾ ಧರಣಿಗೆ ಆಗಮಿಸಿದ ಅಖಿಲ ಭಾರತ ವಕೀಲರ ಸಂಘ (ಎಐಎಲ್‌ಯು) ಕರ್ನಾಟಕ ರಾಜ್ಯ ಸಮಿತಿ ಉಪಾಧ್ಯಕ್ಷ ವಕೀಲ ಹರೀಂದ್ರ ನೇತೃತ್ವದ ವಕೀಲರ ನಿಯೋಗ ಧರಣಿ ನಿರತರನ್ನು ಉದ್ದೇಶಿಸಿ ಮಾತಾನಾಡಿ ಕೃಷಿ ಕಾಯ್ದೆಗಳು ರೈತ ವಿರೋಧಿ ಮಾತ್ರವಲ್ಲ ಸಂವಿಧಾನ ವಿರೋಧಿಯೂ ಆಗಿದೆ ಎಂದು ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು. ಇದೇ ವೇಳೆ ರೈತರ ಹೋರಾಟಕ್ಕೆ ಎಐಎಲ್ ಯು ರಾಜ್ಯ ಸಮಿತಿಯಿಂದ 17,500 ರೂ. ಹೋರಾಟದ ದೇಣಿಗೆ ನೀಡಿದರು.

ಪ್ರತಿಭಟನಾ ಧರಣಿ ನೇತೃತ್ವವನ್ನು ಕಬ್ಬು ಬೆಳೆಗಾರರ ಸಂಘದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ವೀರಣ್ಣಗೌಡ, ರಾಜ್ಯ ಸಂಚಾಲಕ ದೇವ್ ಕುಮಾರ್, ಮುಖಂಡರಾದ ಅತ್ತಹಳ್ಳಿ ದೇವರಾಜ್, ಭಾಗ್ಯರಾಜ್ ಎಐಎಲ್‌ಯು ದಕ್ಷಿಣ ಭಾರತದ ಸಂಚಾಲಕರಾದ ಹೆಚ್.ವಿ. ರಾಮಚಂದ್ರಾರೆಡ್ಡಿ, ಎಐಎಲ್‌ಯು ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಟಿ.ಎನ್. ಶಿವಾರೆಡ್ಡಿ, ಖಜಾಂಚಿ ಕೆ. ವೆಂಕಟರಮಣ (ಬಾಬು), ಶಿವಶಂಕರಪ್ಪ, ಶರಣಬಸವ ಮರದ, ರವಿ, ರಮೇಶ್, ಎಐಎಲ್‌ಯು ಹೊಸಕೋಟೆ ಮುಖಂಡರಾದ ನಾಗರಾಜ, ರವಿಕುಮಾರ, ಸಿಐಟಿಯು ರಾಜ್ಯ ಸಮಿತಿ ಸದಸ್ಯೆ ಸಿ. ಕುಮಾರಿ, ಅಖಂಡ ಕರ್ನಾಟಕ ರೈತ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಸುಧೀರ್ ಕುಮಾರ್, ಕರ್ನಾಟಕ ಜನಶಕ್ತಿ ಸಂಘಟನೆಯ ಸಿರಿಮನೆ ನಾಗರಾಜ್, ಜೆಸಿಟಿಯು ರಾಜ್ಯ ಸಂಚಾಲಕ ಕೆ.ವಿ. ಭಟ್, ಆರ್‌ಕೆಎಸ್ ನ ದಿವಾಕರ್, ಎಐಸಿಸಿಟಿಯು ನ ಮಣಿ, ಕೆಪಿಆರ್‌ಎಸ್ ನ ಟಿ. ಯಶವಂತ ಮುಂತಾದವರು ವಹಿಸಿದ್ದರು.

ರಾಜ್ಯ ಮಟ್ಟದ ಅನಿರ್ದಿಷ್ಟಾವಧಿ ಧರಣಿ ಹತ್ತನೇ ದಿನ

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದ, ಧರಣಿಯಲ್ಲಿ ಈ ಜಂಟಿ ಸಮಿತಿ ಭಾಗವಾಗಿರುವ CITU, INTUC, AIUTUC, HMS, NCL, AICCTU, UTUC ಸೇರಿದಂತೆ ಹಲವು ಕೇಂದ್ರ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ಈ ಧರಣಿಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್ ಮಾತಾನಾಡಿ, ಕೇಂದ್ರದ ಮೋದಿ ಸರ್ಕಾರ ದೇಶದ ರಾಜಧಾನಿ ಗೆ ರೈತರು ಬರದಂತೆ ತಡೆಯಲು ಎಲ್ಲಾ ಪ್ರಯತ್ನಗಳನ್ನು ನಡೆಸಿದರೂ ಆ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸಿ ಕಳೆದ ಮೂವತ್ತು ದಿನದಿಂದ ಲಕ್ಷಾಂತರ ರೈತರು ಪ್ರತಿಭಟಿಸುತ್ತಿದ್ದಾರೆ. ಈ ಪ್ರತಿರೋಧ ಈಗಾಗಲೇ ಇತಿಹಾಸ ನಿರ್ಮಿಸಿದ್ದು ಇದಕ್ಕೆ ದೇಶವ್ಯಾಪಿ ಎಲ್ಲಾ ಜನ ವಿಭಾಗಗಳಿಂದ ಬೆಂಬಲ ಸಿಗುತ್ತಿದ್ದು ಈ ಹೋರಾಟ ಜಯಗಳಿಸುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತ್ರಿವಳಿ ತಲಾಖ್ ನಿಷೇಧಿಸಿ ದೊಡ್ಡ ಪ್ರಚಾರ ಮಾಡಿಕೊಂಡ ಪ್ರಧಾನಿ ಮೋದಿ ಈಗ ಈ ತ್ರಿವಳಿ ಕೃಷಿ ಕಾನೂನುಗಳ ಮೂಲಕ ಇಡೀ ಕೃಷಿಯಿಂದ ರೈತರಿಗೆ ತಲಾಖ್ ಕೊಡಿಸುತ್ತಿದೆ. ಇದು ಕಾರ್ಪೊರೇಟ್ ಪರ ಇರುವ ಕಾನೂನು ಇದರಿಂದ ದುಡಿಯುವ ಜನರನ್ನು ದಿವಾಳಿಯಾಗುತ್ತಾರೆ. ಸಂಸತ್ತಿನಲ್ಲಿ ಇರುವ ಬಹುಮತವನ್ನು ದುರುಪಯೋಗ ಮಾಡಿಕೊಂಡು ಜನ ದ್ರೋಹಿ ಕಾನೂನು ಅಂಗೀಕರಿಸಿದ್ದರೂ ಬೀದಿಯಲ್ಲಿ ನಡೆಯುವ ಜನ ಹೋರಾಟದಲ್ಲಿ ತಿರಸ್ಕರಿಸಲಾಗಿದೆ ಎಂದರು.

ಟಿಯುಸಿಸಿ ರಾಷ್ಟ್ರೀಯ ನಾಯಕ ಜಿ ಆರ್ ಶಿವಶಂಕರ್, INTUC ಮುಖಂಡ ಶಾಮಣ್ಣರೆಡ್ಡಿ, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾದ ಕುರುಬೂರು ಶಾಂತಕುಮಾರ್ ರವರು ಕೂಡ ಧರಣಿ ಉದ್ದೇಶಿಸಿ ಮಾತಾನಾಡಿದರು.

ಪ್ರತಿಭಟನಾ ಧರಣಿಯ ನೇತೃತ್ವವನ್ನು JCTU ರಾಜ್ಯ ಸಂಚಾಲಕ ಕೆ.ವಿ.ಭಟ್, INTUC ರಾಜ್ಯ ಅಧ್ಯಕ್ಷ ಪ್ರಕಾಶ್, HMS ನ ನಾಯಕ ನಾಗನಾಥನ್, AICCTU ಅಪ್ಪಣ್ಣ ಹಾಗೂ ಮಣಿ, ಕಟ್ಟಡ ಕಾರ್ಮಿಕರ ಸಂಘಟನೆ ರಾಜ್ಯ ಅಧ್ಯಕ್ಷ ಕೆ. ಮಹಾಂತೇಶ್, ಸಿಐಟಿಯು ರಾಜ್ಯ ಉಪಾಧ್ಯಕ್ಷೆ ಲೀಲಾವತಿ, AIUTUC ಯ ಷಣ್ಮುಖ, NCL ನ ಲೀಲಾವತಿ, RKS ನ ದಿವಾಕರ್, ಕೆಪಿಆರ್‌ಎಸ್ ಟಿ. ಯಶವಂತ, ಕರ್ನಾಟಕ ಜನಶಕ್ತಿ ಯ ಸಿರಿಮನೆ ನಾಗರಾಜ್, ಕಬ್ಬು ಬೆಳೆಗಾರರ ಸಂಘದ ಅತ್ತಹಳ್ಳಿ ದೇವರಾಜ್ ಮುಂತಾದವರು ವಹಿಸಿದ್ದರು. ■



4ನೇ ದಿನದ ಧರಣಿ



5ನೇ ದಿನದ ಧರಣಿ

JANASHAKTHI KANNADA VARA PATRIKE December 28, 2020-January 3, 2021 Price: Rs. 10/- Date of Publication: 25 December 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21


ಹತ್ತನೇ ದಿನದ ಧರಣಿ


ಆರನೇ ದಿನದ ಧರಣಿ


ಏಳನೇ ದಿನದ ಧರಣಿ

10 ನೇ ದಿನಕ್ಕೆ ಕಾಲಿಟ್ಟ ನಿರಂತರ ಧರಣಿ

ಐದನೇ ದಿನದ ಧರಣಿಗೆ ಸಾತ್ ನೀಡಿದ ವಿದ್ಯಾರ್ಥಿಗಳು

ಕೃಷಿ ಮಸೂದೆಗಳನ್ನು ವಿರೋಧಿಸಿ ದೆಹಲಿಯಲ್ಲಿ ನಡೆಯುತ್ತಿರುವ ರೈತರ ಐತಿಹಾಸಿಕ ಹೋರಾಟವನ್ನು ಬೆಂಬಲಿಸಿ ಬೆಂಗಳೂರಿನ ಮೌರ್ಯ ವೃತ್ತದಲ್ಲಿ ನಡೆಯುತ್ತಿರುವ ಧರಣಿ 5 ನೇ ದಿನದ ಧರಣಿಯಲ್ಲಿ ಎಡ ವಿದ್ಯಾರ್ಥಿ-ಯುವಜನ ಸಂಘಟನೆಗಳು ಬೆಂಬಲ ನೀಡಿದ್ದು ವಿಶೇಷವಾಗಿತ್ತು.

ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಕೆ. ವಾಸುದೇವರೆಡ್ಡಿ ಮಾತನಾಡುತ್ತಾ, ಈ ಕೃಷಿ ಮಸೂದೆಗಳು ರೈತರ ಪಾಲಿಗೆ ಮರಣ ಶಾಸನಗಳಾಗಿವೆ. ದೆಹಲಿಯಲ್ಲಿ 24 ದಿನಗಳಿಂದ ರೈತರು ಧರಣಿ ನಡೆಸುತ್ತಿದ್ದಾರೆ. ಮೋದಿ ಸರಕಾರ ರೈತರ ಜೊತೆ ಮಾತನಾಡದೆ ಕಾಲಹರಣ ಮಾಡುತ್ತಿದೆ. ಅನ್ನದಾತನನ್ನು ಬೀದಿಗೆ ತಂದ ಮೋದಿ ಸರಕಾರಕ್ಕೆ ವಿದ್ಯಾರ್ಥಿಗಳು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಕರೆ ನೀಡಿದರು.

ಎಐಡಿಎಸ್‌ಓ ನ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ಎಐಎಸ್‌ಎಫ್‌ಐ ರಾಜ್ಯಾಧ್ಯಕ್ಷೆ ಜ್ಯೋತಿ, ಕೆವಿಎಸ್ ರಾಜ್ಯ ಸಮಿತಿ ಸದಸ್ಯೆ ಪುಷ್ಪ ಧರಣಿ ಉದ್ದೇಶಿಸಿ ಮಾತನಾಡಿದರು. ಧರಣಿಯಲ್ಲಿ ಎಐವೈಎಫ್ ನ ಹರೀಶ್ ವಿದ್ಯಾರ್ಥಿ ಮುಖಂಡರಾದ ಸೀತಾರಾ, ಗಾಯತ್ರಿ, ಸಾಗರ, ಸಂಗಮೇಶ್, ಬೆಂಗಳೂರು ಸುತ್ತಮುತ್ತ ವಾಸವಾಗಿರುವ ಪಂಜಾಬ್ ನ ರೈತರ ಮಕ್ಕಳು ಸೇರಿದಂತೆ ನೂರಕ್ಕು ಹೆಚ್ಚು ಜನ ಇದ್ದರು. ಧರಣಿ ಆರಂಭಕ್ಕೂ ಮುನ್ನ ದೆಹಲಿ ಹೋರಾಟದಲ್ಲಿ ಹುತಾತ್ಮರಾದ 30 ಕ್ಕೂ ಹೆಚ್ಚು ರೈತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.



9ನೇ ದಿನದ ಧರಣಿ


5ನೇ ದಿನದ ಧರಣಿ

ಕೇಂದ್ರ ಸರ್ಕಾರದಿಂದ ಭಾರತದ ಆಹಾರ ಭದ್ರತೆ ಮೇಲೆ ದಾಳಿ – ದೇವನೂರು ಮಹದೇವ

ಆರನೇ ದಿನ, ಕರ್ನಾಟಕ ಜನಶಕ್ತಿ ಸಂಘಟನೆಯ ಕಾರ್ಯಕರ್ತರು ಭಾಗವಹಿಸಿದ್ದ ಧರಣಿಯಲ್ಲಿ ಹಿರಿಯ ಸಾಹಿತಿ ದೇವನೂರು ಮಹಾದೇವ, ಚಿಂತಕ ಶಿವಸುಂದರ್, ಲೇಖಕ ಶ್ರೀಪಾದಭಟ್, ಸಿರಿಮನೆ ನಾಗರಾಜ್, ಹೋರಾಟಗಾರ್ತಿ ಅರಳಾಳುಸಂದ್ರ ಅನುಸೂಯಮ್ಮ ಮುಂತಾದವರು ಭಾಗವಹಿಸಿ ಮಾತಾನಾಡಿದರು.

ಪ್ರತಿಭಟನೆ ಉದ್ಘಾಟಿಸಿ ಮಾತಾನಾಡಿದ ಹಿರಿಯ ಸಾಹಿತಿ ದೇವನೂರು ಮಹಾದೇವ ರವರು ಕೋವಿಡ್ ಸಾಂಕ್ರಾಮಿಕದ ಈ ದಯಾನೀಯ, ಧಾರುಣ ಕಾಲಮಾನದಲ್ಲಿ ಯಾರೂ ಉಸಿರೆತ್ತುವುದಿಲ್ಲ, ಇದೇ ಸರಿಯಾದ ಕಾಲ ಎಂದು ಈ ಕೃಷಿ ಕಾನೂನುಗಳನ್ನು ಜಾರಿಗೆ ತರಲು ಹೊರಟಿದೆ. ಇದು ಕ್ರೌರ್ಯದ ಪರಮಾವದಿ. ಇದು ಸಂವಿಧಾನ, ಪ್ರಜಾಪ್ರಭುತ್ವ, ಭಾರತದ ಒಕ್ಕೂಟದ ಸ್ವರೂಪದ ಮೇಲೆ ಅಂದರೆ ಭಾರತ ಸ್ವಾತಂತ್ರ್ಯ ಪಡೆದ ಕನಸಿನ ಮೇಲೆ ನಡೆದ ದಾಳಿಯಾಗಿದೆ. ಅಂದರೆ ಇದು ಎಲ್ಲಾ ಪ್ರಜೆಗಳ ಮೇಲೆ ನಡೆಸಿದ ದಾಳಿಯಾಗಿದೆ ಎಂದು ಅಭಿಪ್ರಾಯ ಪಟ್ಟರು.

ಕೇಂದ್ರ ಸರ್ಕಾರ ಭಾರತದ ಆಹಾರ ಭದ್ರತೆ ಮೇಲೂ ದಾಳಿ ನಡೆಸುತ್ತಿದೆ. ಕೇಂದ್ರ ಸರ್ಕಾರ ನೇಮಿಸಿದ್ದ ಶಾಂತರಾಂ ಕಮಿಟಿಯು ಈಗ ಆಹಾರ ಭದ್ರತೆಯ ಕಾನೂನು ಮುಖಾಂತರ ಶೇಕಡಾ 67 ರಷ್ಟು ನೀಡಲಾಗುತ್ತಿದ್ದ ಆಹಾರ ಪಡಿತರವನ್ನು ಶೇಕಡ 40ಕ್ಕೆ ಇಳಿಸಬೇಕು ಎಂದು ಶಿಫಾರುಸ್ಸು ಮಾಡಿದೆ. ಹಾಗಾಗಿಯೇ ಕೃಷಿಯ ಕತ್ತು ಹಿಸುಕುವ ಈ ಕಾನೂನುಗಳು ಬಂದಿವೆ. ಬಡತನದ, ಹಸಿವಿನ, ಅಪೌಷ್ಠಿಕತೆಯ, ರಕ್ತಹೀನತೆಯ ಅಭಿವೃದ್ದಿ ಮಾಡಿದ್ದು ಸಾಕು, ನಿಲ್ಲಿಸಿ ಎಂದು ಹೇಳಬೇಕು. ಬೆಲೆ ಏರಿಕೆಗೆ ಕಾರಣವಾಗುವ, ಕೃಷಿ ಆಧಾರ ಕಿತ್ತು ಗ್ರಾಮೀಣ ಸಮುದಾಯ ಬೇರುಕಿತ್ತುಕೊಂಡು ನಗರಕ್ಕೆ ಜೋತು ಬೀಳುವ, ಸ್ಲಂ ಹೆಚ್ಚು ಮಾಡುವ ಸ್ಲಂ ಭಾರತ ನಮಗೆ ಬೇಡ ಎಂದು ಹೇಳಬೇಕು. ಆದರೆ ಮೋದಿ-ಶಾ ರವರು ಕೇಳಿಸಿಕೊಳ್ಳುತ್ತಿಲ್ಲ. ತಮ್ಮ ಭ್ರಮೆ ಮತ್ತು ಸುಳ್ಳುಗಳಲ್ಲಿ ತಾವೇ ಹೂತು ಹೋಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವವನ್ನು ಕರ್ನಾಟಕ ಜನಶಕ್ತಿ ಸಂಘಟನೆಯ ರಾಜ್ಯ ಅಧ್ಯಕ್ಷರಾದ ನೂರ್ ಶ್ರೀಧರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕುಮಾರ್ ಸಮತಳ, ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಜಿ.ಎಂ. ವೀರಸಂಗಯ್ಯ, ಕಾರ್ಯದರ್ಶಿ ಗೋಪಾಲ್, ಕೆಪಿಆರ್‌ಎಸ್ ರಾಜ್ಯ ಸಹ ಕಾರ್ಯದರ್ಶಿ ಪಿ.ಆರ್. ಸೂರ್ಯನಾರಾಯಣ, ರಾಜ್ಯ ಸಮಿತಿ ಸದಸ್ಯ ಟಿ. ಯಶವಂತ, ಎಐಯುಟಿಯುಸಿ ರಾಜ್ಯ ಮುಖಂಡ ಕೆ.ವಿ. ಭಟ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್ ಸಮಾಜವಾದಿ ಸಭಾದ ಆಲಿಬಾಬಾ ಮುಂತಾದವರು ವಹಿಸಿದ್ದರು.


9ನೇ ದಿನದ ಧರಣಿ


4ನೇ ದಿನದ ಧರಣಿ


8ನೇ ದಿನದ ಧರಣಿ

ಅನಿರ್ದಿಷ್ಟ ಹೋರಾಟ 7ನೇ ದಿನ

ಅನ್ನದಾತರ ಹೋರಾಟವನ್ನು ಬೆಂಬಲಿಸಿ ರಾಜ್ಯದ ಹಲವಾರು ಮಹಿಳಾ ಸಂಘಟನೆಗಳ ಕರೆಯ ಮೇಲೆ ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲಿ ಪ್ರತಿಭಟನಾ ಧರಣಿ ನಡೆಸಿತ್ತು.

ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ವಸುಂಧರಾ ಭೂಪತಿಯವರು ಧರಣಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ಈ ಹೊಸ ಕೃಷಿ ಮಸೂದೆಗಳು ಜನವಿರೋಧಿ, ರೈತವಿರೋಧಿ, ಮಹಿಳಾ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ, ಹಾಗೂ ಸಂವಿಧಾನ ವಿರೋಧಿಯಾಗಿದೆ ಹಾಗಾಗಿ ಈ ಕಾಯ್ದೆಗಳನ್ನು ರದ್ದುಪಡಿಸಬೇಕು. ಈ ಮಸೂದೆಗಳಿಂದ ರೈತರಿಗೆ ತೊಂದರೆಯಾಗಲಿದ್ದು, ಅವರು ಹೇಳಿದ ಜೀಜ ಬಿತ್ತನೆ, ಗೊಬ್ಬರ, ಜೌಷಧಿ ಖರೀದಿ ಹೀಗೆ ಅವರು ಹೇಳಿದಂತೆ ರೈತರು ಕೇಳಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಈಗಾಗಲೇ ಅಮೇರಿಕದಲ್ಲಿ ಅಮೇಜಾನ್ ಕಂಪನಿ ಭೂಮಿ ಕಬಳಿಸಿದಂತೆ ಮುದೊಂದು ದಿನ ಮುಂಡಗ ಹಣ ಪಡೆದ ರೈತು ತಮ್ಮ ಭೂಮಿಯನ್ನು ಕಳೆದುಕೊಳ್ಳಬೇಕಾದ ಸಂರ್ಭಗಳು ಉಂಟಾಗುತ್ತವೆ. ಆದ್ದರಿಂದ ಈ ಪರಿಸ್ಥಿತಿ ನಮ್ಮ ದೇಶದ ರೈತರಿಗೆ ಬರುವುದು ಬೇಡ ಎಂದು ಅವರು ಹೇಳಿದರು.

ರೈತ ಹೋರಾಟವನ್ನು ಬೆಂಬಲಿಸಿ ರಾಜ್ಯದ ಹಲವಾರು ಮಹಿಳಾ ಸಂಘಟನೆಗಳ ಭಾಗವಹಿಸಿದ್ದು, ಮೂರು ಕರಾಳ ಕೃಷಿ ಮಸೂದೆಗಳನ್ನು ಹಿಂದಕ್ಕೆ ಪಡೆಯಬೇಕೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಒಕ್ಕೊರಲಿನಿಂದ ಒತ್ತಾಯಿಸಿದರು.

ಈ ಪ್ರತಿಭಟನಾ ಧರಣಿಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷರಾದ ವಿಮಲಾ ಕೆ., ಕೆ.ಎಸ್. ಲಕ್ಷ್ಮಿ, ಕಾರ್ಯದರ್ಶಿ ಗೌರಮ್ಮ, ಸಾಹಿತಿ ಕೆ. ಶರೀಫಾ, ಎನ್.ಎಫ್.ಡಬ್ಲ್ಯೂ.ಐ, ಎಐಎಂಎಸ್‌ಎ, ಎಐಪಿಡಬ್ಲ್ಯೂಎ ಸಂಘಟನೆಯ ನೂರಕ್ಕು ಹೆಚ್ಚು ಜನ ಭಾಗವಹಿಸಿದ್ದರು.

ನಿರಂತರ ಧರಣಿ ಎಂಟನೇ ದಿನ

ಧರಣಿಯನ್ನು ದಲಿತ ಸಂಘರ್ಷ ಸಮಿತಿ ರಾಜ್ಯ **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**